04 March 2026 Wednesday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಮನವನ್ನು ಅರಿತ ಸಂಬಂಧಕ್ಕಿಂತ,
ಧನವನ್ನು ಅರಿತು ಬರುವ
ಸಂಬಂಧವೇ ಹೆಚ್ಚು!

-ಸ್ನೇಹಾ ಆನಂದ್

info.varthaman@gmail.com


ಗ್ರಹಣ ಮನುಷ್ಯನ ಮೇಲೆ ಪರಿಣಾಮ ಬೀರದು: ಎಲ್.ಎನ್.ಮುಕುಂದರಾಜ್ — ಪುಟ ಸಂ. 2


ನಾಳೆ ರಾಮನಗರ ನಗರಸಭೆ ಬಜೆಟ್: ನಗರ ಸಭಾಧ್ಯಕ್ಷ ಕೆ.ಶೇಷಾದ್ರಿ — ಪುಟ ಸಂ. 3


ಜಗದ್ಗುರು ರೇಣುಕಾ ಚಾರ್ಯರ ಜಯಂತಿ ಯುಗಮಾನೋತ್ಸವ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್
VARTHAMAN | Volume: 69 | Issue: 113 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಹೋರ್ಮುಜ್ ಜಲಸಂಧಿ ನಿರ್ಬಂಧ: ಜಾಗತಿಕ ತೈಲ, ಗ್ಯಾಸ್ ಬೆಲೆ ಏರಿಕೆ

**ಫ್ರಾಂಕ್‌ಫರ್ಟ್:** ಇರಾನ್ ಸೇರಿದಂತೆ ಕೊಲ್ಲಿ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಹೋರ್ಮುಜ್ ಜಲಸಂಧಿ ಪ್ರವೇಶವನ್ನೂ ನಿರ್ಬಂಧಿಸಿರುವುದು ಜಾಗತಿಕ ತೈಲ ಬೆಲೆ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ.



ಹೋರ್ಮುಜ್ ಜಲಸಂಧಿಯ ಮೂಲಕ ಜಗತ್ತಿನ 20ರಷ್ಟು ತೈಲ ಸಾಗಣೆಯಾಗುತ್ತಿತ್ತು. ಆದರೆ ಅಲ್ಲಿ ಸಾಗುತ್ತಿದ್ದ ಹಡಗುಗಳ ಮೇಲಿನ ದಾಳಿ ಮುಂದುವರೆದಿರುವ ಕಾರಣ ಪೂರೈಕೆಗೆ ಅಡಚಣೆಯಾಗಿದೆ. ಇದರಿಂದ ಬೇಡಿಕೆ ಹೆಚ್ಚಿ, ದರದಲ್ಲೂ ಏರಿಕೆಯಾಗಿದೆ. ಪುಟ 2ಕ್ಕೆ

### 165 ಬಾಲಕಿಯರು ಸಾವು

**ಟೆಹರಾನ್:** ಇರಾನ್ ವಿರುದ್ಧ ಅಮೆರಿಕ–ಇಸ್ರೇಲ್ ದಾಳಿಯಿಂದ ಮಧ್ಯ ಪ್ರಾಚ್ಯ ಹೊತ್ತಿ ಉರಿಯುತ್ತಿದೆ. ನೂರಾರು ಅಮಾಯಕ ಜನರು ಕ್ಷಿಪಣಿ ಹೊಡೆತಕ್ಕೆ ಬಲಿಯಾಗಿದ್ದಾರೆ. ಇರಾನ್ ನ ಮಿನಾಬ್ ನಗರದಲ್ಲಿ ಅಮೆರಿಕ– ಇಸ್ರೇಲ್ ನಡೆಸಿದ ಕ್ಷಿಪಣಿ ದಾಳಿಗೆ 165 ಶಾಲಾ ಬಾಲಕಿಯರು ಮೃತಪಟ್ಟಿದ್ದಾರೆ. ಇಂದು ಅಂತ್ಯಕ್ರಿಯೆಯಲ್ಲಿ ಜನಸಾಗರವೇ ಹರಿದುಬಂದಿತ್ತು. ಮುಗ್ದ ಶಾಲಾ ಬಾಲಕಿಯರ ದಾಳಿಗೆ ಕಾರಣರಾದ ಅಮೆರಿಕ ಹಾಗೂ ಇಸ್ರೇಲ್ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.


## ಪ್ರಜ್ವಲ್ ಅಶ್ಲೀಲ ಸಿಡಿ ಹೊರಬಿಟ್ಟಿದ್ದು ಎಚ್‌ಡಿಕೆ

### ಅಣ್ಣನ ಮಗನ ವಿರುದ್ಧ ಕುಮಾರಸ್ವಾಮಿ ಷಡ್ಯಂತ್ರ । ಕದಲೂರು ಉದಯ್ ವಾಗ್ದಾಳಿ

**ಬೆಂಗಳೂರು:** ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಜೈಲಿಗೆ ಹೋಗಲು ನೂರಕ್ಕೆ ನೂರು ಎಚ್.ಡಿ ಕುಮಾರಸ್ವಾಮಿ ಅವರೇ ಕಾರಣ. ಪ್ರಜ್ವಲ್ ರೇವಣ್ಣನ ಅಶ್ಲೀಲ ಸಿಡಿಗಳನ್ನು ಹೊರತಂದಿದ್ದೇ ಕುಮಾರಸ್ವಾಮಿ ಎಂದು ಶಾಸಕ ಕದಲೂರು ಉದಯ್ ಸ್ಫೋಟಕ ಆರೋಪ ಮಾಡಿದ್ದಾರೆ.

ಅಣ್ಣನ ಮಗ ಪ್ರಜ್ವಲ್ ರೇವಣ್ಣ ಬೆಳವಣಿಗೆಯನ್ನು ಸಹಿಸಿಕೊಳ್ಳದ ಎಚ್.ಡಿ.ಕುಮಾರಸ್ವಾಮಿ ಅವರು, ತಮ್ಮ ಮಗನನ್ನು ಬೆಳೆಸಲು ಅಣ್ಣನ ಮಗನನ್ನು ಜೈಲಿಗೆ ಹಾಕಿಸಿದರು. ಎಂತೆಂಥವರೋ ತಪ್ಪು ಮಾಡಿ ಜೈಲಿಗೆ ಹೋಗಿ ಹೊರಬಂದಿದ್ದಾರೆ. ಮನಸ್ಸು ಮಾಡಿದ್ದರೆ ದೇವೇಗೌಡರೇ ತಮ್ಮ ಮೊಮ್ಮಗನ್ನ ಜೈಲಿಂದ ಬಿಡಿಸಿ ಹೊರತರಬಹುದಿತ್ತು. ಕುಮಾರಸ್ವಾಮಿ ಷಡ್ಯಂತ್ರ ಮಾಡಿ ಪ್ರಜ್ವಲ್‌ನ ಜೈಲಿಗೆ ಹಾಕಿಸಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ತಮ್ಮ ಮಗ ನಿಖಿಲ್ ಚುನಾವಣೆಯಲ್ಲಿ ಗೆಲ್ಲಲಿಲ್ಲ ಎಂದು ಅಣ್ಣನ ಮಗನನ್ನೆ ಜೈಲಿಗೆ ಹಾಕಿಸಿದರು. ಪ್ರಜ್ವಲ್ ಸಿಡಿ ವೈರಲ್ ಮಾಡಿಸಿದ್ದೇ ಕುಮಾರಸ್ವಾಮಿ ಪುಟ 2ಕ್ಕೆ



### ತಾಕತ್ತಿದ್ದರೆ ಕೈಗಾರಿಕೆ ತನ್ನಿ

ಎಚ್.ಡಿ. ಕುಮಾರಸ್ವಾಮಿಗೆ ತಾಕತ್ತಿದ್ದರೆ ಮಂಡ್ಯಕ್ಕೆ ಕೈಗಾರಿಕೆ ತರಲಿ. ನಾನೇ 60–70 ಎಕರೆ ಜಮೀನು ಕೊಡ್ತೀನಿ. ಸರ್ಕಾರದ ಭಾಗವಾಗಿ ನಾವು ಜಾಗ ಕೊಡುತ್ತೇವೆ. ಮೊದಲು ಅವರು ಯಾವ ಕೈಗಾರಿಕೆ ತರುತ್ತಾರೆ ಅಂತಾ ಹೇಳಲಿ. ಅಭಿವೃದ್ಧಿ ಮಾಡಲು ಛಲ, ಆಸಕ್ತಿ ಬೇಕು. ರೈತರ ಪುಟ 2ಕ್ಕೆ

### ಮೊಮ್ಮಗನಿಗೂ ಜಾಗ ಮೀಸಲು

ಕುಮಾರಸ್ವಾಮಿಗೆ ತಮ್ಮ ಕುಟುಂಬ ಮಾತ್ರ ಬೆಳೆಯಬೇಕು. ಈಗ ಹುಟ್ಟಿರುವ ಮೊಮ್ಮಗನಿಗೂ ಒಂದು ಜಾಗ ಮಾಡಿಕೊಡಲು ಪ್ರಯತ್ನ ಮಾಡ್ತಿದ್ದಾರೆ. ಕುಟುಂಬದ ಎಲ್ಲರಿಗೂ ಜಾಗ ಮಾಡಿದ್ದು ಆಯ್ತು. ಬೇರೆ ಯಾರು ಇವರ ಮುಂದೆ ಬೆಳೆಯಬಾರದು ಅಂತ ರಾಜಕೀಯ ಮಾಡ್ತಾರೆ. ಇವರ ಜೊತೆ ಇದ್ದ ಬಚ್ಚೇಗೌಡ, ನಾಗೇಗೌಡ, ಸಿದ್ದರಾಜು ಅವರನ್ನು ಬೆಳೆಯಲು ಬಿಡದೇ ಮುಗಿಸಿದರು ಎಂದು ಶಾಸಕ ಕದಲೂರು ಉದಯ್ ವಾಗ್ದಾಳಿ ನಡೆಸಿದರು.

2004ರಲ್ಲಿ ಡಬ್ಬಲ್ ಬಿ ಫಾಂ ಕೊಟ್ಟು ಸಿದ್ದರಾಜುನ ಮನೆಲಿ ಕೂರಿಸಿದರು. ಇದು ಮದ್ದೂರು ಜನರಿಗೆ ಗೊತ್ತಿದೆ. 2008ರಲ್ಲಿ ಇವರು ಹೇಗೆ ಮ್ಯಾಚ್ ಫಿಕ್ಸಿಂಗ್ ಮಾಡಿಕೊಂಡರು ಅಂತ ಪುಟ 2ಕ್ಕೆ

# ಎಚ್‌ಡಿಕೆಗೆ ತಂದೆಯಿಂದಲೇ ಗೂಢಚರ್ಯೆ ಪಾಠ!

### ಆದಿಚುಂಚನಗಿರಿ ಶ್ರೀ ಫೋನ್ ಕದ್ದಾಲಿಸಿದ್ದ ಕುಮಾರಸ್ವಾಮಿ: ಸಿದ್ದರಾಮಯ್ಯ ತಿರುಗೇಟು

**ಬೆಂಗಳೂರು:** ಎಚ್.ಡಿ.ಕುಮಾರಸ್ವಾಮಿ ಅವರಿಗೆ ಗೂಢಚರ್ಯೆ ಪಾಠವನ್ನು ಅವರ ಪೂಜ್ಯ ತಂದೆಯವರೇ ಹೇಳಿಕೊಟ್ಟಿರಬಹುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಲೇವಡಿ ಮಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಎಚ್.ಡಿ. ಕುಮಾರಸ್ವಾಮಿ ಫೋನ್ ಕದ್ದಾಲಿಕೆ ಆರೋಪ ಮಾಡಿದ್ದರು. ಇದಕ್ಕೆ ಮಾಧ್ಯಮ ಹೇಳಿಕೆ ಮೂಲಕ ಸಿದ್ದರಾಮಯ್ಯ ಅವರು ಟಾಂಗ್ ಕೊಟ್ಟಿದ್ದಾರೆ. ತನ್ನನ್ನು ಪ್ರಧಾನಿ ಮಾಡಿದ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ಸೀತಾರಾಂ ಕೇಸರಿ ವಿರುದ್ಧವೇ ದೇವೇಗೌಡ ಅವರು ಗೂಢಚರ್ಯೆ ಮಾಡಿದ್ದರು. ಆ ಕಾರಣಕ್ಕೆ ಕಾಂಗ್ರೆಸ್ ಪಕ್ಷ ತನ್ನ ಬೆಂಬಲವನ್ನು ಹಿಂದೆಗೆದುಕೊಂಡಿರುವುದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಈ ಅಪನಂಬಿಕೆ ಮತ್ತು ಸಣ್ಣತನಗಳಿಂದ ಕನ್ನಡಿಗರೊಬ್ಬರು ಇನ್ನಷ್ಟು ಕಾಲ ಪ್ರಧಾನಿ ಆಗುವ ಅವಕಾಶ ತಪ್ಪಿಹೋಯಿತು ಎನ್ನುವುದು ವಿಷಾದನೀಯ ವಾಸ್ತವ ಎಂದು ದೇವೇಗೌಡರ ಕುಟುಂಬದ ವಿರುದ್ಧ ಕಿಡಿಕಾರಿದ್ದಾರೆ.

2004ರಿಂದ 2013ರ ವರೆಗಿನ ಒಂಬತ್ತು ವರ್ಷಗಳ ಅವಧಿಯಲ್ಲಿ ರಾಜ್ಯ ಐದು ಮುಖ್ಯಮಂತ್ರಿಗಳನ್ನು ಕಂಡಿದೆ. 2018ರಿಂದ 2023ರ 5 ವರ್ಷಗಳ ಅವಧಿಯಲ್ಲಿ ಮೂರು ಮುಖ್ಯಮಂತ್ರಿಗಳನ್ನ ಕಾಣುವಂತಾಗಿದೆ. ಇವರೊಳಗಿನ ಪರಸ್ಪರ ಅಪನಂಬಿಕೆ, ದ್ವೇಷ, ಅಸೂಯೆ, ಬೆನ್ನಿಗೆ ಚೂರಿ ಹಾಕುವ ಕುತಂತ್ರಗಳೇ ಇದಕ್ಕೆ ಕಾರಣ ಎಂದು ಕುಟುಕಿದರು.

ಎಚ್‌ಡಿಕೆ 2018ರಲ್ಲಿ ಸಿಎಂ ಆಗಿದ್ದಾಗ ಆದಿಚುಂಚನಗಿರಿ ಶ್ರೀಗಳ ಫೋನನ್ನೇ ಕದ್ದಾಲಿಸಿದ್ದಾರೆಂದು ಈಗಿನ ರಾಜಕೀಯ ಸಂಗಾತಿ ಬಿ.ವೈ ವಿಜಯೇಂದ್ರ ಅವರೇ ಆರೋಪ ಮಾಡಿದ್ದರು. ಇದರ ಬಗ್ಗೆ ತನಿಖೆ ಮಾಡಿದ್ದ ಸಿಬಿಐ, ಒಬ್ಬ ಸ್ವಾಮೀಜಿಗಳದ್ದಷ್ಟೇ ಅಲ್ಲ, ಬದಲಿಗೆ ಏಳು ಸ್ವಾಮೀಜಿಗಳ ಫೋನ್ ಕದ್ದಾಲಿಕೆ ಪುಟ 2ಕ್ಕೆ



### ತಾನು ಕಳ್ಳ ಪರರನ್ನು ನಂಬ: ಎಚ್‌ಡಿಕೆ

**ಬೆಂಗಳೂರು:** ಡಿ.ಕೆ.ಶಿವಕುಮಾರ್ ಹಾಗೂ ನನ್ನದು ಹಾಲು– ಜೇನಿನಂತಹ ಸಂಬಂಧ. ಯಾರಿಗೂ ಹುಳಿ ಹಿಂಡೋಕಾಗಲ್ಲ. ಕಾಂಗ್ರೆಸ್ ಪಕ್ಷದದವರೇ ಸಿಎಂ ಆಗಿರುತ್ತಾರೆಂದು ಎಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಸಿಎಂ ಸಿದ್ದರಾಮಯ್ಯ ತಿರುಗೇಟು ನೀಡಿದ್ದಾರೆ.

ಡಿಕೆಶಿ ಬಣದ ಮೇಲೆ ಕಣ್ಣಿಡಲು ಸಿಎಂ ಫೋನ್ ಕದ್ದಾಲಿಕೆ ಮಾಡುತ್ತಿದ್ದಾರೆಂಬ ಎಚ್‌ಡಿಕೆ ಆರೋಪಕ್ಕೆ ಸಿಎಂ ಸಿದ್ದರಾಮಯ್ಯ ಹೇಳಿಕೆ ನೀಡಿ ತಿರುಗೇಟು ನೀಡಿದ್ದಾರೆ. ಆರ್.ಅಶೋಕ್ ಮತ್ತು ಎಚ್‌ಡಿಕೆ ಹೇಳಿಕೆ ಉಲ್ಲೇಖಿಸಿರುವ ಅವರು, ತಾನು ಕಳ್ಳ ಇತರರ ನಂಬ ಎಂಬ ಗಾದೆಯಂತೆ, ಇದೊಂದು ಅತೃಪ್ತ ಆತ್ಮಗಳ ಹತಾಶ ಹೇಳಿಕೆ. ಆರೋಪ ಮಾಡಿರುವ ಒಬ್ಬರು ರಾಜ್ಯದ ಮುಖ್ಯಮಂತ್ರಿ ಪುಟ 2ಕ್ಕೆ

## ಮಾ.10ಕ್ಕೆ ಡಿಕೆಶಿ ಡಿನ್ನರ್ ಪಾರ್ಟಿ: ಮತ್ತೆ ಗರಿಗೆದರಿದ ರಾಜಕೀಯ



**ಬೆಂಗಳೂರು:** ಡಿ.ಕೆ.ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಾಗಿ ಆರು ವರ್ಷವನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಮಾರ್ಚ್ 10ರಂದು ಕಾಂಗ್ರೆಸ್ ಪಕ್ಷದ ಶಾಸಕರು, ಸಚಿವರು ಸೇರಿದಂತೆ ನಾಯಕರಿಗೆ ಡಿನ್ನರ್ ಪಾರ್ಟಿ ಆಯೋಜಿಸಿದ್ದಾರೆ. ಬಜೆಟ್ ಅಧಿವೇಶನದ ನಡುವೆಯೇ ಪಾರ್ಟಿ ಕೊಡುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ರಾಜಕೀಯ ವಲಯದಲ್ಲಿ ಕುತೂಹಲ ಸೃಷ್ಟಿಯಾಗಿದೆ.

ಮುಖ್ಯಮಂತ್ರಿ ಕುರ್ಚಿಯ ಮೇಲೆ ಕಣ್ಣಿಟ್ಟಿರುವ ಡಿಕೆಶಿ ಅವರು, ಶಾಸಕರ ಒಲವುಗಳಿಸಲು ಪಾರ್ಟಿ ಆಯೋಜಿಸಿದ್ದಾರೆ. ಅಲ್ಲದೆ, ಇದರಲ್ಲಿ ಬಣ ರಾಜಕೀಯದ ಬದಲಿಗೆ ಎಲ್ಲರನ್ನೂ ವಿಶ್ವಾಸಕ್ಕೆ ಪಡೆಯಲು ಮುಂದಾಗಿದ್ದಾರೆ ಎನ್ನಲಾಗಿದೆ. ಮುಖ್ಯಮಂತ್ರಿ, ಅವರ ಹಿಂಬಾಲಕರಿಗೂ ಆಹ್ವಾನ ನೀಡಲಾಗುತ್ತದೆ ಎಂದು ತಿಳಿದುಬಂದಿದೆ.

## ಮಧ್ಯಪ್ರಾಚ್ಯದಿಂದ 510 ಕನ್ನಡಿಗರು ವಾಪಸ್

**ದೇವನಹಳ್ಳಿ:** ಇರಾನ್–ಇಸ್ರೇಲ್ ಯುದ್ಧದಿಂದ ಮಧ್ಯಪ್ರಾಚ್ಯದಲ್ಲಿ ನಿರ್ಮಾಣವಾಗಿರುವ ಉದ್ವಿಗ್ನತೆ ನಡುವೆಯೂ ಪ್ರಯಾಣಿಕರನ್ನು ಹೊತ್ತ ಎರಡು ವಿಮಾನಗಳು ಅಬುಧಾಬಿಯಿಂದ ದೇವನಹಳ್ಳಿಯ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸುರಕ್ಷಿತವಾಗಿ ಬಂದಿಳಿದಿವೆ.

ಕೊಲ್ಲಿ ರಾಷ್ಟ್ರಗಳಲ್ಲಿ ಸಿಲುಕಿದ್ದ 510 ಪ್ರಯಾಣಿಕರು ತಾಯ್ನಾಡಿಗೆ ಬಂದಿಳಿದಿದರು. ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದಾರೆ. 210 ಪ್ರಯಾಣಿಕರಿದ್ದ ಮೊದಲ ವಿಮಾನ ಸೋಮವಾರ ರಾತ್ರಿ 10ಕ್ಕೆ ದೇವನಹಳ್ಳಿ ವಿಮಾನ ನಿಲ್ದಾಣದಲ್ಲಿ ಇಳಿಯಿತು. 300 ಪ್ರಯಾಣಿಕರನ್ನು ಹೊತ್ತ ಎರಡನೇ ವಿಮಾನ ಮಂಗಳವಾರ ಬೆಳಗಿನ ಜಾವ 3.20ಕ್ಕೆ ಬಂದಿಳಿದಿದೆ. ಇರಾನ್–ಇಸ್ರೇಲ್ ಯುದ್ಧದಿಂದ ಮಧ್ಯಪ್ರಾಚ್ಯದಲ್ಲಿಯ ಉದ್ವಿಗ್ನ



ಪರಿಸ್ಥಿತಿಯಿಂದ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದ ವಿಮಾನಯಾನ ಸೇವೆಗಳು ಎರಡು ದಿನದ ಬಳಿಕ ಪುನಾರಂಭವಾಗಿದೆ.

ಇದರೊಂದಿಗೆ ದುಬೈ ಸೇರಿದಂತೆ ಗಲ್ಫ್ ರಾಷ್ಟ್ರಗಳಲ್ಲಿ ಸಿಲುಕಿದ್ದ ನೂರಾರು ಕನ್ನಡಿಗರು ಸುರಕ್ಷಿತವಾಗಿ ತಾಯ್ನಾಡಿಗೆ ಮರಳಿದ್ದಾರೆ. ಸುರಕ್ಷಿತವಾಗಿ ಮರಳಿದ ಪ್ರಯಾಣಿಕರು ಸಂತಸ ವ್ಯಕ್ತಪಡಿಸಿದ್ದಾರೆ. ಅಬುಧಾಬಿಯಲ್ಲಿ ಉಳಿದುಕೊಂಡಿದ್ದ ಅವಧಿಯಲ್ಲಿ ಪ್ರಯಾಣಿಕರಿಗೆ ಹೋಟೆಲ್ ಮತ್ತು ಸಾರಿಗೆ ಸೇರಿದಂತೆ ಅಗತ್ಯ ಸುರಕ್ಷತಾ ವ್ಯವಸ್ಥೆ ಒದಗಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದರು.

### ಕಾರು ಗುದ್ದಿಸಿ ಯುವಕನ ಹತ್ಯೆ

**ಹಾಸನ:** ನಿಧಾನವಾಗಿ ಕಾರು ಓಡಿಸುವಂತೆ ತಿಳಿಹೇಳಿದ ಯುವಕನಿಗೆ ಕಾರು ಗುದ್ದಿಸಿ ಹತ್ಯೆ ಮಾಡಿರುವ ಘಟನೆ ಹೊಳೆನರಸೀಪುರ ತಾಲೂಕಿನ ಸೂರನಹಳ್ಳಿ ಗ್ರಾಮದಲ್ಲಿ ನಡೆದಿದೆ. ಮನು (27) ಹತ್ಯೆಯಾದ ಯುವಕ.



ನಿನ್ನೆ ಮಧ್ಯ ರಾತ್ರಿ 12 ಗಂಟೆ ಸಮಯದಲ್ಲಿ ಮನು, ಅಭಿಷೇಕ್, ರಾಕೇಶ್ ಹಾಗೂ ಕುಶಾಲ್ ರಸ್ತೆ ಪಕ್ಕದಲ್ಲಿ ನಿಂತು ಮಾತನಾಡುತ್ತಿದ್ದರು. ಈ ವೇಳೆ ಕಾರಿನಲ್ಲಿ ಅತಿ ವೇಗವಾಗಿ ಅಪರಿಚಿತ ವ್ಯಕ್ತಿ ಬಂದಿದ್ದಾನೆ. ಇದನ್ನು ಕಂಡ ಯುವಕರು ಕಾರು ಚಾಲಕನಿಗೆ ನಿಧಾನವಾಗಿ ಹೋಗುವಂತೆ ಹೇಳಿದ್ದರು ಎನ್ನಲಾಗಿದೆ. ಇದರಿಂದ ಕೋಪಗೊಂಡ ಕಾರು ಚಾಲಕ ಸ್ವಲ್ಪ ದೂರು ಹೋಗಿ ತಿರುಗಿಸಿಕೊಂಡು ಬಂದು, ಮಾತನಾಡುತ್ತ ನಿಂತಿದ್ದವರಿಗೆ ಡಿಕ್ಕಿ ಹೊಡೆಸಿದ್ದಾನೆ. ಬಳಿಕ ಅಲ್ಲಿಂದ ಪರಾರಿಯಾಗಿದ್ದಾನೆ. ಪುಟ 2ಕ್ಕೆ

### ರಾಜ್ಯಸಭಾ ಚುನಾವಣೆ: ಬಿಜೆಪಿ ಅಭ್ಯರ್ಥಿಗಳ ಘೋಷಣೆ

**ನವದೆಹಲಿ:** ರಾಜ್ಯಸಭಾ ಚುನಾವಣೆ ಮಾರ್ಚ್ 16ರಂದು ನಡೆಯಲಿದೆ. ಬಿಜೆಪಿ ಮಂಗಳವಾರ 9 ಅಭ್ಯರ್ಥಿಗಳನ್ನು ಘೋಷಿಸಿದೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರು ಬಿಹಾರದಿಂದ ಸ್ಪರ್ಧಿಸಲಿದ್ದಾರೆ.

ಬಿಹಾರದಿಂದ ನಿತಿನ್ ನಬಿನ್ ಮತ್ತು ಶಿವೇಶ್ ಕುಮಾರ್, ಅಸ್ಸಾಂನಿಂದ ತೇರಶ್ ಗೋವಲ್ಲ ಮತ್ತು ಜೋಗೇನ್ ಮೋಹನ್ ಹಾಗೂ ಛತ್ತೀಸ್‌ಗಢದಿಂದ ಲಕ್ಷ್ಮಿ ವರ್ಮಾ, ಹರಿಯಾಣದಿಂದ ಸಂಜಯ್ ಭಾಟಿಯಾ, ಒಡಿಶಾದಿಂದ ಸುಜೀತ್ ಕುಮಾರ್ ಜೊತೆಗೆ ಬಿಜೆಪಿ ರಾಜ್ಯ ಘಟಕದ ಮುಖ್ಯಸ್ಥ ಮನಮೋಹನ್ ಸಮಲ್ ಹಾಗೂ ಪಶ್ಚಿಮ ಬಂಗಾಳದಿಂದ ರಾಹುಲ್ ಸಿನ್ಹಾ ಅವರನ್ನು ಅಭ್ಯರ್ಥಿಯಾಗಿ ಚುನಾವಣೆಗೆ ಆಯ್ಕೆ ಮಾಡಲಾಗಿದೆ.

### ಎಚ್‌ಡಿಕೆ ಸಾಕ್ಷಿ ನೀಡಲಿ: ಪೊನ್ನಣ್ಣ ತಿರುಗೇಟು

**ಬೆಂಗಳೂರು:** ಸರ್ಕಾರದ ವಿರುದ್ಧ ಫೋನ್ ಕದ್ದಾಲಿಕೆ ಆರೋಪ ಮಾಡಿದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಸಿಎಂ ಕಾನೂನು ಸಲಹೆಗಾರ ಪೊನ್ನಣ್ಣ ತಿರುಗೇಟು ನೀಡಿದರು.



ವಿಧಾನಸೌಧದಲ್ಲಿ ಪ್ರತಿಕ್ರಿಯೆ ನೀಡಿದ ಅವರು, ಫೋನ್ ಟ್ಯಾಪಿಂಗ್ ಬಹಳ ಗಂಭೀರವಾದ ವಿಚಾರ. ಹಿಂದೆ ರಾಮಕೃಷ್ಣ ಹೆಗಡೆ ರಾಜೀನಾಮೆ ಕೊಡಬೇಕಾಯ್ತು. ಫೋನ್ ಟ್ಯಾಪಿಂಗ್ ಆರೋಪಕ್ಕೆ ಸಾಕ್ಷಿ ಕೊಡಬೇಕು. ಆಧಾರ ರಹಿತ ಆರೋಪ ಮಾಡಿ ಪುಟ 2ಕ್ಕೆ

## 6ಕ್ಕೆ ಬಜೆಟ್ ಅನುಮೋದನೆಗೆ ವಿಶೇಷ ಸಚಿವ ಸಂಪುಟ ಸಭೆ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 6ರಂದು 2026–27ನೇ ಸಾಲಿನ ರಾಜ್ಯ ಬಜೆಟ್ ಮಂಡಿಸಲಿದ್ದಾರೆ. ಬಜೆಟ್ ಗೆ ಅನುಮೋದನೆ ನೀಡಲು ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಮಾರ್ಚ್ 6ರಂದು ಬೆಳಿಗ್ಗೆ 9.45ಕ್ಕೆ ಸಚಿವ ಸಂಪುಟ ವಿಶೇಷ ಸಭೆ ನಡೆಯಲಿದೆ. ವಿಧಾನ ಸೌಧದ ಮೂರನೇ ಮಹಡಿಯಲ್ಲಿರುವ ಸಚಿವ ಸಂಪುಟ ಸಭಾಂಗಣದಲ್ಲಿ ಈ ಮಹತ್ವದ ಸಭೆ ಆಯೋಜಿಸಲಾಗಿದೆ. ಈ ಕುರಿತು ಸರ್ಕಾರದ ಅಪರ ಕಾರ್ಯದರ್ಶಿ (ಸಚಿವ ಸಂಪುಟ) ಆರ್. ಚಂದ್ರಶೇಖರ್ ಅಧಿಕೃತ ಸೂಚನೆ ನೀಡಿದ್ದಾರೆ.

ರಾಜ್ಯದ ಆರ್ಥಿಕ ಅಭಿವೃದ್ಧಿ ಮತ್ತು ಮುಂದಿನ



ಸಾಲಿನ ಯೋಜನೆಗಳ ದೃಷ್ಟಿಯಿಂದ ಈ ಬಜೆಟ್ ಮಹತ್ವದ್ದಾಗಿದೆ. ಮುಖ್ಯಮಂತ್ರಿಗಳು ಮಂಡಿಸಲಿರುವ ಆಯವ್ಯಯ ಪ್ರಸ್ತಾವನೆಗಳಿಗೆ ಸಚಿವ ಸಂಪುಟ ಪುಟ 2ಕ್ಕೆ

## ರಕ್ತಚಂದನ ಚಂದ್ರ ಗ್ರಹಣ ಹಿನ್ನೆಲೆ: ನಗರದ ಬಹುತೇಕ ದೇವಾಲಯಗಳು ಕಾಲ ಬಂದ್

**ಮೈಸೂರು:** ವರ್ಷದ ಮೊದಲ ಚಂದ್ರ ಗ್ರಹಣ ಆವರಿಸಿದ ಹಿನ್ನೆಲೆ ಮಂಗಳವಾರ ಮೈಸೂರು ನಗರದಲ್ಲಿರುವ ಬಹುತೇಕ ದೇವಾಲಯಗಳ ಬಾಗಿಲಿಗೆ ಬೀಗ ಹಾಕಲಾಗಿತ್ತು.ಮಧ್ಯಾಹ್ನ 3.21 ಕ್ಕೆ ಆರಂಭವಾದ ಗ್ರಹಣ ಸಂಜೆ 6.47 ಕ್ಕೆ ಮುಗಿಯಿತು. ಈ ವೇಳೆ ಜಿಲ್ಲೆಯಲ್ಲಿರುವ ನಂಜನಗೂಡು ನಂಜುಂಡೇಶ್ವರ ದೇವಾಲಯ ಹೊರತುಪಡಿಸಿ ಉಳಿದ ಚಾಮುಂಡಿ ಬೆಟ್ಟ ನಾಡ ದೇವತೆ ಚಾಮುಂಡೇಶ್ವರಿ ದೇವಸ್ಥಾನ, ಉತ್ತನಹಳ್ಳಿ ಮಾರಮ್ಮ ದೇವಾಲಯ,ಕೋಟೆ ಆಂಜನೇಯ ದೇವಸ್ಥಾನ, ಲಕ್ಷ್ಮಿ ನರಸಿಂಹ, ಯೋಗಾನರಸಿಂಹ,ಲಕ್ಷ್ಮಿ ವೆಂಕಟ ರಮಣ ದೇವಸ್ಥಾನ,ಚಂದ್ರಮೌಳೇಶ್ವರ ದೇವಸ್ಥಾನ ಸೇರಿದಂತೆ ಎಲ್ಲಾ ದೇವಾಲಯಗಳನ್ನು ಬಂದ್ ಮಾಡಲಾಗಿತ್ತು. ಗ್ರಹಣ ಸರಿದ ಬಳಿಕ ಸಂಜೆ ದೇವಾಲಯದ ಬಾಗಿಲು ತೆರೆಯಲಾಯಿತು. ಬಳಿಕ ದೇವಾಲಯವನ್ನು ಸ್ವಚ್ಛಗೊಳಿಸಿ ಹೋಮ ಹವನ, ಜಪ ತಪ, ವಿಶೇಷ ಪೂಜೆ ಪುನಸ್ಕಾರಗಳನ್ನು ನೆರವೇರಿಸಲಾಯಿತು.



ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಮಧ್ಯಾಹ್ನ 3.20ಕ್ಕೆ ಬಾಗಿಲು ಬಂದ್ ಮಾಡಿ ಸಂಜೆ 7 ಕ್ಕೆ ಸಾರ್ವಜನಿಕರ ದರ್ಶನಕ್ಕೆ ಪುಟ 2ಕ್ಕೆ

## ರಾಜ್ಯದಲ್ಲೂ ಏಪ್ರಿಲ್‌ನಿಂದ ಎಸ್‌ಐಆರ್ ಆರಂಭ

**ರಾಜ್ಯದ ಶೇ.73.2ರಷ್ಟು ಮತದಾರರ ಮ್ಯಾಪಿಂಗ್ ಪ್ರಕ್ರಿಯೆ ಪೂರ್ಣ**

**ಬೆಂಗಳೂರು:** ರಾಜ್ಯದಲ್ಲೂ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯ ಏಪ್ರಿಲ್‌ನಿಂದ ಆರಂಭವಾಗುವ ಸಾಧ್ಯತೆ ಇದೆ. ರಾಜ್ಯ ಮುಖ್ಯ ಚುನಾವಣಾ ಅಧಿಕಾರಿ (ಸಿಇಒ) ಇದಕ್ಕೆ ಸಂಬಂಧಿಸಿದ ಕೆಲಸ ಆರಂಭಿಸಿದ್ದಾರೆ. ರಾಜ್ಯದ 5.57 ಕೋಟಿ ಮತದಾರರಲ್ಲಿ 4.08 ಕೋಟಿ ಜನರನ್ನು ಮ್ಯಾಪಿಂಗ್ ಮಾಡಲಾಗಿದೆ. ಇದು ಒಟ್ಟು ಮತದಾರರಲ್ಲಿ ಶೇ.73.2ರಷ್ಟಿದೆ.

ಸಿಇಒ ಮಾಹಿತಿ ಪ್ರಕಾರ, ತುಮಕೂರಿನಲ್ಲಿ ಶೇಕಡವಾರು (92.05), ಕೊಪ್ಪಳ (91.32) ಮತ್ತು ಉಡುಪಿ (90.12)ಯಲ್ಲಿ ಅತಿ ಹೆಚ್ಚು ಮ್ಯಾಪಿಂಗ್ ಮಾಡಲಾಗಿದೆ. ಬಿಬಿಎಂಪಿ ದಕ್ಷಿಣ ಕ್ಷೇತ್ರದಲ್ಲಿ (34.22) ಮತ್ತು ಬಿಬಿಎಂಪಿ ಕೇಂದ್ರ ಕ್ಷೇತ್ರದಲ್ಲಿ



(34.79) ಅತಿ ಕಡಿಮೆ ಮ್ಯಾಪಿಂಗ್ ಆಗಿದೆ.

ಭಾರತೀಯ ಚುನಾವಣಾ ಆಯೋಗ ನಿರ್ದೇಶನ ನೀಡಿದ ತಕ್ಷಣ ನಾವು ಎಸ್‌ಐಆರ್ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸಿದ್ಧರಿದ್ದೇವೆ. ಕರ್ನಾಟಕದಲ್ಲಿ ಏಪ್ರಿಲ್‌ನಿಂದ ಎಸ್ ಐಆರ್ ಪ್ರಾರಂಭವಾಗುವ ಸಾಧ್ಯತೆಯಿದೆ.

ರಾಜ್ಯ ಚುನಾವಣಾ ಆಯೋಗ (ಎಸ್ಇಸಿ) ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಚುನಾವಣೆಗೆ ಪುಟ 2ಕ್ಕೆ

## ಆಸ್ಪತ್ರೆಗಳ ಸ್ವಚ್ಛತೆ, ಭದ್ರತೆಗೆ ಆದ್ಯತೆ

**ಅಧಿಕಾರಿಗಳೊಂದಿಗೆ ಸಭೆ । ಶಾಸಕ ಕೆ.ಹರೀಶ್‌ಗೌಡ ಸೂಚನೆ**

**ಮೈಸೂರು:** ನಗರದ ಕೆ.ಆರ್.ಆಸ್ಪತ್ರೆ, ಟ್ರಾಮಾಕೇರ್ ಸೆಂಟರ್, ಜಿಲ್ಲಾಸ್ಪತ್ರೆ, ಪಿಕೆಟಿಬಿ ಆಸ್ಪತ್ರೆಗಳ ಸ್ವಚ್ಛತೆ ಹಾಗೂ ಭದ್ರತೆ ಕಾಪಾಡುವ ನಿಟ್ಟಿನಲ್ಲಿ ಕ್ರಮಕೈಗೊಳ್ಳುವಂತೆ ಡೀನ್ ಅವರಿಗೆ ಸೂಚನೆ ನೀಡಲಾಗಿದೆ ಎಂದು ಶಾಸಕ ಕೆ.ಹರೀಶ್‌ಗೌಡ ತಿಳಿಸಿದರು.

ಮೈಸೂರು ವೈದ್ಯಕೀಯ ಅಸ್ಪತ್ರೆಗಳ ಅಧಿಕಾರಿಗಳ ಸಭೆ ಬಳಿಕ ಮಾತನಾಡಿದ ಅವರು, ಎಲ್ಲಾ ಆಸ್ಪತ್ರೆಗಳಲ್ಲಿ ಭದ್ರತೆ ಹಾಗೂ ಸ್ವಚ್ಛತೆಗೆ ಸಂಬಂಧಿಸಿದಂತೆ ಸಾಕಷ್ಟು ಚರ್ಚೆ ನಡೆದಿದೆ. ಎಲ್ಲವನ್ನೂ ಸರಿಪಡಿಸುವಂತೆ ಸೂಚಿಸಲಾಗಿದೆ. ಟ್ರಾಮಾ ಸೆಂಟರ್ ವಿಚಾರದಲ್ಲಿ ವೈದ್ಯರ ಸಹಕಾರ ಹೇಗಿರಬೇಕೆಂದು ಸೂಚಿಸಲಾಗಿದೆ ಎಂದು ಹೇಳಿದರು.

ಕಿದ್ವಾಯಿ ಆಸ್ಪತ್ರೆ ಕಟ್ಟಡ ಕಾಮಗಾರಿ ಮುಗಿದಿದೆ. ಉದ್ಘಾಟನೆಗೆ ಸಿದ್ಧಗೊಂಡಿದೆ. ಯಂತ್ರೋಪಕರಣಗಳನ್ನು ಶೀಘ್ರವೇ ಕೊಡಿಸಿ ಆಸ್ಪತ್ರೆ ಪ್ರಾರಂಭಿಸಲಾಗುವುದು. ನೆಫ್ರೋಯುರಾಲಜಿ ಹಾಗೂ ಎಂಡ್ರೋಕ್ರಿಯಲಜಿ ವಿಭಾಗದ ಕಟ್ಟಡಗಳು ಕಾಮಗಾರಿ ಪ್ರಗತಿಯಲ್ಲಿದೆ. ಮೂರು ತಿಂಗಳಲ್ಲಿ ಮುಗಿಯುವ ನಿರೀಕ್ಷೆಯಲ್ಲಿದೆ. ಅದನ್ನು ಆದಷ್ಟು ಬೇಗ ಬಳಕೆ ಮಾಡಿಕೊಳ್ಳಲಾಗುವುದು. ಮತ್ತೊಂದೆಡೆ ಕ್ರಿಟಿಕಲ್ ಕೇರ್ ಯೂನಿಟ್ ಪೂರ್ಣಗೊಂಡಿದೆ. ಪುಟ 2ಕ್ಕೆ



ರಾತ್ರಿ ವೇಳೆ ಆಸ್ಪತ್ರೆ ಆವರಣವನ್ನು ಕೆಲ ಪೋಲಿಗಳು ಆಶ್ರಯ ತಾಣವನ್ನಾಗಿ ಮಾಡಿಕೊಳ್ಳುತ್ತಿರುವುದು ಗಮನಿಸಿದ್ದು ಅಂತಹವರ ವಿರುದ್ಧ ದೂರು ನೀಡಲು ಸೂಚಿಸಲಾಗಿದೆ. ರೋಗಿ ಸಂಬಂಧಿಗಳು ತಂಗಲು ಡ್ರಾಮೆಂಟರಿ ಇದ್ದು, ಅವರಿಗೂ ಯಾವುದೇ ತೊಂದರೆ ಆಗದಂತೆ ಭದ್ರತಾ ವ್ಯವಸ್ಥೆ ಬಲಪಡಿಸಲು ಸೂಚಿಸಲಾಗಿದೆ.

▶▶ **ಕೆ.ಹರೀಶ್‌ಗೌಡ** ಶಾಸಕ

### ಹೆಚ್ಚುವರಿ ಕೇಂದ್ರ ಶೀಘ್ರ

ಪ್ರಸ್ತುತ ಚೆಲುವಾಂಬದಲ್ಲಿ 2 ಐಸಿಯುನಲ್ಲಿ 18 ಬೆಡ್‌ಗಳಲ್ಲಿ ಸೇವೆ ಒದಗಿಸಲಾಗುತ್ತಿದೆ. ಒತ್ತಡ ಪುಟ 2ಕ್ಕೆ

ಮೊದಲ ಪುಟದಿಂದ

## ಆಸ್ಪತ್ರೆಗಳ ಸ್ವಚ್ಛತೆ, ಭದ್ರತೆಗೆ ಆದ್ಯತೆ

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕೊಟಾಕ್ ಮಹೀಂದ್ರ ಬ್ಯಾಂಕ್ ಸಿಎಸ್‌ಆರ್ ನಿಧಿಯಲ್ಲಿ 8 ಕೋಟಿ ರೂ. ವೆಚ್ಚದ ಎಂಆರ್‌ಐ ಸ್ಕ್ಯಾನರ್ ನೀಡಲು ಒಪ್ಪಿದೆ. ಇದರಿಂದಾಗಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲೂ ಸ್ಕ್ಯಾನರ್ ಅನೂಕೂಲ ಆಗಲಿದೆ ಎಂದರು. ಔಷಧಿ ಕೊರತೆ ವಿಚಾರದಲ್ಲಿ ಇದುವರೆವಿಗೂ ಯಾವುದೇ ದೂರು ಬಂದಿಲ್ಲ. ಜಿಲ್ಲಾಸ್ಪತ್ರೆಯಲ್ಲಿ ಡಯಾಲಿಸಿಸ್ ಸಮಸ್ಯೆ ಆಗಿತ್ತು. ಈಗ ಪರಿಹರಿಸಲಾಗಿದೆ. ಡಾ.ಮಹದೇವ್ ಅವರು ಆಸ್ಪತ್ರೆ ವೈದ್ಯರು ಬೇರೆ ಕಡೆ ಕೆಲಸ ಮಾಡುವುದರಿಂದ ಟ್ರಾಮಾಸೆಂಟರ್ ಸರ್ಜರಿಗೆ ಬರುವವರನ್ನು ವಾರಗಟ್ಟಲೆ ಕಾಯಿಸುತ್ತಿರುವುದನ್ನು ಗಮನಕ್ಕೆ ತಂದಿದ್ದಾರೆ. ಅಂತಹ ವೈದ್ಯರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಲಾಗಿದೆ. ಕಳೆದ ಬಾರಿ ಸರ್ಕಾರ 89 ಕೋಟಿ ರೂ. ನೀಡಿ ಕೆ.ಆರ್.ಆಸ್ಪತ್ರೆ, ಚೆಲುವಾಂಬ ನವೀಕರಣ ಪ್ರಾರಂಭಿಸಿತ್ತು. ಸದ್ಯ ಎಲ್ಲಾ ಕಡೆ ನವೀಕರಣ ಕೆಲಸ ಮುಗಿದಿದೆ. ಸೂಪರ್ ಸ್ಪೆಷಾಲಿಟಿ, ಪಿಕೆಟಿಬಿ ಆಸ್ಪತ್ರೆಯಿಂದ ಕೆಲವೊಂದು ಯಂತ್ರೋಪಕರಣಗಳು ಬೇಡಿಕೆಯಿದ್ದು ಅದನ್ನು ಬಗೆಹರಿಸಲಾಗುವುದೆಂದು ಅವರು ತಿಳಿಸಿದರು.

ಕಿಡ್ನಿ ಸಮಸ್ಯೆ ಇರುವವರಿಗೆ ಈಗಾಗಲೇ ಕೆ.ಆರ್.ಆಸ್ಪತ್ರೆಯಲ್ಲೇ ಲೇಸರ್ ಮೂಲಕ ಚಿಕಿತ್ಸೆ ನೀಡುವ ಯಂತ್ರೋಪಕರಣದ ಚಿಕಿತ್ಸೆ ನೀಡಲಾಗುತ್ತಿದೆ. ಕೆಲವು ತಾಂತ್ರಿಕ ಪರಿಣಿತರ ಕೊರತೆ ಇದೆ. ಶೀಘ್ರ ಸಮಸ್ಯೆ ಬಗೆಹರಿಸಲಾಗುವುದು. ಒಟ್ಟಾರೆ ತಿಂಗಳಲ್ಲಿ ಸಾವಿರ ಮಂದಿ ಡಯಾಲಿಸಿಸ್ ಸೌಲಭ್ಯ ಪಡೆಯುತ್ತಿದ್ದಾರೆ. ನಿತ್ಯ 100ಕ್ಕೂ ಹೆಚ್ಚು ಮಂದಿಯ ಬೇಡಿಕೆಯಿದೆ ಎಂದರು. ಉನ್ನತ ತಜ್ಞರು, ವೈದ್ಯರ ಕೊರತೆಯಿಲ್ಲ. ಉಳಿದಿರುವವರ ಭರ್ತಿಗೆ ಕೆಲವೊಂದು ಸಮಸ್ಯೆಗಳಿದ್ದು, ಗುತ್ತಿಗೆ ಆಧಾರದ ಮೇಲೆ ಇರುವವರನ್ನೇ ಶಾಶ್ವತವಾಗಿ ತೆಗೆದುಕೊಳ್ಳುವ ಪ್ರಯತ್ನ ಮಾಡಲಾಗುವುದು. ಶೀಘ್ರವೇ ಸಿಂಗಲ್ ವಿಂಡೋ ಸಿಸ್ಟಮ್ ಜಾರಿಗೆ ತರಲಾಗುವುದು ಎಂದರು. ವೈದ್ಯಕೀಯ ಕಾಲೇಜಿನ ಸಮಿತಿ ಸದಸ್ಯರಾದ ಡಾ.ಮಹದೇವ್, ಡಾ.ಸುನೀಲ್, ವಕೀಲೆ ತನುಜಾ, ಕಾಲೇಜಿನ ಡೀನ್ ದಾಕ್ಷಾಯಣಿ, ಸಿಇಒ ಮಹೇಶ್, ಕೆ.ಆರ್.ಆಸ್ಪತ್ರೆ ಸೂಪರಿಡೆಂಟ್ ಶೋಭಾ, ಚೆಲುವಾಂಬ ಸೂಪರಿಡೆಂಟ್, ಟ್ರಾಮಾ ಸೆಂಟರ್, ಪಿಕೆಟಿಬಿ ಆಸ್ಪತ್ರೆ ಸೂಪರಿಡೆಂಟ್‌ಗಳ ಸಭೆ ನಡೆಸಲಾಯಿತು.

## ಜಾಗತಿಕ ತೈಲ, ಗ್ಯಾಸ್ ಬೆಲೆ ಏರಿಕೆ

ಈ ಜಲಸಂಧಿಯನ್ನು ತಪ್ಪಿಸಿ ತೈಲ ಪೂರೈಕೆ ಸಾಧ್ಯವಿದೆಯಾದರೂ ಆ ಮಾರ್ಗ ಉದ್ದವಿರುವ ಕಾರಣ ಬೆಲೆ ಏರಿಕೆಯಾಗುತ್ತದೆ. ಅಮೆರಿಕದ ತೈಲ ಬೆಲೆಯಲ್ಲಿ ಶೇ.7.6ರಷ್ಟು ಏರಿಕೆಯಾಗಿದೆ. ಪ್ರತಿ ಬ್ಯಾರಲ್‌ಗೆ (159 ಲೀಟರ್) 6604.83 ರೂ. ಆಗಿದೆ. ಬ್ರೆಂಟ್ ದರದಲ್ಲಿ ಶೇ.8.6 ಹೆಚ್ಚಳವಾಗಿದೆ. ನೈಸರ್ಗಿಕ ಅನಿಲದ ಅತಿದೊಡ್ಡ ಪೂರೈಕೆದಾರ ರಾಷ್ಟ್ರಗಳಲ್ಲಿ ಒಂದಾ ಗಿರುವ ಕತಾರ್ ಮೇಲೆ ಇರಾನ್ ದಾಳಿ ಮಾಡಿರುವ ಕಾರಣ ಅಲ್ಲಿ ನೈಸರ್ಗಿಕ ಅನಿಲದ ಉತ್ಪಾದನೆಯನ್ನು ಸ್ಥಗಿತಗೊಳಿಸಲಾಗಿದೆ. ಈ ಬಗ್ಗೆ ಸರ್ಕಾರಿ ಒಡೆತನದ ಪೆಟ್ರೋಲಿಯಂ ಕಂಪನಿ ಕತಾರ್ ಎನರ್ಜಿ ಅಧಿಕೃತವಾಗಿ ಘೋಷಿಸಿದೆ. ಪರಿಣಾಮ ಯುರೋಪ್‌ನಲ್ಲಿ ಅನಿಲದ ಬೆಲೆಯಲ್ಲಿ ಶೇ.40ರಷ್ಟು ಹೆಚ್ಚಳವಾಗಿದೆ.

## ಸಾಕ್ಷಿ ನೀಡಲಿ: ಪೊನ್ನಣ್ಣ ತಿರುಗೇಟು

ಗೊಂದಲ ಸೃಷ್ಟಿಸಬಾರದು ಎಂದು ಕಿಡಿಕಾರಿದರು. ಫೋನ್ ಟ್ಯಾಪಿಂಗ್ ಮಾಡಲು ಸಾಕಷ್ಟು ಪ್ರೊಸಿಜರ್ ಇದೆ. ರಾಜಕೀಯ ಆರೋಪಗಳಿಗೆ ಪ್ರತಿಕ್ರಿಯಿಸುವ ಅಗತ್ಯವಿಲ್ಲ. ಆಧಾರ ಕೊಟ್ಟರೆ ಅಪರಾಧ ಆಗುತ್ತದೆ. ರಾಜಕೀಯವಾಗಿ ಇಂಟೆಲಿಜೆನ್ಸ್ ಕೆಲಸ ಮಾಡಲು ಆಗಲ್ಲ. ಫೋನ್ ಟ್ಯಾಪಿಂಗ್ ವಿಚಾರವನ್ನ ಸುಪ್ರೀಂ ಕೋರ್ಟ್ ಕೂಡ ಗಂಭೀರವಾಗಿ ಪರಿಗಣಿಸುತ್ತದೆ. ಮಾಧ್ಯಮಗಳ ಮುಂದೆ ಬರುವ ಮುನ್ನ ತನಿಖಾ ಸಂಸ್ಥೆಗಳಿಗೆ ಆಧಾರಗಳನ್ನು ನೀಡಬೇಕು ಎಂದು ಕುಮಾರಸ್ವಾಮಿ ಆರೋಪಕ್ಕೆ ಪೊನ್ನಣ್ಣ ತಿರುಗೇಟು ನೀಡಿದರು.

## ತಾಕತ್ತಿದ್ದರೆ ಕೈಗಾರಿಕೆ ತನ್ನಿ

ಕಷ್ಟ ತಿಳಿದಿರಬೇಕು. ಬರೀ ಭಾಷಣ, ಟಿವಿ ಮುಂದೆ ಹೇಳಿದರೆ ಅಭಿವೃದ್ಧಿ ಆಗುವುದಿಲ್ಲ. ಮೊದಲು ಕುಮಾರಸ್ವಾಮಿ ಪ್ರಾಮಾಣಿಕ ವಾಗಿ ಕೆಲಸ ಮಾಡಿ ತೋರಿಸಲಿ ಎಂದು ಸವಾಲು ಹಾಕಿದರು.

## ಮೊಮ್ಮಗನಿಗೂ ಜಾಗ ಮೀಸಲು

ಗೊತ್ತಿದೆ. ಅವರ ಬೀಗರನ್ನು, ಕುಟುಂಬದವರನ್ನು ಬೆಳಸಿಕೊಳ್ಳಲು ಏನ್ ಬೇಕಾದರೂ ಮಾಡ್ತಾರೆ. ಒಕ್ಕಲಿಗರಲ್ಲಿ ಡಿಕೆ ಶಿವಕುಮಾರ್ ಸಿಎಂ ಆಗಿಬಿಡ್ತಾರೆ ಅಂತ ಅವರ ಕಾಲನ್ನು ಎಳೆಯುತ್ತಿದ್ದಾರೆ ಎಂದು ಆರೋಪಿಸಿದರು.

## ತಂದೆಯಿಂದಲೇ ಗೂಢಚರ್ಯೆ ಪಾಠ!

ಮಾಡಲಾಗಿದೆ ಎಂದು ತಿಳಿಸಿತ್ತು. ನಂಬಿಕೆಗೆ ತಾನು ಅರ್ಹ ಅಲ್ಲ ಎಂದು ಸಾಬೀತು ಮಾಡಿರುವ ಕುಮಾರಸ್ವಾಮಿ ಅವರನ್ನು ಬಿಜೆಪಿಯವರು ಸುಮ್ಮನೆ ಬಿಟ್ಟಾರೆಯೇ? ಅವರ ವಿರುದ್ಧವೂ ಗೂಢಚಾರರನ್ನು ಬಿಟ್ಟಿರಬಹುದು. ಇಂತಹ ದುರ್ಬುದ್ಧಿಗಾಗಿಯೇ ರಾಜ್ಯದ ಜನತೆ ಈ ಎರಡೂ ಪಕ್ಷಗಳನ್ನು ತಿರಸ್ಕರಿಸಿರುವುದು ಎನ್ನುವುದು ನೆನಪಿರಲಿ ಎಂದು ವಾಗ್ದಾಳಿ ನಡೆಸಿದ್ದಾರೆ.

## ಸಿಡಿ ಹೊರಬಿಟ್ಟಿದ್ದು ಎಚ್‌ಡಿಕೆ

ಎಂದು ಆರೋಪಿಸಿದರು. ನಗರಸಭೆ ಸೇರ್ಪಡೆ ವಿರೋಧಿಸಿ ಗೆಜ್ಜಲಗೆರೆಯಲ್ಲಿ ಪ್ರತಿಭಟನೆಗೆ ಎಚ್.ಡಿ.ಕುಮಾರಸ್ವಾಮಿ ಸಾಥ್ ನೀಡಿದ ವಿಚಾರಕ್ಕೆ ಪ್ರತಿಕ್ರಿಯಿಸಿದ ಕದಲೂರು ಉದಯ್, 50 ಸಾವಿರ ಜನರನ್ನು ಕರೆದುಕೊಂಡು ಬೆಂಗಳೂರಿಗೆ ಪಾದಯಾತ್ರೆ ಮಾಡ್ತಾರಂತೆ. ಬೆಂಗಳೂರು ಇಲ್ಲಿಗೆ ಬಹಳ ಹತ್ತಿರ ಇದೆ. ಇವರು ದೆಹಲಿಗೆ ಪಾದಯಾತ್ರೆ ಹೋಗಲಿ ವ್ಯಾಯಮವಾದರೂ ಆಗುತ್ತದೆ. ಅವರ ಆರೋಗ್ಯ ಇನ್ನು ಸ್ವಲ್ಪ ವೃದ್ಧಿ ಆಗತ್ತದೆ. ಇವರು ಇಲ್ಲಿ ಬಂದು ಉಪದೇಶ ಮಾಡೋ ಅವಶ್ಯಕತೆ ಇಲ್ಲ. ಬಡವರ ಮಕ್ಕಳು, ರೈತರ ಮಕ್ಕಳು ಬೆಳೆಯ ಬಾರದು ಅಂತ ಇಲ್ಲಿ ಬಂದು ರಾಜಕೀಯ ಮಾಡ್ತಾರೆ ಎಂದು ವಾಗ್ದಾಳಿ ನಡೆಸಿದರು.

## ಕಾರು ಗುದ್ದಿಸಿ ಯುವಕನ ಹತ್ಯೆ

ಡಿಕ್ಕಿ ರಭಸಕ್ಕೆ ಮನು ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಅಭಿಷೇಕ್ ಸೇರಿ ಮೂವರು ಯುವಕರಿಗೆ ಗಾಯಗಳಾಗಿವೆ. ಗಾಯಾಳುಗಳಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ಏಪ್ರಿಲ್‌ನಿಂದ ಎಸ್‌ಐಆರ್ ಆರಂಭ

ಮತದಾರರ ಪಟ್ಟಿಯನ್ನು ಅಂತಿಮಗೊಳಿಸುವ ಕೆಲಸ ಮಾಡುತ್ತಿದೆ. ಜಿಬಿಎ ಚುನಾವಣೆಗೆ ಅಂತಿಮ ಮತದಾರರ ಪಟ್ಟಿಗಾಗಿ ಏಪ್ರಿಲ್ 6ರಿಂದ ದಿನಾಂಕವನ್ನು ವಿಸ್ತರಿಸುವ ಕೆಲಸ ಮಾಡುತ್ತಿದ್ದೇವೆ. ಬೂತ್ ಮಟ್ಟದ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿ ಈ ಕೆಲಸದಲ್ಲಿ ನಿರತರಾಗಿದ್ದಾರೆ ಎಂದು ಅವರು ತಿಳಿಸಿದರು. ನಿಖರತೆಯನ್ನು ಕಾಪಾಡಿಕೊಳ್ಳಲು, 2025ರ ಮತದಾರರ ಪಟ್ಟಿಯಲ್ಲಿರುವ ಮತದಾರರನ್ನು 2002ರ ಮತದಾರರ ಪಟ್ಟಿಯೊಂದಿಗೆ ಹೋಲಿಕೆ ಮಾಡುತ್ತಿದ್ದಾರೆ. ಮ್ಯಾಪಿಂಗ್ ಒಂದು ಟೇಬಲ್-ಟಾಪ್ ಪ್ರಕ್ರಿಯೆಯಾಗಿದೆ. ಇದರಲ್ಲಿ 2002ರ ಡೇಟಾವನ್ನು ಪರಿಶೀಲನೆಗೆ ಆಧಾರವಾಗಿ ಬಳಸುತ್ತಾರೆ. ಮತದಾರರ ವಿವರಗಳನ್ನು ಖಚಿತಪಡಿಸಿಕೊಳ್ಳಲು ವಾರ್ಷಿಕ ವಿಶೇಷ ಸಾರಾಂಶ ಪರಿಷ್ಕರಣೆ ಡೇಟಾವನ್ನು ಸಹ ಬಳಸಲಾಗುತ್ತದೆ ಎಂದು ಚುನಾವಣಾ ಅಧಿಕಾರಿ ತಿಳಿಸಿದ್ದಾರೆ.

## 6ಕ್ಕೆ ಬಜೆಟ್ ಅನುಮೋದನೆಗೆ ವಿಶೇಷ ಸಚಿವ ಸಂಪುಟ ಸಭೆ

ಸಭೆಯಲ್ಲಿ ಅನುಮೋದನೆ ನೀಡಲಾಗುತ್ತದೆ ಸಭೆ ಹಿನ್ನೆಲೆಯಲ್ಲಿ ವಿಧಾನ ಸೌಧದಲ್ಲಿ ಭದ್ರತಾ ಹಾಗೂ ಆಡಳಿತಾತ್ಮಕ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಎನ್‌ಜೆ ಆಸ್ಪತ್ರೆಯಲ್ಲಿ ಯಶಸ್ವಿ ಶಸ್ತ್ರ ಚಿಕಿತ್ಸೆ

ಮೈಸೂರು: ಯಶಸ್ವಿನಿ ಯೋಜನೆ ಅಡಿಯಲ್ಲಿ ತಮ್ಮ ಆಸ್ಪತ್ರೆಯಲ್ಲಿ ಕಳೆದ ವರ್ಷ ಸುಮಾರು 100 ಮೂಳೆ ಹಾಗೂ ಬೆನ್ನುಮೂಳೆ ಸಂಬಂಧಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನೆರವೇರಿಸಲಾಗಿದೆ ಎಂದು ಎನ್‌ಜೆ ಆಸ್ಪತ್ರೆ ಅಧ್ಯಕ್ಷ ಡಾ. ದುರ್ಗೇಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಬಹಳಷ್ಟು ಖಾಸಗಿ ಆಸ್ಪತ್ರೆಗಳು ಯಶಸ್ವಿನಿ ಯೋಜನೆ ತಮ್ಮಲ್ಲಿ ಜಾರಿ ಮಾಡಿಸಿಕೊಳ್ಳದೇ ಈ ಕಾರ್ಡ್ ಅಡಿಯಲ್ಲಿ ಚಿಕಿತ್ಸೆ ನಿರಾಕರಿಸುತ್ತಿವೆ. ಆದರೆ ತಮ್ಮದು ಜನರಿಗೆ ಉತ್ತಮ ಆರೋಗ್ಯ ಸೇವೆಯನ್ನು ಬದ್ಧತೆಯಿಂದ ನೀಡಬೇಕೆಂಬ ಉದ್ದೇಶದ ಆಸ್ಪತ್ರೆ ಆಗಿರುವುದರಿಂದಾಗಿ ಈ ಯೋಜನೆ ಅಡಿಯಲ್ಲಿ ಸುಮಾರು 2.50 ಲಕ್ಷ ವರೆಗಿನ ಮೂಳೆ ಮತ್ತು ಬೆನ್ನೆಲೆಬು ಚಿಕಿತ್ಸೆಯನ್ನು ಯಾವುದೇ ವೆಚ್ಚವಿಲ್ಲದೇ ನೀಡಲಾಗುತ್ತಿದೆ. ಅರ್ಹ ಸುಮಾರು 100 ರೋಗಿಗು ಇದರ ಪ್ರಯೋಜನ ಪಡೆದಿದಾರೆಂದರು. ನಿರಂತರ ಕೀಲು ನೋವು, ನಿರ್ಬಂಧಿತ ಚಲನೆ ಅಥವಾ ದೀರ್ಘ ಕಾಲದ ಬೆನ್ನುಮೂಳೆಗೆ ಸಂಬಂಧಿಸಿದ ಸಮಸ್ಯೆ




ಅನುಭವಿಸುತ್ತಿರುವವರು ಆಸ್ಪತ್ರೆಗೆ ಭೇಟಿ ನೀಡಿ ಯಶಸ್ವಿನಿ ಯೋಜನೆ ಅಡಿಯಲ್ಲಿ ನಗದು ರಹಿತ ಸೇವೆ ಪಡೆಯಬಹುದಾಗಿದೆ ಎಂದು ಸಲಹೆ ನೀಡಿದರು. ಡಾ. ಮನುಪ್ರಕಾಶ್ ಮಾತನಾಡಿ, ಮೂಳೆ ಮತ್ತು ಬೆನ್ನುಮೂಳೆಯ ಆರೋಗ್ಯ ಸಮಸ್ಯೆಗಳು ಚಲನಶೀಲತೆ ಹಾಗೂ ವ್ಯಕ್ತಿಯ ಸ್ವಾತಂತ್ರ ?ಯದ ಮೇಲೆ ಗಂಭೀರ ಪರಿಣಾಮ ಬೀರುತ್ತವೆ. ಅನೇಕ ರೋಗಿಗಳು ಹಣಕಾಸಿನ ಸಮಸ್ಯೆ ಕಾರಣ ಚಿಕಿತ್ಸೆ ಪಡೆಯುವುದಿಲ್ಲ. ಹೀಗಾಗಿ ಈ ಯೋಜನೆ ಅಡಿಯಲ್ಲಿ ತಮ್ಮ ಆಸ್ಪತ್ರೆಯಲ್ಲಿ ಯಶಸ್ವಿ ಸೇವೆ ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು. ಆಸ್ಪತ್ರೆ ಅಧಿಕಾರಿ ಡಾ. ಸಿಂಧುಲಕ್ಷ್ಮಿ ಇದ್ದರು.

# ಗಟ್ಟಿತನ ಹೊಂದಿರುವ ಸಂವಿಧಾನ

ಚಾಮರಾಜನಗರ, ಭಾರತದ ಸಂವಿಧಾನದಲ್ಲಿ ಗಟ್ಟಿತನವಿದ್ದು, ಅದರಲ್ಲಿರುವ ಮೂಲಭೂತಹಕ್ಕುಗಳು, ಕರ್ತವ್ಯಗಳು, ರಾಜ್ಯನಿರ್ದೇಶಕ ತತ್ವಗಳ ಬಗ್ಗೆ ಅರಿವು ಪಡೆಯಲು ವಿಕಸಿತಾ ಭಾರತ್‌ಯೂಥ್ ಪಾರ್ಲಿಮೆಂಟ್ ಕುರಿತು ಜಿಲ್ಲಾಮಟ್ಟದ ಸ್ಪರ್ಧೆಗಳು ಸಹಕಾರಿಯಾಗಿವೆ ಎಂದು ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯಡಾ.ಎಫ್.ಬಿ.ಎಂ ಪ್ರಸನ್ನ ತಿಳಿಸಿದರು.

ಯುವ ವ್ಯವಹಾರ ಮತ್ತುಕ್ರೀಡಾ ಸಚಿವಾಲಯ, ನಗರದ ಮೈಭಾರತ್‌ಕೇಂದ್ರ ಹಾಗೂ ಚಾಮರಾಜನಗರ ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆ ಕೋಶ ಸಹಯೋಗದಲ್ಲಿ ಚಾಮರಾಜನಗರ ವಿಶ್ವವಿದ್ಯಾನಿಲಯದ ಕಾನ್ಫರೆನ್ಸ್ ಹಾಲ್‌ನಲ್ಲಿ ನಡೆದ' 'ವಿಕಸಿತಾ ಭಾರತ್‌ಯೂಥ್ ಪಾರ್ಲಿಮೆಂಟ್-2026ರ ಕುರಿತು ಜಿಲ್ಲಾಮಟ್ಟದ ಸ್ಪರ್ಧೆಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ವಿವಿಧ ರಾಜ್ಯಗಳಿಂದ ಆಯ್ಕೆ ಮಾಡಿ ಕಳುಹಿಸಿದ ಸಂಸದರ ಕರ್ತವ್ಯಗಳು, ಕೇಂದ್ರದಿಂದ ತಮ್ಮಕ್ಷೇತ್ರಕ್ಕೆ ಬೇಕಾದ ಅನುದಾನತರುವುದು, ಇಂತಹ ಕಾರ್ಯಕ್ರಮಗಳ ಬಗ್ಗೆ 'ವಿಕಸಿತಾ ಭಾರತ್‌ಯೂಥ್ ಪಾರ್ಲಿಮೆಂಟ್-2026ರ ಕುರಿತು ಜಿಲ್ಲಾಮಟ್ಟದ ಸ್ಪರ್ಧೆ ಆಯೋಜಿಸಿರುವುದು ಸಂತಸದ ವಿಚಾರ, ವಿವಿ ನಿಲಯದ ವಿದ್ಯಾರ್ಥಿಗಳು ಇಂತಹ ಕಾರ್ಯಕ್ರಮಗಳಲ್ಲಿ




ಹೆಚ್ಚಿನಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿಮಾಡಿದರು.

ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎಂ.ಆರ್. ಗಂಗಾಧರ್‌ಅಧ್ಯಕ್ಷತೆ ವಹಿಸಿದ್ದರು. 57 ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಿ 5 ವಿದ್ಯಾರ್ಥಿಗಳನ್ನು ರಾಜ್ಯ ಮಟ್ಟಕ್ಕೆ ಆಯ್ಕೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಮೌಲ್ಯಮಾಪನ ವಿಭಾಗದ ಕುಲಸಚಿವ ಪ್ರೊ. ಕೆ.ಎಂ ಮಹದೇವನ್, ಸಿಂಡಿಕೇಟ್ ಸದಸ್ಯ ಪುಟ್ಟಸ್ವಾಮಿ, ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ. ಮಹೇಶ್. ಆರ್,ತೀರ್ಪುಗಾರರಾದ ಡಾ.ಪಿ. ದೇವರಾಜು, ಡಾ.ಡಿ.ಜೆ ಶಶಿಕುಮಾರ್, ಶೈಲೇಶ್‌ಕುಮಾರ್, ಡಾ.ಶ್ವೇತಾ, ಗುರುರಾಜ್ ಇತರರು ಹಾಜರಿದ್ದರು

# ಕೈವಾರ ತಾತಯ್ಯನವರ ಕಾಲಜ್ಞಾನ ಇಂದಿಗೂ ಪ್ರಸ್ತುತ

## ಕನ್ನಡ, ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸತೀಶ್ ಹೇಳಿಕೆ

ರಾಮನಗರ: ಮಾನವ ಜನಾಂಗಕ್ಕೆ ಸನ್ಮಾರ್ಗ ತೋರುವತ್ತಾ ಕೈವಾರ ತಾತಯ್ಯನವರು ರಚಿಸಿದ ಕಾಲಜ್ಞಾನ ಇಂದಿಗೂ ಪ್ರಸ್ತುತವಾಗಿದೆ ಎಂದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸತೀಶ್ ಅವರು ತಿಳಿಸಿದರು.

ನಗರದ ಕಂದಾಯ ಭವನದಲ್ಲಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಚೇರಿಯಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆವತಿಯಿಂದ ಹಮ್ಮಿಕೊಳ್ಳಲಾಗಿದ್ದ ಶ್ರೀ ಯೋಗಿನಾರೇಯಣ ಯತೀಂದ್ರರ ಜಯಂತಿ (ಕೈವಾರ ತಾತಯ್ಯ) ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶ್ರೀ ಯೋಗಿ ನಾರಾಯಣ ಯತೀಂದ್ರ (ಕೈವಾರ ತಾತಯ್ಯ) ಅವರು ಒಂದೇ ಸಮುದಾಯಕ್ಕೆ ಸೀಮಿತರಾಗಿಲ್ಲ. ಅವರು ಎಲ್ಲಾ ಸಮುದಾಯಕ್ಕೂ ಸೇರಿದವರಾಗಿದ್ದಾರೆ, ಶ್ರೀ ಯೋಗಿನಾರೇಯಣ ಯತೀಂದ್ರ (ಕೈವಾರ ತಾತಯ್ಯ) ಅವರು ಮುಂದಿನ ಕಾಲಜ್ಞಾನ ಭವಿ?ವನ್ನು ನುಡಿಯುತ್ತಿದ್ದರು ಹಾಗೂ ಇವರ ಮೂಲ ಹೆಸರು ನಾರಾಯಣಪ್ಪ ಇವರು ಕೈವಾರ ತಾತಯ್ಯ ಎಂದು ಪ್ರಸಿದ್ಧರಾಗಿದ್ದರು ಎಂದು ಹೇಳಿದರು.

ಶ್ರೀ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಅವರು ಸುಮಾರು ನೂರ ಹತ್ತು ವರ್ಷಗಳ ಕಾಲ ಬದುಕಿದ್ದರು. ಇವರ ಮೂಲ ಸ್ಥಳ ಚಿಕ್ಕಬಳ್ಳಾಪುರ. ಇವರು ಭಕ್ತಿ ಗೀತೆಗಳು, ತತ್ವಪದಗಳು ಹಾಗೂ ಕಾಲಜ್ಞಾನದ ಭವಿಷ್ಯವನ್ನು ಹೆಚ್ಚಾಗಿ ನುಡಿದಿದ್ದರು ಎಂದರು.

ಬಲಿಜ ಸಮುದಾಯದ ಮುಖಂಡರುಗಳಾದ




### ಮಹನೀಯರ ಚಿಂತನೆಗಳು ಇಂದಿಗೂ ಪ್ರಸ್ತುತ

ಸಮುದಾಯದ ಮುಖಂಡರಾದ ಸುರೇಶ್ ಅವರು ಮಾತನಾಡಿ, ಸಾಧು ಸತ್ಪುರುಷರು, ಶರಣರು ಮತ್ತು ದಾರ್ಶನಿಕರ ನುಡಿಗಳು ಇಂದಿಗೂ ಜನಸಾಮಾನ್ಯರ ಬದುಕನ್ನು ಹಸನಗೊಳಿಸುವ ಮತ್ತು ವಿಚಾರವಂತರನ್ನಾಗಿ ಮಾಡುವ ಮೂಲಕ ನೈತಿಕ ಪ್ರಜ್ಞೆಯನ್ನು ಅರಳಿಸುವ ನಿಟ್ಟಿನಲ್ಲಿ ಮಹನೀಯರ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ. ಅನಕ್ಷರತೆ, ಮೂಢನಂಬಿಕೆಗಳು ನಾಗರೀಕ ಸಮಾಜವನ್ನು ಹಿನ್ನಡೆಯತ್ತ ಕೊಂಡೊಯ್ಯುತ್ತವೆ. ಇವುಗಳಿಂದ ಹೊರಬಂದು ಜ್ಞಾನಾರ್ಜನೆಯಲ್ಲಿ ತೊಡಗಿ ಸಮಾಜವನ್ನು ಮುನ್ನಡಿಸಬೇಕು ಎಂದು ಕೈವಾರ ತಾತಯ್ಯನವರು ತಮ್ಮ ಗೀತೆ, ವಚನಗಳಿಂದ ಸಾರಿದರು ಎಂದು ಹೇಳಿದರು.

ಕಿಶೋರ್ ನಾಯ್ಡು, ಕೃಷ್ಣ, ಬಾಲರಾಜು, ಹನುಮಯ್ಯ, ರಾಮಾಂಜನೇಯ, ರಾಮಣ್ಣ, ರಾಮಚಂದ್ರ, ಅನಂತ ಪದ್ಮನಾಥ, ಗೋಪಾಲಕೃಷ್ಣ, ಮಂಜು, ಶ್ರೀನಿವಾಸ, ರಾಮಸ್ವಾಮಿ, ನರೇಂದ್ರಬಾಬು, ಸುಶ್ಮಿತ, ನರಸಿಂಹಯ್ಯ, ಪದ್ಮನಾಬ್, ನರೇಂದ್ರ ಸೇರಿದಂತೆ ಐದು ತಾಲ್ಲೂಕಿನ ಮುಖಂಡರುಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

ಮೊದಲ ಪುಟದಿಂದ

## ತಾನು ಕಳ್ಳ ಇತರರ ನಂಬ

ಆಗಿದ್ದವರು. ಇನ್ನೊಬ್ಬರು ಉಪ ಮುಖ್ಯಮಂತ್ರಿ ಮತ್ತು ಗೃಹ ಸಚಿವರಾಗಿದ್ದವರು. ಅವರ ಕಾಲದಲ್ಲಿ ಕೂಡಾ ಗುಪ್ತಚರ ವಿಭಾಗ ಮುಖ್ಯಮಂತ್ರಿ ಬಳಿಯೇ ಇತ್ತು. ಅವರ ಹೇಳಿಕೆಗಳನ್ನು ಗಮನಿಸಿದರೆ ಇವರಿಬ್ಬರೂ ತಮ್ಮ ಅನುಭವದ ಬಲದಿಂದಲೇ ಈ ಆರೋಪ ಮಾಡುತ್ತಿರುವಂತೆ ಕಾಣಿಸುತ್ತಿದೆ ಎಂದು ಆರೋಪಿಸಿದ್ದಾರೆ. ನಿರುದ್ಯೋಗಿ ವಿರೋಧ ಪಕ್ಷದ ನಾಯಕರು ಇವರು. ನನ್ನ ಮತ್ತು ಡಿ.ಕೆ.ಶಿವಕುಮಾರ್ ನಡುವಿನ ಸಂಬಂಧಕ್ಕೆ ಹುಳಿ ಹಿಂಡಲು ಪ್ರಯತ್ನಿಸುತ್ತಿದ್ದಾರೆ. ಅದರೊಳಗೆ ತುಂಬಿಕೊಂಡಿರುವ ಹುಳಿ ಖಾಲಿಯಾಗಬಹುದೇ ಹೊರತು, ನಮ್ಮ ಹಾಲು-ಜೇನಿನಂತಹ ಸಂಬಂಧದ ಮೇಲೆ ಯಾವ ಪರಿಣಾಮವೂ ಆಗಲ್ಲ, ಇದು ನಿಮ್ಮಿಬ್ಬರಿಗೂ ತಿಳಿದಿರಲಿ ಎಂದು ಟಾಂಗ್ ಕೊಟ್ಟಿದ್ದಾರೆ. ಸುಳ್ಳು ಸುದ್ದಿಗಳನ್ನು ಹರಡಿ ನಮ್ಮಿಬ್ಬರ ಸಂಬಂಧವನ್ನು ಕೆಡಿಸಲು ಆಗಲ್ಲ. ಡಿಕೆಶಿ ಒಲಿಸಿಕೊಳ್ಳುವ ದುರಾಲೋಚನೆ ಬಿಜೆಪಿ ಮತ್ತು ಜೆಡಿಎಸ್ ನಾಯಕರಿಗೆ ಇದ್ದರೆ, ಅದು ಹಗಲು ಕನಸು. ಶಿವಕುಮಾರ್ ಒಬ್ಬ ಕಟ್ಟಾ ಕಾಂಗ್ರೆಸ್ಸಿಗ. ಸುಳ್ಳು ಕೇಸ್‌ಗಳನ್ನು ಹಾಕಿ, ಜೈಲಿಗೆ ಕಳಿಸಿ ಅವರನ್ನು ಮಣಿಸುವ ಎಲ್ಲ ಪ್ರಯತ್ನಗಳನ್ನು ಬಿಜೆಪಿ ಮಾಡಿಯಾಗಿದೆ. ಇದಕ್ಕೆಲ್ಲ ಮಣಿಯದೆ ಅವರು ಪಕ್ಷಕ್ಕೆ ನಿಷ್ಠರಾಗಿ ಉಳಿದವರು. ಈ ಕುತಂತ್ರಿ ನಾಯಕರಿಗೆ ತಿಳಿದಿರಲಿ ಎಂದು ಕಿಡಿಕಾರಿದ್ದಾರೆ.

ನಮ್ಮದು ಆಂತರಿಕ ಪ್ರಜಾಪ್ರಭುತ್ವ ಇರುವ ಪಕ್ಷ. ನಮ್ಮ ಶಾಸಕರಲ್ಲಿ ಯಾರೂ ಕೂಡಾ ನನ್ನ ಇಲ್ಲವೇ ಡಿ.ಕೆ.ಶಿವಕುಮಾರ್ ಬೆಂಬಲಿಗರಲ್ಲ. ಎಲ್ಲರೂ ಕಾಂಗ್ರೆಸ್ ಪಕ್ಷದ ಬೆಂಬಲಿಗರು. ಪಕ್ಷದ ಶಿಸ್ತಿನ ಚೌಕಟ್ಟಿನೊಳಗೆ ವೈಯಕ್ತಿಕವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸ್ತಾರೆ. ಜೊತೆಯಲ್ಲಿ ಊಟ-ತಿಂಡಿ ಮಾಡುವ ಎಲ್ಲ ಸ್ವಾತಂತ್ರ್ಯ ಅವರಿಗೆ ಇದೆ. ಆದರೆ ಯಾವ ಶಾಸಕರು ಏನನ್ನೇ ಹೇಳಿದರೂ ಅಂತಿಮವಾಗಿ ಹೈಕಮಾಂಡ್ ಆದೇಶಕ್ಕೆ ಬದ್ಧವಾಗಿರಬೇಕು. ಶಾಸಕರು ಸೇರಿದಂತೆ ನಾನು ಮತ್ತು ಶಿವಕುಮಾರ್ ನಮ್ಮ ಪಕ್ಷದ ಹೈಕಮಾಂಡ್ ಆದೇಶಕ್ಕೆ ತಲೆಬಾಗುವವರು ಇದನ್ನು ನಾವಿಬ್ಬರೂ ಒಂದಲ್ಲ ನೂರು ಬಾರಿ ಹೇಳಿದ್ದೇವೆ. ಇದೇ ಅಂತಿಮ ಸತ್ಯ ಎಂದು ಸ್ಪಷ್ಟಪಡಿಸಿದ್ದಾರೆ. ನಾನೇ ಸಿಎಂ ಆಗಿ ಮುಂದುವರಿಯುತ್ತೇನೆ ಎಂದು ಹೇಳದ ಸಿಎಂ ಸಿದ್ದರಾಮಯ್ಯ ನಡೆ ವಿರೋಧಿಗಳ ಕೆಡುವುವ ತಂತ್ರವೋ? ಹೈಕಮಾಂಡ್ ತೀರ್ಮಾನದ ಆತಂಕವೋ? ಎಂಬ ಚರ್ಚೆ ಜೋರಾಗಿದೆ.

ಮೊದಲ ಪುಟದಿಂದ

## ದೇವಾಲಯಗಳು ಕಾಲ ಬಂದ್

ಅವಕಾಶ ಮಾಡಿಕೊಡಲಾ ಯಿತು. ಮಂಗಳವಾರ ತಾಯಿ ಚಾಮುಂಡೇಶ್ವರಿ ವಾರವಾಗಿರುವುದರಿಂದ ದರ್ಶನಕ್ಕೆ ಹೆಚ್ಚಿನ ಸಂಖ್ಯೆ ಯಲ್ಲಿ ಭಕ್ತಾಧಿಗಳು ದಾವಿಸಿದ್ದರು.ಮಧ್ಯಾಹ್ನದಿಂದ ಸಂಜೆವರೆಗೂ ಬಂದ್ ಮಾಡಲಗಿದ್ದ ಕಾರಣ ಕೆಲ ವರು ಹಾಗೆ ಬಂದ ದಾರಿಗೆ ಸುಂಕವಿಲ್ಲ ಎಂಬಂತೆ ವಾಪಸ್ ಹೋದರು. ಕೆಲವರು ಸಂಜೆ ಬಾಗಿಲು ತೆರೆದ ಬಳಿಕ ದರ್ಶನ ಒಡೆದು ಹೋದರು.ಇದೇ ರೀತಿ ಬಹುತೇಕ ದೇವಾಲಯಗಳಲ್ಲಿ ಪೂಜಾ ಕೈಂಕರ್ಯಗಳು ಜರುಗಿ ವಿಶೇಷ ಪೂಜೆಯೊಂದಿಗೆ ಪ್ರಸಾದ ವಿನಿಯೋಗವನ್ನೂ ಮಾಡಲಾಯಿತು. ಗ್ರಹಣ ಹಿನ್ನೆಲೆ ಮೈಸೂರು ನಗರದಾದ್ಯಂತ ಹಲವು ಹೋಟೆಲ್,ಫುಡ್ ಸ್ಟಾಲ್,ಸ್ನ್ಯಾಕ್ಸ್ ಸೆಂಟರ್ ಗಳು ಕೂಡ ಮುಚ್ಚಿದ್ದವು.ಸಂಜೆ ಬಳಿಕ ತೆರೆದಿದ್ದು ಕಂಡು ಬಂತು.

## ಹೆಚ್ಚುವರಿ ಕೇಂದ್ರ ಶೀಘ್ರ

**ಹೆಚ್ಚಿರುವ ಹಿನ್ನೆಲೆಯಲ್ಲಿ ಈಗ ಮತ್ತೆ ಎರಡು ಐಸಿಯೂ ಅನ್ನು 56ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲು ಕ್ರಮವಹಿಸಲಾಗುತ್ತಿದೆ. ನಿತ್ಯ 20ರಿಂದ 25 ಹೆರಿಗೆಗಳು ನಡೆಯುತ್ತಿದ್ದು ಪಿಸಿಕಲ್ ಕೇರ್ ಸೆಂಟರ್ ಪ್ರಾರಂಭಗೊಂಡರೆ ಸಮಸ್ಯೆಗೆ ಪರಿಹಾರ ಸಿಗಲಿದೆ. ರಾಜ್ಯದಲ್ಲೇ ತಾಯಿ-ಶಿಶುವಿನ ಮರಣ ಪ್ರಮಾಣದ ಇಳಿಕೆಯಲ್ಲಿ ನಾವು 2ನೇ ಸ್ಥಾನದಲ್ಲಿದ್ದೇವೆಂದು ಶಾಸಕ ಕೆ. ಹರೀಶ್‌ಗೌಡ ತಿಳಿಸಿದರು.**

# ಮಕ್ಕಳಿಗೆ ಬೌದ್ಧಿಕ, ಶಾರೀರಿಕ, ಆಧ್ಯಾತ್ಮ ಶಿಕ್ಷಣ ಅತ್ಯವಶ್ಯ

ಚಾಮರಾಜನಗರ, ಪ್ರಸ್ತುತ ದಿನಮಾನದಲ್ಲಿ ಬೌದ್ಧಿಕ, ಶಾರೀರಿಕ ಹಾಗೂ ಆಧ್ಯಾತ್ಮಿಕ ಶಿಕ್ಷಣ ಅತ್ಯವಶ್ಯ ಎಂದು ಮರಿಯಾಲ ಮುರುಘರಾಜೇಂದ್ರ ಮಠಾಧೀಶರಾದ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ ಹೇಳಿದರು.

ತಾಲೂಕಿನ ಉಮ್ಮತ್ತೂರು ಗ್ರಾಮದಲ್ಲಿ ಶ್ರೀಗುರು ವಿದ್ಯಾವಿಕಾಸ ಕೇಂದ್ರ ಶಾಲೆಯ (ಎಸ್‌ಜಿವಿಕೆ) 19ನೇ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯೆ ವಿನಯವನ್ನು ಕಲಿಸುತ್ತದೆ ವಿನಯ ಬದುಕಿನ ಮಾರ್ಗವನ್ನು ತಿಳಿಸಿಕೊಡುತ್ತದೆ. ಸಂಸ್ಕಾರದ ಕೊರತೆಯಿಂದ ಅನೇಕ ಮಕ್ಕಳು ದಾರಿ ತಪ್ಪುತ್ತಾರೆ. ಹಾಗಾಗಿ ನಿಮ್ಮ ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ಕೊಡಿಸಿ ಎಂದು ಪೋಷಕರಿಗೆ ಕಿವಿಮಾತು ಹೇಳಿದರು.

ಸಂಸ್ಥೆಯ ಅಧ್ಯಕ್ಷ ಸೋಮಶೇಖರ ಸ್ವಾಮಿ ಮಾತನಾಡಿ, ಗ್ರಾಮೀಣ ಮಕ್ಕಳ ಸರ್ವತೋಮುಖ ಅಭಿವೃದ್ಧಿಗಾಗಿ ಎಸ್‌ಜಿವಿಕೆ ಸಂಸ್ಥೆ ಯಾವಾಗಲೂ ಬದ್ಧವಾಗಿರುತ್ತದೆ. ಶಾಲೆಯಲ್ಲಿ ಮಕ್ಕಳಿಗೆ ಕರಾಟೆ ತರಬೇತಿ ನೀಡಲಾಗುತ್ತಿದ್ದು,



ಮುಂದಿನ ವರ್ಷದಿಂದ ಯೋಗ ಶಿಕ್ಷಣ ನೀಡಲಾಗುವುದು ಹಾಗೆಯೇ 8ನೇ ತರಗತಿ ಆರಂಭಿಸಲಾಗುವುದು ಎಂದರು. ಎನ್.ಎಸ್.ಎಸ್ ರಾಜ್ಯ ಪ್ರಶಸ್ತಿ ಪುರಸ್ಕೃತ ಜಿ. ರವಿಶಂಕರ್ ಮಾತನಾಡಿ, ಗ್ರಾಮೀಣ ಮಕ್ಕಳು ಜ್ಞಾನ ಮತ್ತು ಕೌಶಲ್ಯದ ಜೊತೆಗೆ ಸಂಸ್ಕೃತಿಯನ್ನು ಸಹ ಅಳವಡಿಸಿಕೊಳ್ಳಬೇಕು ಮೊಬೈಲ್ ಗೀಳು ಕಡಿಮೆ ಮಾಡಿಕೊಳ್ಳಬೇಕು. ಗುರಿ ನಿಗದಿ ಮಾಡಿಕೊಂಡು ಗುರುಗಳ ಮತ್ತು ಪೊ?ಷಕರ ಸಹಕಾರದಿಂದ ಉನ್ನತ ಸ್ಥಾನ ಪಡೆಯಬೇಕು ಎಂದರು. ಇದೇ ಸಂದರ್ಭದಲ್ಲಿ ರಾಜ್ಯ ಪರಿಸರ ಪ್ರಶಸ್ತಿ ಪುರಸ್ಕೃತ ಸಾಲು ಮರದ ಸಿ.ಎಂ. ವೆಂಕಟೇಶ್ ಹಾಗೂ ಕರ್ನಾಟಕ ಮಾಧ್ಯಮ ಅಕಾಡೆಮಿ ಪುರಸ್ಕೃತ ಪತ್ರಕರ್ತ ಕೆ.ಎಸ್. ಬನಶಂಕರ ಆರಾಧ್ಯ ಅವರಿಗೆ ಸಂಸ್ಥೆಯ ವತಿಯಿಂದ ಬಸವ ಭಾನು ಪ್ರಶಸ್ತಿ ನೀಡಿ ಗೌರವಿಸಲಾಯಿತು. ನಂತರ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯ ಕ್ರಮಗಳು ನಡೆದವು. ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎಸ್. ಶಿವರಾತ್ರಿ ರಾಜೇಂದ್ರ ಸ್ವಾಮಿ, ನಿವೃತ್ತ ಪ್ರಾಂಶುಪಾಲೆ ಸುನಂದಾ ಭೂಪಾಳಿ, ಕಲಾವಿದ ಉಮ್ಮತ್ತೂರು ಬಸವರಾಜು, ಗ್ರಾ.ಪಂ. ಮಾಜಿ ಅಧ್ಯಕ್ಷರಾದ ರಾಜಮ್ಮ, ಮಹದೇವಸ್ವಾಮಿ, ಯಮುನಾ, ಶಿವಕುಮಾರ್, ಮುಖ್ಯಶಿಕ್ಷಕ ಶಾಂತಮೂರ್ತಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಹೇಳಿಕೆ

# ಗ್ರಹಣ ಮನುಷ್ಯನ ಮೇಲೆ ಪರಿಣಾಮ ಬೀರದು

ಮೈಸೂರು: ಗ್ರಹಣ ಎಂಬುದು ನೈಸರ್ಗಿ ವಿಜ್ಞಾನವಷ್ಟೆ. ಅದು ಸದಾ ಜರುಗುತ್ತಲೇ ಇರುತ್ತದೆ. ಗ್ರಹಣಗಳು ನಡೆಯುತ್ತಲೇ ಇರುತ್ತದೆ. ಆದರೆ ಅವುಗಳು ಮನುಷ್ಯನ ಮೇಲೆ ಯಾವುದೇ ರೀತಿಯ ದುಷ್ಪರಿಣಾಮ ಬೀರುವುದಿಲ್ಲ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಎಲ್.ಎನ್.ಮುಕುಂದರಾಜ್ ಹೇಳಿದರು.

ನಗರದ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಅನ್ವೇಷಣಾ ಸೇವಾ ಟ್ರಸ್ಟ್ ವತಿಯಿಂದ ಮಂಗಳವಾರ ನಡೆದ ಚುಟುಕು ರತ್ನ ಡಾ.ಎಂ.ಅಕಬರ ಅಲಿ 101ನೇ ಹುಟ್ಟುಹಬ್ಬ ಅರಸು ಪತ್ರಿಕೆ 13ನೇ ವರ್ಷದ ವಿಶೇಷ ಸಂಚಿಕೆ ಲೋಕಾರ್ಪಣೆಯ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ಸೂರ್ಯ, ಚಂದ್ರ, ಭೂಮಿ ಮನುಷ್ಯನನ್ನು ಕಾಪಾಡುವುದಕ್ಕೆ ಇರುವ ದೇವತೆಗಳು. ನಮ್ಮ ಹಿರಿಯರು ಸೂರ್ಯ, ಚಂದ್ರ, ಭೂಮಿಯನ್ನು ಪೂಜೆ ಮಾಡಿದ ಹಾಗೆ ಬೇರೆ ಯಾರನ್ನೂ ಪೂಜೆ ಮಾಡಿಲ್ಲ. ಇಂದಿಗೂ




ಸಹ ಎಷ್ಟೋ ಹಿರಿಯರು ಬೆಳಿಗ್ಗೆ ತಕ್ಷಣ ಆಕಾಶದತ್ತ ನೋಡಿ ಸೂರ್ಯನಿಗೆ ನಮಸ್ಕರಿಸುತ್ತಾರೆ ಎಂದರು. ಇಡೀ ಜೀವ ಸಂಕುಲಕ್ಕೆ ಸೂರ್ಯ, ಚಂದ್ರ, ಭೂಮಿ ದೇವತೆಗಳು. ಬಸವಾದಿ ಶರಣರು ರಾಹುಕಾಲ, ಗುಳಿಕಾಲವೂ ಇಲ್ಲ. ನಮ್ಮ ಹಿರಿಯರು ಹೇಳುವ ಕಾಲವೇ ಅತ್ಯುತ್ತಮ ಕಾಲ ಎಂದು ಹೇಳಿದ್ದಾರೆ. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಪಂಪ ಮೌಢ್ಯಕ್ಕೆ ತೋರಿಸುವ ಪ್ರತಿರೋಧವನ್ನು ನಾವು ತಿಳಿದುಕೊಳ್ಳಬೇಕು. ಈ ಕಾಲದಲ್ಲಿ ಕುವೆಂಪು ಅವರು ಮೌಢ್ಯಕ್ಕೆ ಹೆಚ್ಚು ಪ್ರತಿರೋಧ ತೋರಿದವರು ಮತ್ತು ವಿಜ್ಞಾನದ ಮಹತ್ವನ್ನು ತಿಳಿಸಿದವರು ಕುವೆಂಪು ಅವರಾಗಿದ್ದಾರೆ. ವಿಜ್ಞಾನದಿಂದ ಸಕಲವನ್ನು ಪಡೆದಿದ್ದೇವೆ. ಹಿಂದೆ ಹಿರಿಯರು ಕಲ್ಲಿನಲ್ಲಿ ಖಾರವನ್ನು ಅರೆಯುತ್ತಿದ್ದರು, ಅಕ್ಕಿ ರುಬ್ಬುತ್ತಿದ್ದರು, ಆದರೆ ಇಂದು ಕಾಲ ಬದಲಾಗಿದೆ. ಆದರೆ ಇಂದು ಯಾರು ಶ್ರಮ ಪಡುತ್ತಿಲ್ಲ ಪ್ರತಿಯೊಂದಕ್ಕೂ ಯಂತ್ರ ಬಂದಿದೆ. ಯಾವುದನ್ನೂ ಬೇಕಾದರೂ ಪಡೆದುಕೊಳ್ಳುವಷ್ಟು ಪರಿಸ್ಥಿತಿ ಬಂದಿದೆ ಎಂದು ತಿಳಿಸಿದರು. ಇಂಹತ ಕಾಲದಲ್ಲೂ ವಿಜ್ಞಾನವನ್ನು ಮರೆತು ಅಜ್ಞಾನವನ್ನು ಮೈ ಮೇಲೆ ಎಳೆದುಕೊಂಡರೆ ಮತ್ತೆ ನಾವು ವಾಪಸ್ ಶಿಲಾಯುಗಕ್ಕೆ ಹೋಗುತ್ತೇವೆ. ನಾವೇ ಗ್ರಹಗಳೆ ಹೊರತು ಬೇರೆ ಯಾವ ಗ್ರಹಗಳು ನಮ್ಮ ಮೇಲೆ ಪ್ರಭಾವ ಬೀರುವುದಿಲ್ಲ. ನಾವು ಈ ಭೂಮಿಯನ್ನು ಕೆಟ್ಟದಾಗಿ ನಾಶ ಮಾಡುತ್ತಿರುವಷ್ಟು ಬೇರೆ ಯಾವ ಪ್ರಾಣಿ, ಪಕ್ಷಿ, ಗಿಡ, ಮರ ಹಾಗೂ ಯಾವೊದು ಇನ್ನೊಂದು ಗ್ರಹದ ಜೀವಿ ನಾಶ ಮಾಡುತ್ತಿಲ್ಲ ಎಂದರು. ಕಾರ್ಯಕ್ರಮದಲ್ಲಿ ಮಾಜಿ ಸಚಿವ ಎಂ.ಶಿವಣ್ಣ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ವಿಶ್ರಾಂತ ಜಂಟಿ ನಿರ್ದೇಶಕ ಶ್ರೀನಿವಾಸ ಬಹದ್ದೂರ್, ಚುಟುಕು ಯುಗಾಚಾರ್ಯ ಡಾ.ಎಂ.ಜಿ.ಆರ್. ಅರಸ್, ಸಂಧ್ಯಾ ಸುರಕ್ಷಾ ಟ್ರಸ್ಟ್ ಅಧ್ಯಕ್ಷ ಡಾ.ಬಿ. ಆರ್.ನಟರಾಜ ಜೋಯಿಸ್ ಸೇರಿ ಇತರರಿದ್ದರು.

# ಒಳ ಮೀಸಲಾತಿ ಆಧಾರದಲ್ಲಿ ಹುದ್ದೆಗಳನ್ನು ಭರ್ತಿ ಮಾಡಿ



ಚಾಮರಾಜನಗರ: ಪರಿಶಿಷ್ಟ ಜಾತಿಯ ಶೇ.15 ರಷ್ಟು ಒಳ ಮೀಸಲಾತಿಯಲ್ಲಿ ಎಡಗೈ ಸಮುದಾಯಕ್ಕೆ ಅವಕಾಶ ಕಲ್ಪಿಸಬೇಕು ಎಂದು ಕರ್ನಾಟಕ ಮಾದರ ಮಹಾಸಭಾದ ಜಿಲ್ಲಾಧ್ಯಕ್ಷ ಎಂ.ಶಿವಮೂರ್ತಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, 56,342 ಖಾಲಿ ಹುದ್ದೆಗಳ ಭರ್ತಿಯಲ್ಲಿ ಶೇ15 ರಲ್ಲಿಯೂ ಒಳ ಮೀಸಲಾತಿಯನ್ನು ಗ್ರೂಪ್–ಎ, ಬಿ, ಸಿ ಜಾರಿಗೊಳಿಸಲು ಸಂಬಂಧಿತ ಆದೇಶಗಳನ್ನು ತಕ್ಷಣ ತಿದ್ದುಪಡಿ ಮಾಡಿ ಶೇ.56 ರಷ್ಟು ಮೀಸಲಾತಿಯನ್ನು ಸಂವಿಧಾನದ 9ನೇ ಅನುಸೂಚಿಯಲ್ಲಿ ಷೆಡ್ಯೂಲ್‌ಗೆ 9ಗೆ ಸೇರಿಸಬೇಕು ಎಂದು ಆಗ್ರಹಿಸಿದರು. 2024 ಆಗಸ್ಟ್ 1ರ ಸುಪ್ರೀಂ ಕೋರ್ಟ್ ತೀರ್ಪಿನಂತೆ ಪರಿಶಿಷ್ಟ ಜಾತಿ ಒಳ ಮೀಸಲಾತಿ ಜಾರಿ ಮಾಡಲು ಆಯಾ ರಾಜ್ಯಗಳಿಗೆ ಆದೇಶದ ಮೇಲೆ ರಾಜ್ಯ ಸರ್ಕಾರವು ನಿವೃತ್ತ ನ್ಯಾಯಮೂರ್ತಿಗಳಾದ ಹೆಚ್.ಎನ್.ನಾಗಮೋಹನದಾಸ್ ಆಯೋ ಗವನ್ನು ರಚನೆ ಮಾಡಿ ಹೊಸದಾಗಿ 101 ಜಾತಿಗಳ ಸಮೀಕ್ಷೆಯನ್ನು ನಡೆಸಿತ್ತು. ಅದರಲ್ಲಿ ಹೆಚ್.ಎನ್.ನಾಗಮೋಹನದಾಸ್ ರವರು 5 ಗುಂಪುಗಳನ್ನಾಗಿ ಮಾಡಿತು. ಈ ವರದಿಯನ್ನು ಸರ್ಕಾರ ಪರಿಷ್ಕರಿಸಿ ಎಬಿಸಿ ಗುಂಪುಗಳಾಗಿ ಮಾರ್ಪಾಡು ಮಾಡಿ ಎಡಗೈ ಸಮುದಾಯಕ್ಕೆ ಶೇ 6 ರಷ್ಟು ಬಲಗೈ ಸಮುದಾಯಕ್ಕೆ ಶೇ6 ರಷ್ಟು ಮತ್ತು ಕೊರಚ, ಕೊರಮ, ಲಂಬಾಣಿ, ಬೋವಿ ಮತ್ತು ಅಲೆಮಾರಿ ಸಮುದಾಯಗಳಿಗೆ ಶೇ 5 ರಷ್ಟು ಎಂದು ವರ್ಗೀಕರಿಸಿ 2025 ಆಗಸ್ಟ್ 19ರಂದು ನಡೆದ ಸಚಿವ ಸಂಪುಟದಲ್ಲಿ ಒಪ್ಪಿಗೆ ಪಡೆದು ಆದಾದ ನಂತರ ಸದನದಲ್ಲಿಯೂ ಕೂಡ ಅಂಗೀಕಾರವಾಗಿದೆ. ತದನಂತರ ರಾಜ್ಯಪಾಲರಿಗೆ ಆಯೋಗದ ವರದಿಯನ್ನು ಕಳುಹಿಸಿ ರಾಜ್ಯಪಾಲರು ಅಂತಿಮವಾಗಿ ಆದೇಶಕ್ಕೆ ಸಹಿ ಹಾಕಿರುತ್ತಾರೆ. ಅಲ್ಲಿಯ ತನಕ ಯಾವುದೇ ಹುದ್ದೆಗಳನ್ನು ಭರ್ತಿ ಮಾಡುವುದಿಲ್ಲವೆಂದು ರಾಜ್ಯ ಸರ್ಕಾರದ ಭರವಸೆಯನ್ನು ನೀಡಿತ್ತು. ಆದರೆ ಈವಾಗ ದಾರವಾಡದಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ಮಾಡಿದ್ದರೆಂದು ಹೇಳಿ 35 ವರ್ಷಗಳ ಮಾದಿಗರ ಹೋರಾಟವನ್ನು ಕೇವಲ 3 ದಿನಕ್ಕೆ ಮಣ್ಣು ಮಾಡಿ ಹಳೆ ಮೀಸಲಾತಿ ಶೇಕಡ 15 ರಂತೆ ಒಳ ಮೀಸಲಾತಿ ಇಲ್ಲದೆ ತುಂಬುತ್ತೇವೆಂದು ಸರ್ಕಾರದ ಅಧಿಕಾರಿಗಳು ತರಾತುರಿಯಲ್ಲಿ ಪ್ರಕಟಣೆಯನ್ನು ಮಾಡಿರುವುದು ಮಾದಿಗರ ಪಾಲಿಗೆ ಮರಣ ಶಾಸನವನ್ನು ಹೊರಡಿಸಿದಂತಾಗಿದೆ ಎಂದು ಆರೋಪಿಸಿದರು.

**ಹಳೆ ಮೀಸಲಾತಿ ಆಧಾರದಲ್ಲಿ ಹುದ್ದೆಗಳನ್ನು ಭರ್ತಿ ಮಾಡಿದರೆ ಉಗ್ರ ಹೋರಾಟ**

ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಸಿದ್ದರಾಮಯ್ಯ ಅವರನ್ನು ಮಾದಿಗರು ನಂಬಿ ಮತ ನೀಡಿದರು. ಈ ನಡೆಯನ್ನು ಕರ್ನಾಟಕ ಮಾದರ ಮಹಾ ಸಭಾ ಖಂಡಿಸುತ್ತದೆ. ನೆರೆಯ ರಾಜ್ಯಗಳಾದ ತೆಲಂಗಾಣ, ಆಂಧ್ರಪ್ರದೇಶದಲ್ಲಿ ನೂತನ ಒಳ ಮೀಸಲಾತಿಯಂತೆ ಶಿಕ್ಷಣ, ಉದ್ಯೋಗ, ಮುಂಬಡ್ತಿ ಮತ್ತು ಬ್ಯಾಕ್ ಲಾಗ್ಲಾಕ್ ಹುದ್ದೆಗಳನ್ನು ನೀಡುತ್ತಿದೆ. ಅದೇ ಮಾದರಿಯಲ್ಲಿ ನೀವು ತೀರ್ಮಾನ ಮಾಡಿ ಕರ್ನಾಟಕದ ಪರಿಶಿಷ್ಟ ಜಾತಿಯ 15% ಒಳ ಮೀಸಲಾತಿಯಲ್ಲಿ ಎಡಗೈ ಜನಾಂಗಕ್ಕೆ ಅವಕಾಶವನ್ನು ಕಲ್ಪಿಸಿ ಬದ್ಧತೆಯನ್ನು ತೋರಬೇಕು. ಇಲ್ಲವಾದಲ್ಲಿ ರಾಜ್ಯಾದ್ಯಂತ ಮಾದಿಗರು ಪ್ರತಿಭಟನೆಯನ್ನು ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಸರ್ಕಾರವನ್ನು ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕರ್ನಾಟಕ ಮಾದರ ಮಹಾಸಭಾ ಕೊಳ್ಳೇಗಾಲ ತಾಲ್ಲೂಕು ಅಧ್ಯಕ್ಷ ಸಿ.ಸೋಮು, ಹನೂರು ತಾಲೂಕು ಅಧ್ಯಕ್ಷ ಸುದೇಶ್, ಚಾಮರಾಜನಗರ ತಾಲೂಕು ಅಧ್ಯಕ್ಷ ಎಂ.ರಾಜು, ಗುಂಡ್ಲುಪೇಟೆ ತಾಲೂಕು ಅಧ್ಯಕ್ಷ ಅಂಕಹಳ್ಳಿ ಸಿದ್ದಯ್ಯ, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ಕೆ.ಜಗದೀಶ್,ಕೊಳ್ಳೇಗಾಲ ತಾಲೂಕು ಬಾಬುಜಗಜೀವನರಾಂ ಸಂಘದ ಅಧ್ಯಕ್ಷ ಬಿ.ಬಾಲರಾಜು ಹಾಜರಿದ್ದರು.

# ರಾಜ್ಯ ಸರ್ಕಾರ ಗ್ಯಾರಂಟಿ ಹೆಸರಿನಲ್ಲಿ ದಲಿತರಿಗೆ ಮೋಸ

**ಬಿಜೆಪಿ ಎಸ್‌ಸಿ ಮೋರ್ಚಾದ ಜಿಲ್ಲಾಧ್ಯಕ್ಷ ನವೀನ್ ಮೌರ್ಯ ಆರೋಪ**



ಚಾಮರಾಜನಗರ: ಮುಖ್ಯಮಂತ್ರಿ ಸಿದ್ದರಾಮಯ್ಯನವರ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಹೆಸರಿನಲ್ಲಿ ದಲಿತರಿಗೆ ಮೋಸ ಮಾಡುತ್ತಿದ್ದು, ದಲಿತರ ಮೀಸಲು ನಿಧಿಗೆ ಕನ್ನ ಹಾಕುತ್ತಿದೆ ಎಂದು ಬಿಜೆಪಿ ಎಸ್‌ಸಿ ಮೋರ್ಚಾದ ಜಿಲ್ಲಾಧ್ಯಕ್ಷ ನವೀನ್ ಮೌರ್ಯ ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ ಕಳೆದ 3 ವರ್ಷಗಳಿಂದ ಒಟ್ಟು 38.859 ಕೋಟಿ ಗ್ಯಾರಂಟಿ ಯೋಜನೆಗಳಿಗೆ ಬಳಸಿದೆ ಇದನ್ನು ಬಿಜೆಪಿ ಎಸ್‌ಸಿ, ಎಸ್‌ಟಿ ಮೋರ್ಚಾ ತೀವ್ರವಾಗಿ ಖಂಡಿಸುತ್ತದೆ ಎಂದರು. ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಯ ಅನುದಾನಗಳನ್ನು ಅನ್ಯ ಉದ್ದೇಶಗಳಿಗೆ ಬಳಸಬಾರದು ಎಂದು ಕಾನೂನು ಮಾಡಿದರೂ ಕೂಡ ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಬಳಕೆ ಮಾಡಿಕೊಂಡು ದಲಿತರಿಗೆ ಮೋಸ ಮಾಡಿದೆ ಆಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸೇರಿದಂತೆ ಸಂಬಂಧಪಟ್ಟ ಸಚಿವರು, ಅಧಿಕಾರಿಗಳ ಮೇಲೆ ಆಟ್ರಾಸಿಟಿ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಸಬೇಕು ಎಂದು ಒತ್ತಾಯಿಸಿದರು.

ದಲಿತರು, ಅಂಬೇಡ್ಕರ್ ಸಂವಿಧಾನದ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ದಲಿತರಿಗೆ, ಅಂಬೇಡ್ಕರ್‌ರವರಿಗೆ, ಸಂವಿಧಾನಕ್ಕೆ ವಿರುದ್ಧವಾದ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇದೇ ತಿಂಗಳು ಮಂಡಿಸುವ ರಾಜ್ಯ ಬಜೆಟ್ ಗೂ ಮುನ್ನಾ... ಎಸ್‌ಸಿಎಸ್‌ಪಿ, ಬಿಎಸ್‌ಪಿ ಹಣಕ್ಕೆ ಕೈ ಹಾಕುವುದಿಲ್ಲ ಎಂದು ಘೋಷಿಸಬೇಕು. ಸಂವಿಧಾನ ರಕ್ಷಣೆ ಅಭಿಯಾನಕ್ಕೆ ಖಜಾನೆಯಿಂದ ಹಣಕೊಡಬೇಕು. ಕಳೆದ 3 ವರ್ಷದಿಂದ ದುರ್ಬಳಕೆಯಾಗಿರುವ 39 ಸಾವಿರ ಕೋಟಿ ರು ಹಣವನ್ನು ದಲಿತರಿಗೆ ವಾಪಸ್ ಕೊಡಬೇಕು. ಅದರಲ್ಲಿ ಎಲ್ಲ ಜಿಲ್ಲೆಗಳಿಗೆ ತಲಾ ಒಂದೊಂದು ಸಾವಿರ ಕೋಟಿ ಅನುದಾನ ಕೊಡಬೇಕು ಎಂದು ಒತ್ತಾಯಿಸಿದರು.

**ಸಿಎಂಗೆ ಕಪ್ಪು ಬಾವುಟ ಪ್ರದರ್ಶನ ಎಚ್ಚರಿಕೆ**

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್ ಮಾತನಾಡಿ, ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ರಾಜಕಾರಣದಲ್ಲಿ ತುಂಬಾ ಬುದ್ದಿವಂತರು ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿಷಯದಲ್ಲಿ ದಡ್ಡರಂತೆ ವರ್ತಿಸುತ್ತಿದ್ದಾರೆ. ಎಸ್‌ಸಿಎಸ್‌ಪಿ, ಬಿಎಸ್‌ಪಿ, ಅನುದಾನ ದುರ್ಬಳಕೆಯಿಂದ ಮಹದೇವಪ್ಪ ದಲಿತ ಸಮುದಾಯದ ವಿಶ್ವಾಸ ಕಳೆದುಕೊಂಡಿದ್ದಾರೆ. ಅದೇ ರೀತಿಯಲ್ಲಿ ಒಳ ಮೀಸಲಾತಿ ವಿಚಾರದಲ್ಲೂ ಸಮುದಾಯದ ವಿಶ್ವಾಸ ಕಳೆದುಕೊಂಡಿದ್ದಾರೆ ಎಂದು ಆಕ್ರೋಶ ಹೊರಹಾಕಿದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ಬಜೆಟ್ ನಲ್ಲೂ ಎಸ್.ಸಿಎಸ್‌ಪಿ ಟಿಎಸ್ ಪಿ ಅನುದಾನ ದುರ್ಬಳಕೆ ಮಾಡಿಕೊಂಡಿದ್ದೇ ಆದರೆ ಮುಂದಿನ ದಿನಗಳಲ್ಲಿ ಸಿದ್ಧರಾಮಯ್ಯನವರು ಜಿಲ್ಲೆಗೆ ಯಾವುದೇ ಕಾರ್ಯಕ್ರಮಕ್ಕೂ ಬಂದ್ರು ಬಿಜೆಪಿವತಿಯಿಂದ ಅವರಿಗೆ ಕಪ್ಪುಬಾವುಟ ಪ್ರದರ್ಶನ ಮಾಡುವುದಾಗಿ ಎಚ್ಚರಿಸಿದರು. ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಎಸ್‌ಟಿ ಮೋರ್ಚಾದ ಜಿಲ್ಲಾಧ್ಯಕ್ಷ ಚಂದ್ರಶೇಖರ್, ಮುಖಂಡರಾದ ಮೂಡಹಳ್ಳಿ ಮೂರ್ತಿ, ನಾಗರಾಜು, ರಾಮಸಮುದ್ರ ಶಿವಣ್ಣ, ಪ್ರಕಾಶ್ ಹಾಜರಿದ್ದರು.

# ನಾಳೆ ರಾಮನಗರ ನಗರಸಭೆ ಬಜೆಟ್

## 2025–26ನೇ ಸಾಲಿನಲ್ಲಿ ಘೋಷಣೆ ಶೇ.80 ಕಾರ್ಯಕ್ರಮಗಳು ಯಶಸ್ವಿ: ನಗರಸಭಾಧ್ಯಕ್ಷ ಕೆ.ಶೇಷಾದ್ರಿ



ರಾಮನಗರ: ಕಳೆದ ಸಾಲಿನ ಬಜೆಟ್‌ನಲ್ಲಿ ಘೋಷಣೆಯಾಗಿದ್ದ ಕಾರ್ಯಕ್ರಮಗಳ ಪೈಕಿ ಶೇ80ರಷ್ಟು ಕಾರ್ಯಕ್ರಮಗಳನ್ನು ಪೂರ್ಣಗೊಳಿಸಿದ್ದೇವೆ, ಮುಂದಿನ ವರ್ಷದಲ್ಲಿ ಉಳಿದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತೇವೆ. ನಮ್ಮದು ನುಡಿದಂತೆ ನಡೆವ ಆಡಳಿತ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಹೇಳಿದರು.

ನಗರಸಭೆಯ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. 2025–26ನೇ ಸಾಲಿನಲ್ಲಿ ಆಸ್ತಿ ತೆರಿಗೆ ಸೇರಿದಂತೆ ಉಳಿದ ಮೂಲಗಳಿಂದ 9 ಕೋಟಿ ರೂ ಆದಾಯವನ್ನು ನಿರೀಕ್ಷಿಸಲಾಗಿತ್ತು. ನಗರಸಭೆಗೆ ಈ ಆದಾಯ ಸಂದಾಯವಾಗಿದೆ. ಒಟ್ಟು ಆದಾಯದಲ್ಲಿ ಅಂಗಡಿ/ಉದ್ಯಮ ಪರವಾನಗಿಯಿಂದ ರೂ.28.65 ಲಕ್ಷಗಳು, ಘನ ತ್ಯಾಜ್ಯ ಶುಲ್ಕದಿಂದ ಸುಮಾರು 70 ಲಕ್ಷ ರೂಗಳ ಆದಾಯವೂ ಸಂದಾಯವಾಗಿದೆ ಎಂದರು.

**ಎಸ್.ಎಫ್.ಸಿ ಅನುದಾನ 183 ಲಕ್ಷ ರೂ**

ಎಸ್.ಎಫ್.ಸಿ (ಮುಕ್ತನಿಧಿ) ಯೋಜನೆಯಡಿಯಲ್ಲಿ ಸರ್ಕಾರದಿಂದ 183.54 ಲಕ್ಷ ರೂ ಅನುದಾನ ಬಂದಿದೆ. ಈ ಪೈಕಿ ಪೌರಕಾರ್ಮಿಕರ ವೇತನ ಪಾವತಿಸಲಾಗಿದೆ. ಇದೇ ಅನುದಾನದ ಪೈಕಿ ಶೇ 24.10ರಷ್ಟು ಮೊತ್ತವನ್ನು ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಗೆ 48 ಲಕ್ಷ ರೂಗಳು ಹಂಚಿಕೆಯಾಗಿದೆ ಎಂದರು. ಎಸ್.ಎಫ್.ಸಿ ವೇತನ ಅನುದಾನದಲ್ಲಿ 689 ಲಕ್ಷ ರೂಗಳು ಬಿಡುಗಡೆಯಾಗಿದ್ದು, ಖಾಯಂ ಅಧಿಕಾರಿ, ನೌಕರರು, ಪೌರಕಾರ್ಮಿಕರು ಮತ್ತು ಇತರೆ ಸಿಬ್ಬಂದಿಗಳ ವೇತನಕ್ಕೆ ಬಳಸಿಕೊಳ್ಳಲಾಗಿದೆ. ಎಸ್.ಎಫ್.ಸಿ ವಿದ್ಯುತ್ ಅನುದಾನ ಬಿಡುಗಡೆಯಾಗಿದ್ದು, 194.50 ಲಕ್ಷ ರೂಗಳನ್ನು ನಗರದ ಬೀದಿದೀಪಗಳ ನಿರ್ವಹಣೆಗಾಗಿ ಬಳಸಿದೆ ಎಂದರು.

**ಮಾರ್ಚ್ 5ರಂದು ಬಜೆಟ್ ಮಂಡನೆ**

2026–27ನೇ ಸಾಲಿಗೆ ಇದೇ ಮಾರ್ಚ್ 5ರಂದು ಬಜೆಟ್ ಮಂಡನೆಗಾಗಿ ವಿಶೇಷ ಸಭೆಯನ್ನು ಆಯೋಜಿಸಲಾಗಿದೆ ಎಂದು ಅವರು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ನಗರಸಭೆಯ ಉಪಾಧ್ಯಕ್ಷೆ ಗಿರಿಜಮ್ಮ, ಸ್ಥಾಯಿ ಸಮಿತಿ ಅಧ್ಯಕ್ಷ ಫೈರೋಜ್‌ಪಾಷ, ಸದಸ್ಯರುಗಳಾದ ಅಕ್ಲಿಮ್, ಸೋಮಶೇಖರ್, ಪಾರ್ವತಮ್ಮ, ಪವಿತ್ರ, ಆರಿಫ್, ಗೋವಿಂದರಾಜು, ನಾಗಮ್ಮ, ಅಜ್ಮತ್ ಮುಂತಾದವರು ಉಪಸ್ಥಿತರಿದ್ದರು.

### ಸ್ವಚ್ಛ ಭಾರತ್ ಮಿಷನ್

ಕೇಂದ್ರ ಸರ್ಕಾರದ ಸ್ವಚ್ಛ ಭಾರತ್ ಮಿಷನ್ 1.0 ಮತ್ತು 2.0 ಯೋಜನೆಯಡಿಯಲ್ಲಿ ಹಲವಾರು ಕಾರ್ಯಕ್ರಮಗಳು ನಿರ್ವಹಿಸಲಾಗಿದೆ. ಈ ಪೈಕಿ ಘನತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿ ಸ್ಥಳದಲ್ಲಿ ಸಂಸ್ಕರಣಾ ಶೆಡ್ ನಿರ್ಮಾಣಕ್ಕಾಗಿ78.50 ಲಕ್ಷ ರೂ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ. ಇಲ್ಲಿ ಕಾಂಪೌಂಡ್ ಗೋಡೆ, ಸಿಸಿಡ್ರೈನ್ ಮತ್ತು ಕಲ್ವರ್ಟ್, ಲೀಚೆಟ್ ಸಂಸ್ಕರಣಾ ಘಟಕ ನಿರ್ಮಾಣ, ಸ್ಯಾನಿಟರಿ ಲ್ಯಾಂಡ್‌ಫಿಲ್ ಟ್ಯಾಂಕ್‌ಗಳ ನಿರ್ಮಾಣ, ಸಂಪರ್ಕ ರಸ್ತೆ ನಿರ್ಮಾಣ, ಕಚೇರಿ ಕಟ್ಟಡ ನಿರ್ಮಾಣ ಇತ್ಯಾದಿ ನಿರ್ಮಾಣ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ. ಸಾರ್ವಜನಿಕ ಶೌಚಾಲಯಗಳ ನಿರ್ಮಾಣ, ಮೆಟಿರಿಯಲ್ ರಿಕವರಿ ಫೆಸಿಲಿಟಿ ಮುಂತಾದ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿವೆ ಎಂದು ತಿಳಿಸಿದರು.

### ಮೇಲ್ದರ್ಜೆಗೆ ಪ್ರಸ್ತಾವನೆ

ರಾಮನಗರ ನಗರಸಭೆಯನ್ನು ಗ್ರೇಡ್ 2ರಿಂದ ಗ್ರೇಡ್ 1 ನಗರಸಭೆಗೆ ಮೇಲ್ದರ್ಜೆಗೇರಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ತಿಳಿಸಿದರು.
ಪ್ಲಾಸ್ಟಿಕ್ ಬಳಕೆಯನ್ನು ನಿಷೇದಿಸುವ ನಿಟ್ಟನಲ್ಲಿ ನಗರದ ನಾಗರೀಕರನ್ನು ಪ್ರೋತ್ಸಾಹಿಸುವ ನಿಟ್ಟನಲ್ಲಿ ನಗರಸಭೆವತಿಯಿಂದ 10 ಸಾವಿರ ಕೈಚೀಲಗಳನ್ನು ಮಹಿಳೆಯರಿಗೆ ವಿತರಿಸಲಾಗಿದೆ.
ನಗರ ವ್ಯಾಪ್ತಿಯ 17 ಸಾಧಕರಿಗೆ ಕೆಂಗಲ್ ಹನುಮಂತಯ್ಯ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.
ಡಾ.ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ಅದ್ದೂರಿಯಾಗಿ ಮತ್ತು ಅರ್ಥಪೂರ್ಣವಾಗಿ ಆಚರಿಸಲಾಗಿದೆ. ರೇಷ್ಮೆನಾಡ ಕನ್ನಡ ಹಬ್ಬವನ್ನು ಆಚರಿಸಿ ಮಾಜಿ ಶಾಸಕ ಸಿ.ಎಂ.ಲಿಂಗಪ್ಪ ಅವರಿಗೆ ಪೌರಸನ್ಮಾನ ನೆರವೇರಸಲಾಗಿದೆ.
ಪೌರಕಾರ್ಮಿಕರು ನಮ್ಮ ಸ್ವಚ್ಚತಾ ಸೇನಾನಿಗಳು. ಅವರಿಗೆಲ್ಲ ಆರೋಗ್ಯ ತಪಾಸಣೆ, ವೈದ್ಯಕೀಯ ವಿಮೆಮಾಡಿಸಲಾಗಿದೆ ಎಂದರು.
ಸ್ವಚ್ಚ ರಾಮನಗರ ನಮ್ಮ ಕನಸು. ಇದನ್ನು ಸಾಕಾರಗೊಳಿಸಲು ನಗರಸಭಾ ಸದಸ್ಯರು ಮತ್ತು ಅಧಿಕಾರಿಗಳು ಇಂಡೋರ್ ನಗರಕ್ಕೆ ಭೇಟಿ ಕೊಟ್ಟು ಅಧ್ಯಯನ ನಡೆಸಲಾಗಿದೆ ಎಂದರು.
ದೀನ್‌ದಯಾಳ್ ಅಂತ್ಯೋದಯ ಯೋಜನೆಯ, ಕೇಂದ್ರ ಸರ್ಕಾರದ 15ನೇ ಹಣಕಾಸು ಯೋಜನೆ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮಗಳ ಬಗ್ಗೆ ಅವರು ಮಾಹಿತಿ ಕೊಟ್ಟರು.

### ಇವು ಬಾಕಿ ಇವೆ. ಕೈಗೆತ್ತಿಕೊಳ್ಳುತ್ತೇವೆ

ಕಳೆದ ಸಾಲಿನ ಬಜೆಟ್‌ನಲ್ಲಿ ಘೋಷಣೆಯಾ ಗಿದ್ದ್ ಕೆಲವು ಕಾರ್ಯಕ್ರಮಗಳನ್ನು ಪೂರ್ಣಗೊ ಳಿಸಲಾಗಲಿಲ್ಲ. ಈಕಾರ್ಯಕ್ರಮಗಳನ್ನು ಈಗ ಕೈಗೆತ್ತಿಕೊಳ್ಳುತ್ತೇವೆ. ಈ ಪೈಕಿ ರಾಮನಗರ ನಗರ ಸಭಾ ವ್ಯಾಪ್ತಿಯ ಸಾರ್ವಜನಿಕರಲ್ಲಿ ಪರಿಸರ ಜಾಗೃತಿ ಬಗ್ಗೆ ಅರಿವು ಮೂಡಿಸಲು ಸುಮಾರು 2000 ಗಿಡಗಳನ್ನು ನೆಡುವುದು, ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಶಾಲಾ–ಕಾಲೇಜುಗ ಳಲ್ಲಿ ಪರಿಸರ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳುವುದು, ಅರ್ಕಾವತಿ ನದಿ ಪಕ್ಕದಲ್ಲಿರುವ ಡಾ॥ ರಾಜ್ ಕುಮಾರ್ ಕಾಂಪ್ಲೆಕ್ಸ್ ನವೀಕರಣ, ಕೆ.ಎಸ್.ಆರ್.ಟಿ. ಬಸ್ ನಿಲ್ದಾಣದ ಬಳಿ ಸ್ಮಾರ್ಟ್ ಬಸ್ ನಿಲ್ದಾಣ, ಸ್ಮಾರ್ಟ್ ಪಾರ್ಕ್ ನಿರ್ಮಾಣ ಮುಂತಾದ ಕಾರ್ಯಕ್ರಮಗಳನ್ನು ಮುಂದಿನ ದಿನಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು ಎಂದು ಅವರು ತಿಳಿಸಿದರು.

# 6ರಿಂದ ಗಾಂಧಿ ಶಿಲ್ಪಬಜಾರ್

ಮೈಸೂರು: ನಗರದ ಹೆಬ್ಬಾಳ ವರ್ತುಲ ರಸ್ತೆಯಲ್ಲಿನ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ ಮಾ. 6 ರಿಂದ 15 ರವರೆಗೆ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮೇಳ– ಗಾಂಧೀ ಶಿಲ್ಪ ಬಜಾರ್ ಮೇಳ ಆಯೋಜಿಸಲಾಗಿದೆ ಎಂದು ಕೇಂದ್ರ ಸರ್ಕಾರದ ಕರಕುಶಲ ಅಭಿವೃದ್ಧಿ ಸೇವಾ ಕೇಂದ್ರದ ಕರಕುಶಲ ಉತ್ತೇಜನ ಅಧಿಕಾರಿ ಸಬೀರಾ ತಿಳಿಸಿದರು.



ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ಬಾರಿ 70 ಮಳಿಗೆಗಳಲ್ಲಿ ಆಯೋಜನೆ ಮಾಡಲಾಗಿದೆ. ದೇಶದ ವಿವಿಧ ರಾಜ್ಯಗಳ ಕರಕುಶಲಕರ್ಮಿಗಳು ಹಾಗೂ ಕೈಮಗ್ಗ ನೇಕಾರರು ಕರಕುಶಲ ಮತ್ತು ಕೈಮಗ್ಗ ಉತ್ಪನ್ನಗಳನ್ನು ಪ್ರದರ್ಶನ ಮತ್ತು ಮಾರಾಟ ಮಾಡಲಿದ್ದಾರೆ. ಮರದ ಕೆತ್ತನೆ, ಶಿಲಾ ಶಿಲ್ಪ, ಕಂಚಿನ ವಿಗ್ರಹಗಳು, ಮರದ ಕುಂದಣ ಕಲೆ, ಮಣ್ಣಿನ ಮಡಿಕೆಗಳು, ಪೇಪರ್, ರತ್ನಗಂಬಳಿ, ಹತ್ತಿ ಜಮಕಾನ, ಇಮಿಟೇಶನ್ ಆಭರಣಗಳು, ಮರದ ಅರಗಿನ ಕಲಾವಸ್ತುಗಳು, ಬಾಟಿಕ್, ಕಲಾಂಕಾರಿ ಚಿತ್ರಕಲೆ, ಚರ್ಮದ ಆಕರ್ಷಕ ವಸ್ತುಗಳು, ಕಲಾತ್ಮಕ ಚರ್ಮದ ಚಪ್ಪಲಿಗಳು, ಚನ್ನಪಟ್ಟಣದ ಗೊಂಬೆಗಳು, ಕಸೂತಿ ಕಲೆ, ತಮಿಳುನಾಡು ರಾಜ್ಯದ, ಮರದ ಕೆತ್ತನೆಗಳು, ಮಧ್ಯಪ್ರದೇಶ ರಾಜ್ಯದ ಮಹೇಶ್ವರಿ, ಚಂದೇರಿ ಸೀರೆಗಳು, ಬಿಹಾರ್ ರಾಜ್ಯದ ಮಧುಬನಿ ಚಿತ್ರಕಲೆ ಮೊದಲಾದವು ಇರಲಿವೆ ಎಂದರು. ಒಡಿಶಾ ರಾಜ್ಯದ ಪಟ್ಟ ಚಿತ್ರ, ಬೆಳ್ಳಿಯ ಸೂಕ್ಷ್ಮ ವಿನ್ಯಾಸ ವಸ್ತುಗಳು, ಅಸ್ಸಾಂ ರಾಜ್ಯದ ಬಿದಿರು–ಬೆತ್ತದ ವಸ್ತುಗಳು, ಡ್ರೈ ಫ್ಲವರ್‌ಗಳು, ಉತ್ತರ ಪ್ರದೇಶ ರಾಜ್ಯದ ಚಿಕನ್ ಎಂಬ್ರಾಯ್ಡರಿ, ಕಲಾತ್ಮಕ ಕಲ್ಲಿನ ವಸ್ತುಗಳು, ಪಂಜಾಬ್ ರಾಜ್ಯದ ಫುಲ್ಕಾರಿ ಬಟ್ಟೆಗಳು, ಪಶ್ಚಿಮ ಬಂಗಾಳದ ಕಾಂತಾ ಸೀರೆಗಳು, ಕರಕುಶಲ ಉತ್ಪನ್ನಗಳು ಈ ಮೇಳದಲ್ಲಿ ಲಭ್ಯವಿರುತ್ತವೆ ಎಂದು ಮಾಹಿತಿ ನೀಡಿದರು. ಅರ್ಬನ್ ಹಾತ್ ಸಂಯೋಜನಾಧಿಕಾರಿ ರಾಕೇಶ್ ರೈ ಮಾತನಾಡಿ, ಮಧ್ಯವರ್ತಿಗಳು ಇಲ್ಲದೆ ಕರಕುಶಲಕರ್ಮಿಗಳಿಂದ ಗ್ರಾಹಕರಿಗೆ ನೇರವಾಗಿ ಕೈಗೆಟಕುವ ಬೆಲೆಯಲ್ಲಿ ಲಭ್ಯವಾಗಲಿದೆ. ಗಾಂಧಿ ಶಿಲ್ಪ ಬಜಾರ್ ಮೇಳದಲ್ಲಿ ಭಾಗವಹಿಸುತ್ತಿರುವ ಕುಶಲಕರ್ಮಿಗಳಿಗೆ ಉಚಿತವಾಗಿ ಮಳಿಗೆಗಳನ್ನು ನೀಡಲಾಗುವುದು. ಜತೆಗೆ, ಪ್ರಯಾಣ ಭತ್ಯೆ, ದಿನಭತ್ಯೆನ್ನೂ ಕರಕುಶಲ ಅಭಿವೃದ್ಧಿ ಆಯುಕ್ತರ ಕಚೇರಿಯಿಂದ ನೀಡಲಾಗುವುದು. ಈ ಗಾಂಧೀ ಶಿಲ್ಪ ಬಜಾರ್ ಮೇಳದ ಉದ್ಘಾಟನೆ ಮಾ. 6 ರಂದು ಸಂಜೆ 4 ಕ್ಕೆ ನಡೆಯಲಿದೆ. ಮಾ. 15 ರವರೆಗೆ ಬೆಳಿಗ್ಗೆ ಗಂಟೆ 10.30 ರಿಂದ ರಾತ್ರಿ 9.00ರವರೆಗೆ ಉಚಿತವಾಗಿ ತೆರೆದಿರುತ್ತದೆ ಎಂದು ವಿವರಿಸಿದರು.

# ಉದ್ಯಾನ ಅಭಿವೃದ್ಧಿ ಶ್ರೀವತ್ಸ ಗುದ್ದಲಿಪೂಜೆ



ಮೈಸೂರು: ನಗರದ ಕೆಆರ್ ಕ್ಷೇತ್ರದ ವಾರ್ಡ್ ನಂ.47ರಲ್ಲಿ ಬರುವ ಅಕ್ಬರ್ ಅಲಿ ಉದ್ಯಾನವನ ಅಭಿವೃದ್ಧಿಗೆ ಕೇಂದ್ರ ಸರ್ಕಾರದ ಅಮೃತ್ 2.0 ಯೋಜನೆ ಅಡಿಯಲ್ಲಿ ಕೈಗೊಂಡಿರುವ 50ಲಕ್ಷ ರೂ.ಗಳ ಕಾಮಗಾರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾಜಿ ಮೇಯರ್ ಶಿವಕುಮಾರ್, ಕೆ.ಆರ್.ಕ್ಷೇತ್ರದ ಅಧ್ಯಕ್ಷ ಗೋಪಾಲ್ ರಾಜೇ ಅರಸ್, ಪ್ರಧಾನ ಕಾರ್ಯದರ್ಶಿ ಜಯರಾಮ್, ಬಿಜೆಪಿ ಮುಖಂಡ ಪ್ರದೀಪ್ ಕುಮಾರ್, ಶಾಂತವೀರಪ್ಪ, ಲಕ್ಷ್ಮೀದೇವಿ, ಉಪೇಂದ್ರ, ನಾಗೇಶ್, ಸೋಮ, ಶೋಭಾಮಂಜುನಾಥ್, ಬಸವರಾಜು, ರಮೇಶ್ ಇನ್ನಿತರರು ಉಪಸ್ಥಿತರಿದ್ದರು.

# (ಕೈವಾರ ತಾತಯ್ಯ) ಜಯಂತಿ



ಕೊಳ್ಳೇಗಾಲ: ತಾಲ್ಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಶ್ರೀ ಯೋಗಿನಾರೇಯಣ ಯತೀಂದ್ರ (ಕೈವಾರ ತಾತಯ್ಯ) ಜಯಂತಿ ಸಮಾರಂಭ ಆಯೋಜಿಸಿದ್ದರು.

ಪಟ್ಟಣದ ತಾಲೂಕು ಪಂಚಾಯತಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೈವಾರ ತಾತಯ್ಯರವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸುವ ಮೂಲಕ ಆಚರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತಹಶಿಲ್ದಾರ್ ಬಸವರಾಜು ಮಾತನಾಡಿ, ಕೈವಾರ ತಾತಯ್ಯ ತಮ್ಮ ಕೀರ್ತನೆಗಳ ಮುಖಾಂತರ ಸಮಾಜ ಸುಧಾರಣೆಯಲ್ಲಿ ಕೊಂಟಂತಹ ಕೊಡುಗೆಯನ್ನು ಈ ಸಂಧರ್ಭದಲ್ಲಿ ನಾವೆಲ್ಲರೂ ಶ್ಲಾಘಿಸಬೇಕು. ಅವರು ಹಾಕಿಕೊಟ್ಟಿರುವ ಉತ್ತಮ ಮಾರ್ಗಗಳು ಇಂದಿನ ಸಮಾಜಕ್ಕೆ ಬಹಳ ಪ್ರಸ್ತುತವಾಗಿದ್ದು ಅವುಗಳನ್ನು ಅಳವಡಿಸಿಕೊಂಡು ನಡೆದ್ದಲ್ಲಿ ಉತ್ತಮವಾದ ಸಮಾಜ ಕಟ್ಟಲು ಸಾಧ್ಯವಾಗುವುದು ಎಂದು ತಿಳಿಸಿ, ಅವರ ಭಕ್ತಿ ಮಾರ್ಗದಲ್ಲಿ ನಾವೆಲ್ಲಾ ನಡೆಯೋಣ ಎಂದು ತಿಳಿಸಿದರು.

ತಾ.ಪಂ ಇಒ ಗುರುಶಾಂತಪ್ಪ ಬೆಳ್ಳುಂಗಡಿ ಮಾತನಾಡಿ, ಸ್ವಾರ್ಥ, ಅಹಂನಿಂದಾಗಿ ವಿಶ್ವ ಬಳಲುತ್ತಿದೆ. ಪರಿಸರ ಜಲ, ವಾಯು ತಾಯ್ನಾಡು ನೆನಪಾಗುತ್ತದೆ ಮಹನೀಯರು ತತ್ವ ಆದರ್ಶಗಳನ್ನು ಕೈಗೂಡಿ ಸಿಕೊಂಡು ಮಾನವ ಕುಲದ ನಿರ್ಮಾಣ ಮಾಡುವಲ್ಲಿ ಶ್ರಮಿಸಿದ್ದಾರೆ ಎಂದು ಹೇಳಿದರು. ಬಲಜಿಗ ಅಧ್ಯಕ್ಷ ಟಿ.ಉದಯ್ ಕುಮಾರ್ ಕೈವಾರ ತಾತಯ್ಯ ರವರ ಮಂದಿರ ಸ್ಥಳಕ್ಕೆ ಜಾಗವನ್ನು ನೀಡ ಬೇಕೆಂದು ಮನವಿ ಮಾಡಿದರು. ಈ ಸಂಧರ್ಭದಲ್ಲಿ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ, ರಾಜೇಂದ್ರ, ಶ್ರೀ ಬಲಜಿಗ ಕುಲಬಾಮದವರ ಸಂಘದ ಉದಯ್ ಕುಮಾರ್, ಖಜಾಂಚಿ ಆನಂದಕುಮಾರ್, ಕಾರ್ಯದರ್ಶಿ ರಮೇಶ್ ಬಾಬು, ಯಳಂದೂರು ಅಧ್ಯಕ್ಷ ರವಿಕುಮಾರ್ ಹಾಗೂ ಇತರರು ಇದ್ದರು.

# ಮಾ.6,7ರಂದು ಸ್ಪೆಕ್ಟ್ರಾಂ ಉತ್ಸವ



ಮೈಸೂರು: ಜೆ.ಪಿ. ನಗರದಲ್ಲಿನ ತಮ್ಮ ಹಿಂದುಸ್ತಾನ ಕಾಲೇಜಿನಲ್ಲಿ ಈ ಬಾರಿಯೂ ಮಾ. 6 ಮತ್ತು 7 ರಂದು ಸ್ಪೆಕ್ಟ್ರಾ ಸಾಂಸ್ಕೃತಿಕ, ವಿವಿಧ ಸ್ಪರ್ಧಾ ಉತ್ಸವ ಆಯೋಜಿಸಲಾಗಿದೆ ಎಂದು ಪ್ರಾಚಾರ್ಯ ಡಾ.ಸಿ.ಜೆ.ಪ್ರಿಯಾ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಮಾ 6ರ ಬೆಳಗ್ಗೆ 10.30ಕ್ಕೆ ಇನ್ಫೋಸಿಸ್ ಅಭಿವೃದ್ಧಿ ಕೇಂದ್ರದ ಮುಖ್ಯಸ್ಥ ವಿನಾಯಕ ಪಿ. ಹೆಗ್ಡೆ ಉದ್ಘಾಟಿಸುವರು, ಮೈಸೂರು ವಿವಿ ಬಿಂ ಬಹಾ ದ್ದೂರ್ ಸಂಸ್ಥೆಯ ಅಧ್ಯಕ್ಷ ಪ್ರೊ.ಆರ್.ಮಹೇಶ್ ಅತಿಥಿಗಳಾಗಿರುವರು. ನಟ ಅಶ್ವಿನ್ ಸಹಾ ಪ್ರಮುಖ ಆಕರ್ಷಣೆಯಾಗಿದ್ದಾರೆ ಎಂದರು.

ಉತ್ಸವದಲ್ಲಿ 14 ವಿವಿಧ ಸ್ಪರ್ಧೆಗಳಿರುತ್ತವೆ. ವೈಮಾನಿಕ ನಿರ್ವಹಣೆ, ಕಂಪ್ಯೂಟರ್ ವಿಜ್ಞಾನ, ಟ್ರೆಷರ್ ಹಂಟ್, ನೃತ್ಯ, ವಿನಿ ವಿಸ್ತಾ, ಸಮೂಹ ನೃತ್ಯಗಳು ಇದರಲ್ಲಿ ಸೇರಿವೆ. ವಿಜೇತರಿಗೆ ಒಟ್ಟಾರೆ ಸುಮಾರು ಒಂದೂವರೆ ಲಕ್ಷ ಮೊತ್ತದ ಬಹುಮಾನ, ಟ್ರೋಫಿಗಳನ್ನು ನೀಡಲಾಗುವುದು. ಈಗಾಗಲೇ ಚೆನ್ನೈ, ಕೊಡಗು, ಚಿತ್ರದುರ್ಗ ಮೊದಲಾದ ಕಡೆಗಳಿಂದ ನೋಂದಣಿ ಆಗುತ್ತಿವೆ ಎಂದು ಮಾಹಿತಿ ನೀಡಿದರು. ಜಿ.ಎಚ್. ರಘುನಂದನ್, ವಿ. ಈಶ್ವರ್, ಎಸ್.ವಿನಂತಿ ಇದ್ದರು.

**ಹನೂರು ಭಾಗದ ಕುಡಿಯುವ ನೀರು ಸಮಸ್ಯೆ ಪರಿಹಾರ, ಕೆರೆ ಕಟ್ಟೆ ಚೆಕ್ ಡ್ಯಾಂ ತುಂಬಿಸಲು 490 ಕೋಟಿ ರೂ. ಯೋಜನೆ**

# ಬಜೆಟ್‌ಗೆ ಸೇರ್ಪಡೆಗೊಳ್ಳುವ ವಿಶ್ವಾಸ ಸುನೀಲ್ ಬೋಸ್

ಚಾಮರಾಜನಗರ, ಕೊಳ್ಳೇಗಾಲ ತಾಲ್ಲೂಕಿನ ಸರಗೂರು ಗ್ರಾಮದ ಬಳಿಯ ಕಾವೇರಿ ನದಿಯಿಂದ ನೀರನ್ನು ಎತ್ತಿ ಹನೂರು ತಾಲ್ಲೂಕಿನ ಉಡುತೊರೆ ಹಳ್ಳ ಜಲಾಶಯ ಮತ್ತು ಕುರಟ್ಟಿಹೊಸೂರು ಹಾಗೂ ಸಂತೇಕಾನೆ ಸುತ್ತಮುತ್ತಲಿನ ಕೆರೆ–ಕಟ್ಟೆಗಳು, ಚೆಕ್ ಡ್ಯಾಮ್‌ಗಳನ್ನು ತುಂಬಿಸಲು 490 ಕೋಟಿ ರೂ. ಮೊತ್ತಕ್ಕೆ ವಿಸ್ತೃತ ಯೋಜನಾ ವರದಿ ತಯಾರಿಸಲಾಗಿದ್ದು, 2026–27ನೇ ಸಾಲಿನ ಬಜೆಟ್‌ನಲ್ಲಿ ಸೇರ್ಪಡೆಗೊಳಿಸಲು ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಲಾಗಿದ್ದು, ಈ ಬಾರಿ ಬಜೆಟ್ ಗೆ ಸೇರ್ಪಡೆಗೊಳ್ಳುವ ವಿಶ್ವಾಸವಿದೆ ಎಂದು ಸಂಸದ ಸುನೀಲ್ ಬೋಸ್ ತಿಳಿಸಿದ್ದಾರೆ.

ಜಿಲ್ಲೆಯ ಹನೂರು ತಾಲ್ಲೂಕಿನ ಕುರಟ್ಟಿಹೊಸೂರು, ಕೌದಳ್ಳಿ, ಮಾರ್ಟಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಸ್ಥರು ಮತ್ತು ವಿವಿಧ ಸಂಘಟನೆಗಳು ಕುಡಿಯುವ ನೀರಿಗೆ ತೊಂದರೆ ಮತ್ತು ಅಂತರ್ಜಲ ಮಟ್ಟ ವ್ಯಾಪಕವಾಗಿ ಕುಸಿದಿರುವ ಬಗ್ಗೆ ಗಮನ ಸೆಳೆದಿದ್ದಾರೆ. ಈ ಸಂಬಂಧ ಉಂಟಾಗುತ್ತಿರುವ ಸಾಮಾಜಿಕ ಮತ್ತು ಆರ್ಥಿಕ ತೊಂದರೆಗಳ ಬಗ್ಗೆ ವಿವರಿಸಿದ್ದಾರೆ. ಕ್ಷೇತ್ರದ ಪ್ರವಾಸದ ಸಮಯದಲ್ಲಿ ಗ್ರಾಮಸ್ಥರು, ರೈತ ಸಂಘಟನೆಗಳ ಮುಖಂಡರು, ಪ್ರತಿನಿಧಿಗಳು ಕುಡಿಯುವ ನೀರಿನ ಕೊರತೆ ನೀಗಿಸಲು ಯೋಜನೆ ರೂಪಿಸಲು ಮನವಿ ಮಾಡಿದ್ದಾರೆ.

ಈ ಸಂಬಂಧವಾಗಿ ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳೊಂದಿಗೆ ಹಲವು ಹಂತಗಳಲ್ಲಿ ಸಭೆಗಳನ್ನು ನಡೆಸಲಾಗಿದೆ. ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ಹನೂರು ತಾಲ್ಲೂಕಿನ ಕುರಟ್ಟಿ ಹೊಸೂರು, ಕೌದಳ್ಳಿ, ಮಾರ್ಟಳ್ಳಿ, ದಿನ್ನಳ್ಳಿ ಗ್ರಾಮ ಪಂಚಾಯಿತಿಗಳಿಗೆ ಒಳಪಡುವ ಗ್ರಾಮಗಳ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹ ರಿಸುವ ನಿಟ್ಟಿನಲ್ಲಿ ಸಮಗ್ರವಾಗಿ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲು ಸೂಚನೆ ನೀಡಲಾಗಿತ್ತು. ಅದರಂತೆ ಕೊಳ್ಳೇಗಾಲ ತಾಲ್ಲೂಕಿನ ಸರಗೂರು ಗ್ರಾಮದ ಬಳಿಯ ಕಾವೇರಿ ನದಿಯಿಂದ ನೀರನ್ನು ಎತ್ತಿ ಹನೂರು ತಾಲ್ಲೂಕಿನ ಉಡುತೊರೆ ಹಳ್ಳ ಜಲಾಶಯ ಮತ್ತು ಕುರಟ್ಟಿಹೊಸೂರು ಹಾಗೂ ಸಂತೇಕಾನೆ ಸುತ್ತಮುತ್ತಲಿನ ಕೆರೆ–ಕಟ್ಟೆಗಳು, ಚೆಕ್ ಡ್ಯಾಮ್‌ಗಳನ್ನು ತುಂಬಿಸಲು 490 ಕೋಟಿ ರೂ. ಮೊತ್ತಕ್ಕೆ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಲಾಗಿದೆ. ಚರ ಸದರಿ ಯೋಜನೆಯಡಿ ಕಾವೇರಿ ನದಿಯಿಂದ ನೀರೆತ್ತಿ, ಏರು ಕೊಳವೆಯ ಮೂಲಕ ಅಜ್ಜಿಪುರ ಗ್ರಾಮದ ಬಳಿ ವಿತರಣಾ ತೊಟ್ಟಿಗೆ ನೀರು ಹರಿಸುವುದು ತದನಂತರ ಗುರುತ್ವಾಕರ್ಷಣಾ ಮೂಲಕ ಉಡುತೊರೆಹಳ್ಳ ಜಲಾಶಯ ಮತ್ತು ದಂಟಳ್ಳಿ, ಕುರಟ್ಟಿಹೊಸೂರು ಹಾಗೂ ಮಾರ್ಟಳ್ಳಿ ಗ್ರಾಮದ ಸುತ್ತಮುತ್ತಲಿನ ಕೆರೆ ಕಟ್ಟೆ ಹಾಗೂ ರಾಮಾಪುರ–ಕೌದಳ್ಳಿ ಹಳ್ಳದ ಚೆಕ್ ಡ್ಯಾಂಗಳಿಗೆ ನೀರನ್ನು ಹರಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯಿಂದ 9 ಗ್ರಾಮ ಪಂಚಾಯಿತಿಯ ಪರಿಮಿತಿಗೆ ಒಳಪಡುವ ಗ್ರಾಮಗಳಿಗೆ ಪ್ರಯೋಜನವಾಗಲಿದೆ.



ಹನೂರು ಭಾಗದ ಜನರ ದಶಕಗಳ ಕನಸನ್ನು ನನಸು ಮಾಡಲು ನಾನು ಬದ್ದವಾಗಿದ್ದು, ಶೀಘ್ರದಲ್ಲೇ ಯೋಜನೆಗೆ ಅನುಮೋದನೆ ದೊರಕಿಸಿ ಕಾಮಗಾರಿ ಆರಂಭಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ಸಂಸದ ಸುನೀಲ್ ಬೋಸ್ ಪ್ರಕಟಣೆಯಲ್ಲಿಕಟಣೆಯಲ್ಲಿ ತಿಳಿಸಿದ್ದಾರೆ.

# ಶ್ರೀ ಬಂಡಿಗೆರೆ ಮಹದೇಶ್ವರ ಸ್ವಾಮಿ ಜಾತ್ರೆ



ಗುಂಡ್ಲುಪೇಟೆ: ತಾಲೂಕಿನ ಬೇಗೂರು ಗ್ರಾಮದಲ್ಲಿ ಮಂಗಳವಾರ ಬಂಡಿಗೆರೆ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಶ್ರದ್ಧಾ ಭಕ್ತಿಯಿಂದ ಹಾಗೂ ವಿಜೃಂಭಣೆಯಿಂದ ನಡೆಯಿತು.

ಮಾ. 2.ರ ಸೋಮವಾರ ಸಂಜೆ ಬೇಗೂರು ಗ್ರಾಮದಲ್ಲಿರುವ ಆಂಜನೇಯ ಸ್ವಾಮಿ ದೇವಾಲಯದ ಬಳಿಯಲ್ಲಿ ಬಂಡಿಗೆರೆ ಮಹದೇಶ್ವರಸ್ವಾಮಿ ಮೂರ್ತಿ ಕಮರಹಳ್ಳಿ ಗ್ರಾಮದ ಬಸವೇಶ್ವರಸ್ವಾಮಿ ಹಾಗೂ ಬೆಳಚ ಲವಾಡಿ ಗ್ರಾಮದ ರಾಮಲಿಂಗೇಶ್ವರ ದೇವರ ಉತ್ಸವ ಮೂರ್ತಿಯ ಪಲ್ಲಕ್ಕಿಯನ್ನು ಹೂವಿನಿಂದ ಆಲಂಕರಿಸಿ ಡೊಳ್ಳು ತಮಟೆ ಛತ್ರಿ–ಚಾಮರ ಸೂರಪಾನಿ ಮಂಗಳ ವಾದ್ಯ ಮೇಳಗಳ ಸಮೇತ ವೀರಗಾಸೆ ತಂಡಗಳ ಸಮೇತ ಬೇಗೂರು ಗ್ರಾಮದ ಪ್ರತಿ ಬೀದಿ ಬೀದಿಗಳ ಲ್ಲಿಯೂ ಮೆರವಣಿಗೆ ನಡೆಸಿದವು. ಬೇಗೂರು ಗ್ರಾಮದ ಹೊರ ವಲಯದ ಲ್ಲಿರುವ ಸಂತೆ ಮಾಲದಲ್ಲಿರುವ ಶ್ರೀ ಬಂಡಿಗೆರೆ ಮಹದೇಶ್ವರ ಸ್ವಾಮಿ ದೇವಸ್ಥಾನದ ಆವರಣಕ್ಕೆ ಬೆಳಗಿನ ಜಾವ 4.30 ಗಂಟೆಯ ವೇಳೆಗೆ ತಲುಪಿ ನಂತರ ಶ್ರದ್ಧಾಭಕ್ತಿಯಿಂದ ಹರಕೆ ಹೊತ್ತ ನೂರಾರು ಭಕ್ತಾದಿಗಳು ದೇವಾಲಯದ ಮುಂಭಾಗ ಹಾಕಿರುವ ಕೊಂಡವನ್ನು ಹಾಯುವ ಮೂಲಕ ತಮ್ಮ ತಮ್ಮ ಹರಕೆ ತೀರಿಸುತ್ತಾರೆ. ಈ ದಿನ ಗ್ರಹಣ ಕಳೆದ ನಂತರ ಸಂಜೆ 6 ಗಂಟೆಗೆ ಬಂಡಿಗೆರೆ ಮಹದೇಶ್ವರ ಸ್ವಾಮಿ ಉತ್ಸವ ಮೂರ್ತಿಯನ್ನು ತೇರಿನಲ್ಲಿ ಕೂರಿಸಿ ಬಗೆ ಬಗೆ ಹೂಗಳಿಂದ ಅಲಂಕಾರ ಮಾಡಿ ನಂತರ ಪೂಜೆ ಮಹಾ ಮಂಗಳಾರತಿ ನೆರವೇರಿಸಿ ಸಾವಿರಾರು ಭಕ್ತಾದಿಗಳ ಸಮ್ಮುಖದಲ್ಲಿ ತೇರನ್ನು ಎಳೆಯುವ ಮೂಲಕ ಜಾತ್ರೆ ಮಹೋತ್ಸವವನ್ನು ನಡೆಸಲಾಗುತ್ತದೆ. ಆ ವೇಳೆಗೆ ಬೇಗೂರು ಸುತ್ತಮುತ್ತಲಿನ ಗ್ರಾಮವಾದ ಹಾಲಹಳ್ಳಿ, ಕಮರಹಳ್ಳಿ, ಬೆಳಚಲವಾಡಿ ಕಾಳನಹುಂಡಿ ಅರೇಪುರ ರಂಗೂಪುರ ಮುಂತಾದ ಗ್ರಾಮಗಳ ನೂರಾರು ಭಕ್ತರು ಪಾಲ್ಗೊಂಡಿದ್ದರು.

ಪ್ರತಿ ವರ್ಷ ಈ ಜಾತ್ರೆಗೆ ವಿಶೇಷವಾಗಿ ರಾಗಿ ಅಂಬಲಿ ಹಾಗೂ ಹಲಸಿನ ಕಾಯಿ, ಕುಂಬಳ ಕಾಯಿ ಹುಳಿ, ಅವರೇ ಕಾಳು ಇನ್ನೂ ಮುಂತಾದ ವಿವಿಧ ಬಗೆಯ ತರಕಾರಿಗಳನ್ನು ಹಾಕಿ ಬಹಳ ವಿಶಿಷ್ಟವಾಗಿ ಹುಳಿ ಮಾಡುತ್ತಾರೆ. ಬರುವಂತಹ ಭಕ್ತರಿಗೆ ರಾಗಿ ಅಂಬಲಿ ಜೊತೆಗೆ ಹುಳಿ ಕೊಡುತ್ತಾರೆ ಅಲ್ಲದೆ ಜೊತೆಗೆ ಅನ್ನಸಂತರ್ಪಣೆ ಕೂಡ ನಡೆಯುತ್ತದೆ ಗ್ರಾಮದ ವಿವಿಧ ಸಮುದಾಯದವರು ಮತ್ತು ಯುವಕರ ಸಂಘಗಳ ವತಿಯಿಂದ ಭಕ್ತಾದಿಗಳಿಗೆ ಮಜ್ಜಿಗೆ ಪಾನಕ ಕುಡಿಯುವ ನೀರಿನ ಬಾಟೆಲ್‌ಗಳನ್ನು ಸಾರ್ವಜನಿಕರಿಗೆ ವಿತರಿಸಿದ್ದರು.

# ಬೆಂಕಿ ರಹಿತ ಅಡುಗೆ ಸ್ಪರ್ಧೆ




ಮೈಸೂರು: ನಗರದ ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗದವತಿಯಿಂದ ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ ಬೆಂಕಿರಹಿತ ಅಡುಗೆ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಎಸ್ ಡಿಎಂ ಮಹಿಳಾ ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಡಾ.ವಿನೋದ ಕುಟುಂಬದ ಎಲ್ಲಾ ಸದಸ್ಯರನ್ನು ಬೆಸೆಯುವ ಕೋಣೆ ಅಡುಗೆಮನೆ ಅವಳ ಪ್ರೀತಿಯ ಹೆಗ್ಗುರುತು ಎಂದು ಅಭಿಪ್ರಾಯಪಟ್ಟರು.

ಸ್ಪರ್ಧೆಯಲ್ಲಿ ಭಾಗವಹಿಸಿದ 25 ಕ್ಕೂ ಹೆಚ್ಚು ಮಹಿಳೆಯರು ಸುಮಾರು 40 ರೀತಿಯ ವೈವಿಧ್ಯಮಯ ಅಡುಗೆ ತಯಾರಿಸಿ ಎಲ್ಲರ ಗಮನ ಸೆಳೆದರು. ತೀರ್ಪುಗಾರರಾಗಿ ರಘು ಮತ್ತು ಡಾ.ವಿನೋದ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗದ ಅಧ್ಯಕ್ಷೆ ಜೆ.ಶೋಭ ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದರು. ಕಾರ್ಯದರ್ಶಿ ರಾಣಿ ಮಹೇಶ್, ಪದಾಧಿಕಾರಿಗಳಾದ ಸುನಂದ, ಯೋಗಾವತಿ, ಸೀತಮ್ಮ, ಶೋಭ ಧನಂಜಯ್, ಅನಿತ, ವಿಜಯಲಕ್ಷ್ಮಿ, ಲಾವಣ್ಯ, ಚಂದ್ರಕಲ ಇದ್ದರು.

## ಸೆಸ್ ಕಾನೂನುಗಳನ್ನು ಮರು ಸ್ಥಾಪಿಸುವಂತೆ ಒತ್ತಾಯ



ಗುಂಡ್ಲುಪೇಟೆ: ಕಟ್ಟಡ ಕಾರ್ಮಿಕ ಕಾನೂನು–1996 ಹಾಗೂ ಸೆಸ್ ಕಾನೂನುಗಳನ್ನು ಮರು ಸ್ಥಾಪಿಸುವಂತೆ ಒತ್ತಾಯಿಸಿ ಕಟ್ಟಡ ಮತ್ತು ಇತರೆ ನಿರ್ಮಾಣ ವಲಯ ಕಾರ್ಮಿಕರ ವತಿಯಿಂದ ಕಾರ್ಮಿಕ ನಿರೀಕ್ಷಕ ನಾರಾಯಣ ಮೂರ್ತಿ ಅವರಿಗೆ ಮನವಿ ಸಲ್ಲಿಸಿದರು.

ಪಟ್ಟಣದ ತಾಲೂಕು ಕಚೇರಿಯ ಕಾರ್ಮಿಕ ಇಲಾಖೆ ಮುಂದೆ ಜಮಾವಣೆಗೊಂಡ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘದ ಪದಾಧಿಕಾರಿಗಳು ಕಟ್ಟಡ ಕಾರ್ಮಿಕ ಕಲ್ಯಾಣ ಮಂಡಳಿ ಹಾಗೂ ಕಾರ್ಮಿಕರ ಬದುಕಿನ ರಕ್ಷಣೆಗಾಗಿ ಸೆಸ್ ಕಾನೂನು ಮರು ಸ್ಥಾಪಿಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರವನ್ನು ಒತ್ತಾಯಿಸಿ ಮನವಿ ಸಲ್ಲಿಸಿದರು. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಯ ವಲಯದ ಕಾರ್ಮಿಕರು ಅತ್ಯಂತ ಹೆಚ್ಚು ಅಂಚಿನಲ್ಲಿರುವ, ವ್ಯವಸ್ಥಿತವಾಗಿ ಅಸುರಕ್ಷಿತ ಮತ್ತು ದೈಹಿಕವಾಗಿ ಶೋಷಣೆಗೆ ಒಳಗಾಗಿರುವ ವಿಭಾಗವಾಗಿದೆ. ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಸೇವಾ ಷರತ್ತುಗಳು) ಕಾಯ್ದೆ 1996 ಹಾಗೂ ಸೆಸ್ ಕಾಯ್ದೆಗಳನ್ನು ಪುನರ್ ಸ್ಥಾಪಿಸಬೇಕೆಂದು ಮನವಿ ಪತ್ರದಲ್ಲಿ ಆಗ್ರಹಿಸಿದ್ದಾರೆ. ಈ ಸಂಧರ್ಭದಲ್ಲಿ ಇಲಾಖೆ ಸಿಬ್ಬಂದಿ ಗಣೇಶ್ ಕಾರ್ಮಿಕ ಮುಖಂಡರಾದ ಸಿ. ಜಿ. ಚಂದ್ರಶೇಖರ್ , ಕೃಷ್ಣಮೂರ್ತಿ ಲಕ್ಷ್ಮಣ ಚಾರ್, ವೆಂಕಟರಾಜ್ ಹಾಜರಿದ್ದರು

**ಕರ್ನಾಟಕ ಸರ್ಕಾರ**
**(ಕನ್ನಡ ಮತ್ತು ಸಂಸ್ಕೃತಿ ಇಲಾಖೆ)**
**ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು [ಕಾವಾ],**
**ಸಿದ್ಧಾರ್ಥ ನಗರ, ಮೈಸೂರು**
**(ಮೈಸೂರು ವಿಶ್ವವಿದ್ಯಾನಿಲಯದ ಶಾಶ್ವತ ಸಂಯೋಜಿತ ಸಂಸ್ಥೆ)**
**Phone: 0821-2438931 Mail: deancava@gmail.com**
ನಂ.ಸಿಎವಿ/ಎಡಿಎಂ/ಸಿಆರ್/63/25–26 ದಿನಾಂಕ: 23.02.2026

**ಟೆಂಡರ್ ಪ್ರಕಟಣೆ**

**Ref No: CAVA/2025-26/SE0004**

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು [ಕಾವಾ], ಮೈಸೂರು ಇಲ್ಲಿನ ಕಾರ್ಯ ನಿರ್ವಹಣೆಗೆ ಗ್ರೂಪ್ 'ಡಿ' ವೃಂದದ ತೋಟದ ಮಾಲಿ, ಕಾವಲುಗಾರರು, ಸ್ವಚ್ಛತಾಗಾರರು, ಹಾಗೂ ಸೇವಕರ ಗ್ರೂಪ್ 'ಸಿ' ವೃಂದದ ಡಾಟಾ ಎಂಟ್ರಿ ಆಪರೇಟರ್ ಸೇವೆಯನ್ನು ಒದಗಿಸಲು ನೋಂದಾಯಿತ ಮತ್ತು ಪರವಾನಗಿಯುಳ್ಳ ಅರ್ಹ ಏಜೆನ್ಸಿ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ನಿಗದಿತ ನಮೂನೆಯಲ್ಲಿ 2 ಬಿಡ್ ವಿಧಾನದಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ.
**1) ಟೆಂಡರ್ ಪ್ರಕಟಣೆಯ** ದಿ: 02.03.2026 **2) ಟೆಂಡರ್ ಡಾಕ್ಯೂಮೆಂಟ್ ಅಂತರ್ಜಾಲದಲ್ಲಿ ಪಡೆಯುವ ಆರಂಭಿಕ** ದಿ: 02.03.2026 **3) ಟೆಂಡರ್ ಡಾಕ್ಯೂಮೆಂಟ್ ಅಂತರ್ಜಾಲದಲ್ಲಿ ಪಡೆಯಲು ಕೊನೆಯ** ದಿ: 20.03.2026 **4) ಭರ್ತಿ ಮಾಡಿದ ಟೆಂಡರ್‌ನ್ನು ಅಂತರ್ಜಾಲದ ಮುಖಾಂತರ ಸಲ್ಲಿಸಲು ಕೊನೆಯ** ದಿ: 20.03.2026 ಸಂಜೆ 5.30 ಗಂಟೆಯೊಳಗೆ. **5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ಸಂಜೆ 4.00 ಗಂಟೆಗೆ:** 23.03.2026 **6) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ಸಂಜೆ 4.00 ಗಂಟೆಗೆ:** 24.03.2026. ಟೆಂಡರ್‌ಗೆ ಇಟ್ಟಿರುವ ವಾರ್ಷಿಕ ಅಂದಾಜು ಮೊತ್ತ ರೂ.21.73 ಲಕ್ಷ [ಇಪ್ಪತ್ತೊಂದು ಲಕ್ಷದ ಎಪ್ಪತ್ತಮೂರು ಸಾವಿರ ರೂಪಾಯಿ] ನಿಗದಿಪಡಿಸಿದ ಇ.ಎಂ.ಡಿ ಮೊತ್ತ ರೂ.54,325/– (ಐವತ್ತನಾಲ್ಕು ಸಾವಿರದ ಒಂದು ನೂರ ಇಪ್ಪತ್ತೈದು ರೂಪಾಯಿ) ಟೆಂಡರ್‌ನ್ನು ನಿಗದಿಪಡಿಸಲಾದ ನಮೂನೆಯಲ್ಲಿ ಭರ್ತಿಮಾಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸುವುದು. ಟೆಂಡರ್ ಫಾರಂ ಮತ್ತು ಇತರೆ ವಿವರಗಳು ನಿಬಂಧನೆಗಳು ಮತ್ತು ಷರತ್ತುಗಳನ್ನು ವೆಬ್‌ಸೈಟ್ https://eproc.karnataka.gov.in ಅಂತರ್ಜಾಲದ ಮೂಲಕ ಪಡೆದು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ 0821–2438931
**ಸಹಿ/– ಡೀನ್, ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು, [ಕಾವಾ], ಮೈಸೂರು**
DIPR/DDMYS/1768/KSMCA/999/2025-26

# ಓದಿದ್ದು ಎಂಬಿಎ ಖುಷಿ ನೀಡಿದ್ದು ಕೃಷಿ


## ಸೂರ್ಯಕಾಂತಿ, ಬಾಳೆ, ಆಲುಗೆಡ್ಡೆ ಅರಿಶಿನ, ಈರುಳ್ಳಿ ಬೆಳೆದು ಸ್ಫೂರ್ತಿಯಾದ ಯುವ ರೈತ

ಗುಂಡ್ಲುಪೇಟೆ: ತಾಲ್ಲೂಕಿನ ಹಂಗಳ ಗ್ರಾಮದ ನಂದೀಶ್ ಎಚ್ ಎಂ ಎಂಬುವವರು ಮೈಸೂರಿನ ಪ್ರತಿಷ್ಠಿತ ಜಯಚಾಮರಾಜೇಂದ್ರ ಕಾಲೇಜಿನಲ್ಲಿ ಎಂಬಿಎ ಪದವಿ ಪಡೆದು ನಂತರ ರಾಜಕೀಯಕ್ಕೆ ಬಂದು ತಾಲ್ಲೂಕು ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ ಹಂಗಳ ಗ್ರಾ.ಪಂ ಸದಸ್ಯರಾಗಿದ್ದರು ಇದರ ಮಧ್ಯೆ ರಾಜಕೀಯದಿಂದ ದೂರವಾಗಿ ಕಳೆದ ಎರಡು ವರ್ಷದಲ್ಲಿ ಕೃಷಿಯ ಕಡೆ ಒಲುವು ತೋರಿಸಿ ಅನೇಕ ಯುವಕರಿಗೆ ಕೃಷಿಯ ಬಗ್ಗೆ ವ್ಯಾಮೋಹ ಮೂಡುವಂತೆ ಬೆಳಗಳನ್ನು ಬೆಳೆದು ಸ್ಪೂರ್ತಿಯಾಗಿದ್ದಾರೆ.

ತಾಲೂಕಿನ ಹಂಗಳ ಗ್ರಾಮದ ಮರಿಯಪ್ಪ ಬಿನ್ ಮಹದೇವಪ್ಪ ಕುಟುಂಬ ಎಂದರೆ ದೊಡ್ಡ ರೈತಾಪಿ ಕುಟುಂಬ ಅದರೆ ನಂತರದ ದಿನಗಳಲ್ಲಿ ವ್ಯವಸಾಯದ ಬಗ್ಗೆ ಆಸಕ್ತಿ ಕ್ಷೀಣಿಸಿತ್ತು ಅದರೆ ನಂದೀಶ್ ಮತ್ತೆ ನಮ್ಮಕುಟುಂಬದ ಹೆಸರು ಖ್ಯಾತಿಗಾಗಿ ವ್ಯವಸಾಯದಲ್ಲೇ ಸಾಧನೆ ಮಾಡಬೇಕು ಎಂದು ಕೃಷಿ ಗೆ ಇಳಿದು ಲಕ್ಷಾಂತರ ಬಂಡವಾಳ ಹಾಕಿ ಕೊಟ್ಯಾಂತರ ರೂ ಹಣ ಸಂಪಾದಿಸಿ ಖುಷಿಯಿಂದ ಇನ್ನೂ ಕೃಷಿಯಲ್ಲಿ ಭಿನ್ನತೆಯಿಂದ ವಿವಿಧ ಬೆಳೆ ಬೆಳೆಯುವ ಉತ್ಸಾಹದಲ್ಲಿ ಸಾಗುತ್ತಿದ್ದಾರೆ

ರಾಜಕೀಯ ಹಾಗೂ ಉದ್ಯೋಗ ಆಸಕ್ತಿ ಕಳೆದುಕೊಂಡು ಎಚ್ ಎಂ ನಂದೀಶ್ ಗ್ರಾಮದಲ್ಲಿ ಸುಮಾರು ಐವತ್ತು ಎಕರೆಯಷ್ಟು ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದು ಕಳೆದ ಎರಡು ವರ್ಷದಲ್ಲಿ ಒಂದೂವರೆ ಕೋಟಿ ವ್ಯವಸಾಯದಿಂದ ಹಣ ಗಳಿಸಿದ್ದು ಲಕ್ಷಾಂತರ ಹಣ ವ್ಯವಸಾಯಕ್ಕಾಗಿ ವಿನಿಯೋಗಿಸಿದ್ದಾರೆ. ಇಪ್ಪತ್ತು ಎಕರೆ ಬಾಳೆ, ಅರಿಶಿನ ಆಲೂಗೆಡ್ಡೆ, ಸಾಂಬಾರ್ ಸವತೆ, ಈರುಳ್ಳಿ,ಬೀಟ್ರೋಟ್, ತೆಂಗು, ಕಲ್ಲಂಗಡಿ,ಬೆಳೆ ಬೆಳೆದು ವ್ಯವಸಾಯದಲ್ಲಿ ಕೋಟ್ಯಾಂ ತರ ರೂಗಳನ್ನು ಸಂಪಾದಿಸಬಹುದು ಎಂದು ತೋರಿಸುವ ಮೂಲಕ ವ್ಯವಸಾಯದ ಸಹವಾಸ ಬೇಡ ಎಂದು ತಾತ್ಸರ ಪಡುವ ಯುವ ಶಕ್ತಿಗೆ ಪ್ರಗತಿಪರ ವ್ಯವಸಾಯದ ಮೂಲಕ ಸ್ಪೂರ್ತಿ ನೀಡಿದ್ದಾರೆ. ಭೂಮಿ ತಾಯಿ ನಂಬಿದರೆ ಒಂದಲ್ಲಾಂದು ರೀತಿಯಲ್ಲಿ ನಮ್ಮಕೈ ಹಿಡಿಯುತ್ತಾಳೆ ಅಗಾಗಿ ಯಾರು ಸಹ ವ್ಯವಸಾಯ ಬೇಸರ ಮತ್ತು ನಷ್ಟ ಎಂದು ಭಾವಿಸಲು ಈಗಿನ ತಂತ್ರಜ್ಞಾನ ಮತ್ತು ಯಾವ ಸಮಯದಲ್ಲಿ ಯಾವ ಬೆಳೆ ಬೆಳೆಯಬೇಕು ಎಂಬ ವೈಜ್ಞಾನಿಕ ಚಿಂತನೆಯಿಂದ ಕೃಷಿ ಚಟುವಟಿಕೆ ಮಾಡಿದರೆ ಲಾಭ ಕಟ್ಟಿಟ್ಟ ಬುತ್ತಿ ಎಂದು ಪ್ರಗತಿಪರ ರೈತ ನಂದೀಶ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ನಮ್ಮ ಮಾವ ಮಂಚಹಳ್ಳಿ ಪ್ರಕಾಶ್ ಎಂಬುವವರು ಕೂಡ ತಾಲ್ಲೂಕಿನಲ್ಲಿ ಟಮೋಟೋ ಬೆಳೆಗೆ ಹೆಸರುವಾಸಿ ವ್ಯವಸಾಯದಿಂದ ಅಪಾರ ಖ್ಯಾತಿ ಪಡೆದಿದ್ದಾರೆ, ಅವರ ಮಾರ್ಗದರ್ಶನಕೂಡ ನಮಗಿದ್ದು ವ್ಯವಸಾಯ ನಂಬಿದರೆ ಭೂಮಿತಾಯಿ ರೈತನನ್ನು ಎಂತಹ ಸ್ಥಾನದಲ್ಲಾದರೂ ಕೂರಿಸುತ್ತಾಳೆ ಎಂಬ ನಂಬಿಕೆಯಿಂದ ಕೃಷಿಮಾಡಿ ಖುಷಿ ಪಡುತಿದ್ದೇನೆ ಎಂದರು.





### 100 ಕ್ವಿಂಟಲ್ ಸೂರ್ಯ ಕಾಂತಿ ಬೆಳೆದ ರೈತ

**ಕಳೆದ ವರ್ಷ ತಮ್ಮ ಜಮೀನಿನಲ್ಲಿ ನೂರು ಕ್ವಿಂಟಲ್ ಸೂರ್ಯಕಾಂತಿ ಬೆಳೆದು ಲಕ್ಷಾಂತರ ರೂ ವ್ಯವಸಾಯದಿಂದ ಸಂಪಾದಿಸಿದರು, ಅಲ್ಲದೆ ತಾಲ್ಲೂಕಿನಲ್ಲಿ ಸೂರ್ಯಕಾಂತಿ ಬೆಂಬಲ ಬೆಲೆ ಖರೀದಿ ಕೇಂದ್ರ ತೆರೆಯುವಂತೆ ಒತ್ತಾಯಿಸಿದ್ದರು.**

### 30 ಲಕ್ಷ ಬಾಳೆಯಿಂದ ಲಾಭ

**ಕಳೆದ ಒಂದುವರೆ ವರ್ಷದಲ್ಲಿ ಎಲಕ್ಕಿ, ನೇಂದ್ರ, ಪಚ್ಚಬಾಳೆ ಹಾಕಿ ಸುಮಾರು 30 ಲಕ್ಷಕ್ಕೂ ಹೆಚ್ಚು ವ್ಯವಸಾಯದಿಂದ ಸಂಪಾದನೆ ಮಾಡಿದ್ದರು. ಜೊತೆಗೆ ಕಲ್ಲಂಗಡಿ, ಬೀಟ್ರೋಟ್, ಸಾಂಬಾರ್ ಸವತೆ ,ಈರುಳ್ಳಿ,ಯಿಂದ ಲಕ್ಷಾಂತರ ಹಣ ಸಂಪಾದನೆ.**



**ಕೃಷಿ ಮತ್ತು ತೋಟಗಾರಿಕೆ .ಸಬ್ಸಿಡಿಳನ್ನು ಸಣ್ಣ ರೈತರಿಗೆ ಮಾತ್ರ ನೀಡುತ್ತಾರೆ ದೊಡ್ಡಮಟ್ಟದಲ್ಲೂ ಮಾಡುವ ರೈತರಿಗೆ ಸಬ್ಸಿಡಿ ಅವಕಾಶ ನೀಡಬೇಕು ಅಲ್ಲದೆ ಪ್ರಗತಿಪರ ರೈತರ ಬೆಳವಣಿಗೆಗೆ ಸಹಕಾರ ಮುಖ್ಯ, ಮತ್ತು ಸರಿಯಾದ ಬೆಲೆ ಸಿಕ್ಕರೆ ರೈತನ ಸರಿಸಾಟಿ ಯಾರು ಇಲ್ಲ ಎಂದು ತೂರಿಸಿದ್ದಾರೆ.**

**ಎಚ್ ಎಂ ನಂದೀಶ್** ಪ್ರಗತಿಪರ ರೈತ

### ಅರಿಶಿನದಲ್ಲು ಲಾಭ ಪಡೆದ ರೈತ

**ಈ ವರ್ಷ ಜಮೀನಿನಲ್ಲಿ 250 ಕ್ವಿಂಅಲ್ ಅರಿಶನಣ ಬೆಳೆದು ಲಕ್ಷಾಂತರ ಹಣ ಸಂಪಾದಿಸಿದ್ದು ವ್ಯವಸಾಯ ದಿಂದ ಕೋಟಿಗಟ್ಟಲೆ ಸಂಪಾದಿಸಬಹುದು ಎಂದು ತೋರಿಸಿದ್ದು ಯುವಕರಿಗೆ ಸ್ಪೂರ್ತಿಯಾಗಿದ್ದಾರೆ.**

## ಮತ್ತೇ ಅಪರಾಧಿಗಳಾಗದಿರಿ



ಗುಂಡ್ಲುಪೇಟೆ:–ಪಟ್ಟಣದ ಪೋಲಿಸ್ ಠಾಣೆಯಲ್ಲಿ ರೌಡಿ ಪಟ್ಟಿಯಲ್ಲಿ ಇರುವ ರೌಡಿ ಅಸಾಮಿಗಳನ್ನು ಠಾಣೆಗೆ ಕರೆಯಿಸಿ ವಿಚಾರಣೆ ನಡೆಸುವ ಜೊತೆಗೆ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗದಂತೆ ಸಬ್ ಇನ್ಸ್ಪೆಕ್ಟರ್ ನರೇಶ್ ಕುಮಾರ್ ಎಚ್ಚರಿಕೆ ನೀಡಿದರು.

ರಡಿ ಅಸಾಮಿಗಳ ಹಿಂದಿನ ಪ್ರಕರಣಗಳ ಮಾಹಿತಿ ಪಡೆದು ಮುಂದೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಇರುವುದರಿಂದ ಎಚ್ಚರಿಕೆಯಿಂದ ಇರಬೇಕು. ಯಾವುದೇ ಅಹಿತಕರ ಘಟನೆಗೆ ಅಸ್ಪದ ನೀಡಬಾರದು ಒಳ್ಳೆಯ ರೀತಿಯಲ್ಲಿ ಜೀವನ ನಡೆಸಿಕೂಂಡು ಹೂಗಬೇಕು ಎಂದು ತಿಳುವಳಿಕೆ ನೀಡಿದರು. ಹಿಂದನ ಹತ್ತು ವರ್ಷದಲ್ಲಿ ಯಾವುದೇ ಪ್ರಕರಣದಲ್ಲಿ ಭಾಗಿಯಾಗಿರದ ಹಾಗೂ ಉತ್ತಮ ರೀತಿಯಲ್ಲಿ ಜೀವನ ನಡೆಸುತ್ತಿರುವ ಅಸಾಮಿಗಳ ರೌಡಿ ಅಳೆಗಳನ್ನು ಮುಕ್ತಾಯ ಮಾಡುವ ಸಂಬಂಧ ಪರಿಶೀಲಿಸಲಾಗುವುದು ಎಂದು ಸಬ್ ಇನ್ಸ್ಪೆಕ್ಟರ್ ಭರವಸೆ ನೀಡಿದರು.

## ಜಗದ್ಗುರು ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವ

ಚಾಮರಾಜನಗರ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಶ್ರೀ ಜಗದ್ಗುರು ರೇಣುಕಾಚಾ ರ್ಯರ ಜಯಂತಿ ಯುಗಮಾನೋತ್ಸವ ಕಾರ್ಯಕ್ರಮವು ನಗರದಲ್ಲಿಂದು ಅರ್ಥಪೂ ರ್ಣವಾಗಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ ರೇಣುಕಾಚಾರ್ಯರು ಇಷ್ಟಲಿಂಗ ಪೂಜೆಯ ಮೂಲಕ ಭಗವಂತನನ್ನು ವೈಯಕ್ತಿಕ ಅನುಭವದ ಮೇಲೆ ಅರಿತುಕೊಳ್ಳಬೇಕೆಂಬ ತತ್ವವನ್ನು ಪ್ರಚಾರ ಮಾಡಿದರು. ಸಮಾಜದಲ್ಲಿ ಮೇಲು ಕೀಳು ಎಂಬುದು ಇಲ್ಲ. ಎಲ್ಲರು ಸಮಾನರೆಂದು ಸಾರಿದರು. ಸಮಾಜದ ಸಮಾನತೆ ಧಾರ್ಮಿಕ ಸಾಮರಸ್ಯತೆಗೆ ಇವರ ಕೊಡುಗೆ ಅಪಾರವಾಗಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ (ಮುನ್ನಾ) ರೇಣುಕಾಚಾರ್ಯರ ತತ್ವ ಸಿದ್ಧಾಂತಗಳು ಅತ್ಯಂತ ಮಹತ್ವ ಪಡೆದುಕೊಂಡಿದೆ. ಅವರ ಆದರ್ಶ ಮಾರ್ಗದರ್ಶನ ಸಮಾಜಕ್ಕೆ ಅಗತ್ಯವಾಗಿದೆ. ಈ ಸಂದರ್ಭದಲ್ಲಿ ರೇಣುಕಾಚಾರ್ಯರ ಜಯಂತಿ ಯುಗಮಾನೋತ್ಸವದ ಶುಭಾಶಯಗಳನ್ನು ಕೋರುವುದಾಗಿ ತಿಳಿಸಿದರು.



ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ರೇಣುಕಾಚಾರ್ಯರು ಅದ್ವೈತ ತತ್ವವನ್ನ ಪ್ರತಿಪಾದಿಸಿ ಎಲ್ಲ ಜೀವಿಗಳಲ್ಲೂ ಶಿವನ ಅಂಶವಿದೆ ಎಂದರು. ಇಷ್ಟಲಿಂಗವನ್ನು ಧರಿಸುವ ಮೂಲಕ ನಿತ್ಯ ಶಿವನೊಂದಿಗೆ ಸಂಬಂಧವನ್ನು ಕಾಪಾಡಬೇಕೆಂಬ ತತ್ವವನ್ನು ಅವರು ಬೋಧಿಸಿದರು ಎಂದು ತಿಳಿಸಿದರು.

ದಾರ್ಶನಿಕರ, ಮಹಪುರುಷರ ಜಯಂತಿಗಳನ್ನು ಆಚರಿಸುವ ಉದ್ದೇಶ ಅವರ ಆದರ್ಶಗಳಿಂದ ಜಗತ್ತು ಬೆಳಕಾಗಲಿ ಎಂಬುದೇ ಆಗಿದೆ. ಇವರ ಚಿಂತನೆಗಳನ್ನು ಅಳವಡಿಸಿಕೊಳ್ಳಬೇಕು. ಸರ್ವರ ಶ್ರೇಯಸ್ಸು ಬಯಸಬೇಕು ಎಂಬುದು ಮುಖ್ಯ ಆಶಯವಾಗಿದೆ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಅವರು ಹೇಳಿದರು. ಇದೇ ವೇಳೆ ರೇಣುಕಾಚಾರ್ಯರ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಮಾಡಿ ನಮಿಸಿದರು. ಪಾರ್ವತಿ ಮಹಿಳಾ ಸಮಾಜದ ಆಶಾ ರಮೇಶ ಹಾಗೂ ತಂಡದವರು ಭಕ್ತಿ ಗೀತೆ ಗಾಯನ ನಡೆಸಿಕೊಟ್ಟರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ರಾಜು, ಪೂರ್ವ ಪೊಲೀಸ್ ಠಾಣೆಯ ಇನ್ಸ್ ಪೆಕ್ಟರ್ ಸಿ.ಪಿ. ನವೀನ್, ಸಮುದಾಯದ ಮುಖಂಡರಾದ ಮಲ್ಲಿಕಾರ್ಜುನ್, ಹೆಚ್.ಬಿ. ವಿಶ್ವಕುಮಾರ್, ಮಹದೇವಸ್ವಾಮಿ, ಮಂಜುನಾಥ್, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**ಕರ್ನಾಟಕ ಸರ್ಕಾರ**
**ಲೋಕೋಪಯೋಗಿ, ಇಲಾಖೆ ವಿಭಾಗ, ಮಂಡ್ಯ**
**ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,**
**ಸಂ: 24/2025–2026** **ದಿನಾಂಕ: 27.02.2026**

**ಮಂಡ್ಯ ಜಿಲ್ಲೆಯ ವಿವಿಧ ಕಾಮಗಾರಿಗಳಿಗಾಗಿ**
**ಅಲ್ಪಾವಧಿ ಟೆಂಡರ್ ಪ್ರಕಟಣೆ**


ಐಟಂವಾರು ದರದ ಟೆಂಡರುಗಳ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **KW-1** ರ ರೀತಿ ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp. karnataka. gov.in** ಮುಖಾಂತರ ಕಾಮಗಾರಿಯ ಟೆಂಡರ್‌ಗಾಗಿ ಭಾಗವಹಿಸಬಹುದು. ಟೆಂಡರ್ ದಾಖಲಾತಿಗಳನ್ನು **ದಿನಾಂಕ 03.03.2026** ರಿಂದ ಇ–ಪೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ವಿಚಾರಣೆ **ದಿನಾಂಕ:10.03.2026 ಸಂಜೆ 4.00** ಘಂಟೆವರೆಗೆ, ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:11.03.2026 ಸಂಜೆ 4.30** ಘಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:12.03.2026 ಬೆಳಿಗ್ಗೆ 11.00** ಘಂಟೆ ನಂತರ ಅಥವಾ ನಂತರದ ಕೆಲಸದ ದಿನಗಳು,. ಟೆಂಡರ್ ಪ್ರಕ್ರಿಯೆ ಬೆಲೆ ಇ–ಪೋರ್ಟಲ್‌ರಂತೆ. ಕಾಲಮಿತಿ: ಮಳೆಗಾಲ ಸೇರಿ **2** ತಿಂಗಳು ಒಟ್ಟು **04** (ನಾಲ್ಕು) ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ **ರೂ.20.00** ಲಕ್ಷಗಳು ಕನಿಷ್ಠ ಅಂದಾಜು ಮೊತ್ತ **ರೂ.10.00 ಲಕ್ಷಗಳು** ಇ.ಎಂ.ಡಿ. ಬೆಲೆ ಇ–ಪೋರ್ಟಲ್‌ರಂತೆ, ಕೆಲಸಗಳ ವಿವರ, ಅಂದಾಜು ಮೊತ್ತ, ಇ.ಎಂ.ಡಿ., ಮೊತ್ತ ಮುಂತಾದ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.
**ಟಿಪ್ಪಣಿ: 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.**
**ಸಹಿ/– ಕಾ.ಇಂ.,ಲೋ.ಇ.,ವಿಭಾಗ, ಮಂಡ್ಯ**

**ಎಚ್.ಡಿ.ಕೋಟೆಯ ಮೊತ್ತ ಗ್ರಾಮದಲ್ಲಿ ಸಂಬಭ್ರಮ**

# ಶ್ರೀ ಶನೇಶ್ವರ ಸ್ವಾಮಿ ಅದ್ದೂರಿ ಪಲ್ಲಕ್ಕಿ ಉತ್ಸವ

ಎಚ್.ಡಿ.ಕೋಟೆ: ಮೊತ್ತ ಗ್ರಾಮದಲ್ಲಿ ಶ್ರೀ ಶನೇಶ್ವರ ಸ್ವಾಮಿ ಪಲ್ಲಕ್ಕಿ ಉತ್ಸವ ಅದ್ದೂರಿಯಾಗಿ ನೆರವೇರಿತು. ಪ್ರತಿವರ್ಷದಂತೆ ಈ ವರ್ಷವೂ ಸಹ ಗ್ರಾಮಸ್ಥರೆಲ್ಲ ಸೇರಿ ಭಕ್ತಿಪೂರ್ವಕವಾಗಿ ಸ್ವಾಮಿಯ ಉತ್ಸವದಲ್ಲಿ ಪಾಲ್ಗೊಂಡಿದ್ದರು, ಮುಂಜಾನೆಯಿಂದಲೇ ದೇವಾಲಯದಲ್ಲಿ ವಿವಿಧ ಪೂಜಾ ಕೈಂಕರ್ಯಗಳು, ಹೋಮ ಹವನಗಳು ನೆರವೇರಿದವು, ಶನೇಶ್ವರ ವಿಗ್ರಹಕ್ಕೆ ವಿವಿಧ ಬಗೆಯ ಪುಷ್ಪಗಳಿಂದ ಅಲಂಕೃತಗೊಳಿಸಲಾಗಿದ್ದು, ದೇವಾಲಯದ ಒಳಗೂ ಹೊರಗೂ ಹೂಗಳಿಂದ ಸಿಂಗರಿಸಲಾಗಿದ್ದು, ಮದುವಣಗಿತ್ತಿಯಂತೆ ಕಂಗೊಳಿಸುತ್ತಿತ್ತು,





ಮುಂಜಾನೆಯಿಂದಲೂ ದೇವಾಲಯಕ್ಕೆ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದು ಶನೇಶ್ವರ ದರ್ಶನ ಪಡೆದು ಪುನೀತರಾದರು, ಪ್ರತಿವರ್ಷದಂತೇ ಈ ವರ್ಷವೂ ಸಹ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು,

ಊರ ಹೊರ ಭಾಗದಿಂದ ದೇವರನ್ನು ತರಲಾಯಿತು ಈ ವೇಳೆ ಪುಟ್ಟ ಪುಟ್ಟ ಹೆಣ್ಣುಮಕ್ಕಳು ದೀಪದಾರತಿ ತಂದದ್ದು ಅತ್ಯಾಕರ್ಷಕವಾಗಿದ್ದು, ಬಸವನ ಮೆರವಣಿಗೆ, ವೀರಗಾಸೆ ಕುಣಿತ, ಮಹಿಳಾ ವೀರಗಾಸೆ ಕುಣಿತ, ಸೇರಿ ಹಲವು ಕಲಾತಂಡಗಳ ಪ್ರದರ್ಶನ ಏರ್ಪಡಿಸಲಾಗಿತ್ತು, ರಾತ್ರಿ ಹನ್ನೊಂದು ಗಂಟೆಗೆ ಶುರುವಾದ ಸ್ವಾಮಿಯ ಮೆರವಣಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮುಂಜಾನೆವರೆಗೂ ನೆರವೇರಿತು, ಬೆಳ್ಳಿ ರಥದಲ್ಲಿ ಶ್ರೀ ಶನೇಶ್ವರ ಸ್ವಾಮಿಯು ವಿರಾಜಮಾನವಾಗಿ ಕಂಗೊಳಿಸಿದರು, ಪೂಜೆಯಲ್ಲಿ ಪಾಲ್ಗೊಂಡ ಭಕ್ತರು ಸ್ವಾಮಿಯನ್ನು ಕಣ್ತುಂಬಿಗೊಂಡು ಭಕ್ತಿಪರವಶರಾದರು

## ಸಂಕ್ಷಿಪ್ತ ಸುದ್ದಿ

### ಮಧ್ಯಪ್ರಾಚ್ಯ ದೇಶಗಳಲ್ಲಿ ಯುದ್ಧ ಸಹಾಯವಾಣಿ ಆರಂಭ

ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ತಾಲ್ಲೂಕು ನಿವಾಸಿಗಳು ಯುದ್ಧ ಪೀಡಿತ ಮಧ್ಯಪ್ರಾಚ್ಯ ದೇಶಗಳಲ್ಲಿ ಸಿಲುಕಿದ್ದರೆ ಅಂತಹವರ ಯೋಗಕ್ಷೇಮದ ದೃಷ್ಟಿಯಿಂದ ಮುಂದಿನ ಅಗತ್ಯ ಕ್ರಮಕ್ಕಾಗಿ ಸಂಬಂಧಪಟ್ಟವರು ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರಕ್ಕೆ ಕರೆ ಮಾಡಿ ಮಾಹಿತಿ ನೀಡಲು ಕೋರಿದೆ.

ಕರೆ ಮಾಡಿದವರ ಹೆಸರು, ಮೊಬೈಲ್ ಸಂಖ್ಯೆ, ವಿದೇಶಕ್ಕೆ ತೆರಳಿದವರ ಹೆಸರು, ವಯಸ್ಸು, ತಂದೆ/ ಗಂಡನ ಹೆಸರು, ಪಾಸ್ ಪೋರ್ಟ್ ಸಂಖ್ಯೆ, ವಿದೇಶಕ್ಕೆ ತೆರಳಿದವರ ಮೊಬೈಲ್ ಸಂಖ್ಯೆ (ಭಾರತ ಮತ್ತು ವಿದೇಶ), ಪ್ರಸ್ತುತ ಅವರ ಸ್ಥಿತಿ, ಯಾವ ದೇಶಕ್ಕೆ ತೆರಳಿದ್ದಾರೆ, ಪ್ರಸ್ತುತ ಇರುವ ಸ್ಥಳ, ತೆರಳಿದ ಉದ್ದೇಶ, ತೆರಳಿದ ದಿನಾಂಕ ಹಾಗೂ ಇತರೆ ಮಾಹಿತಿ ನೀಡಿದರೆ ಒಳಿತು.

ತಾಲ್ಲೂಕು ವಿಪತ್ತು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ: 08156-272564 ಗೆ ಕರೆ ಮೂಲಕ ಮಾಹಿತಿ ನೀಡಬಹುದೆಂದು ಚಿಕ್ಕಬಳ್ಳಾಪುರ ತಾಲ್ಲೂಕು ತಹಶೀಲ್ದಾರ್ ರಶ್ಮಿ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### 2022ರ ಪುಸ್ತಕ ಆಯ್ಕೆ ಪ್ರಕ್ರಿಯೆ ಪೂರ್ಣ

**ಚಿಕ್ಕಬಳ್ಳಾಪುರ:** 2022 ರಲ್ಲಿ ಪ್ರಥಮವಾಗಿ ಮುದ್ರಣಗೊಂಡು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಸ್ವೀಕರಿಸಿದ ಪುಸ್ತಕಗಳ ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದು, ಆಯ್ಕೆಯಾದ ಪಟ್ಟಿಯನ್ನು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಅಧಿಕೃತ ವೆಬ್ ಸೈಟ್ ಜಠಿಟ.ಇಚಿಡಿಟಿಚಿಣಚಿಕಚಿ. ರಠಿತ.ಏಟ ಪ್ರಕಟಿಸಲಾಗಿರುತ್ತದೆ. ಆದ್ದರಿಂದ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಗಾಗಿ ಸಲ್ಲಿಸಿದ ಲೇಖಕರು-ಲೇಖಕ ಪ್ರಕಾಶಕರು, ಪ್ರಕಾಶಕರು ಹಾಗೂ ಪುಸ್ತಕ ಮಾರಾಟಗಾರರ ಪುಸ್ತಕಗಳಲ್ಲಿ ಶೀರ್ಷಿಕೆ, ಲೇಖಕರ ಹೆಸರು, ಪ್ರಕಾಶಕರ ಹೆಸರು, ಮುಖಬೆಲೆ ಮತ್ತು ನಿಗದಿತ ಬೆಲೆಯಲ್ಲಿ ಹೆಚ್ಚು ಅಥವಾ ಕಡಿಮೆಯಾಗಿದ್ದಲ್ಲಿ ಪುಸ್ತಕದ ಅಳತೆ, ಪುಟ ಸಂಖ್ಯೆ ಹಾಗೂ ಇತರೆ ಯಾವುದೇ ತಾಂತ್ರಿಕ ವ್ಯತ್ಯಾಸಗಳಿದ್ದಲ್ಲಿ ಅಧಿಕೃತ ಮಾಹಿತಿ, ದಾಖಲಾತಿಗಳೊಂದಿಗೆ ದಿನಾಂಕ 16-03-2026 ರಂದು ಸಂಜೆ 5-30 ರೊಳಗಾಗಿ ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು-560001 ಇಲ್ಲಿಗೆ ಲಿಖಿತವಾಗಿ ಮನವಿಗಳನ್ನು ಸಲ್ಲಿಸತಕ್ಕದ್ದು, ತದನಂತರ ಏಕಪಕ್ಷೀಯವಾಗಿ ನಿರ್ಣಯ ಕೈಗೊಳ್ಳಲಾಗುವುದು.

### ಚಿಕಿತ್ಸೆ ಫಲಕಾರಿಯಾಗದೆ ಅಪರಿಚಿತ ಸಾವು

**ತುಮಕೂರು:** ಕೋರಾ ಪೊಲೀಸ್ ಠಾಣೆ ವ್ಯಾಪ್ತಿಯ ನಿರಾಶ್ರಿತ ಪರಿಹಾರ ಕೇಂದ್ರದಲ್ಲಿದ್ದ ಸುಮಾರು 40 ವರ್ಷದ ಅಶೋಕ ಬಿನ್ ನಾಗರಾಜು ಎಂಬ ವ್ಯಕ್ತಿಯು ಅನಾರೋಗ್ಯದಿಂದ ಜಿಲ್ಲಾಸ್ಪತ್ರೆಯಲ್ಲಿ ದಾಖಲಾಗಿದ್ದು, ಚಿಕಿತ್ಸೆ ಫಲಕಾರಿಯಾಗದೆ ಫೆಬ್ರವರಿ 23ರಂದು ಸಾವನ್ನಪ್ಪಿದ್ದು ಠಾಣೆಯಲ್ಲಿ ದೂರು ದಾಖಲಾಗಿದೆ. ಈತನು ನಿರಾಶ್ರಿತ ಕೇಂದ್ರದಲ್ಲಿದ್ದಾಗ ತನ್ನ ವಿಳಾಸ ಸರ್ಜಾಪುರ, ಬ್ರಹ್ಮಸಂದ್ರ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಎಂದು ಹೇಳಿದ್ದು, ವಾರಸುದಾರರು ಯಾರೆಂದು ತಿಳಿಸಿರುವುದಿಲ್ಲ. ಮೃತನು 160 ಸೆಂ.ಮೀ. ಎತ್ತರ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈಬಣ್ಣ, ಕೋಲು ಮುಖ ಹೊಂದಿದ್ದು, ಈತನ ಮೈಮೇಲೆ ಹಳದಿ ಮತ್ತು ನೀಲಿ ಬಣ್ಣದ ಗೆರೆಗಳಿರುವ ಅಂಗಿ ಹಾಗೂ ಆಕಾಶ ನೀಲಿ ಬಣ್ಣದ ಪ್ಯಾಂಟ್(ಎನ್.ಪಿ.ಕೆ ಕೇಂದ್ರದ ಸಮವಸ್ತ್ರ) ಇರುತ್ತದೆ. ಮೃತನ ವಾರಸುದಾರರು ಯಾರಾದರೂ ಇದ್ದಲ್ಲಿ ದೂ.ವಾ.ಸಂ. 0816-2278000, 2272340/ 2275301/ 2242006, ಮೊ.ಸಂ.9480802900-20-31-49ನ್ನು ಸಂಪರ್ಕಿಸಬೇಕೆಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮನವಿ ಮಾಡಿದ್ದಾರೆ.

# ಸರ್ಕಾರದ ಸೌಲಭ್ಯ ಪಡೆದು ಸಮಾಜ ಸುಧಾರಣೆಯಾಗಲಿ: ಎಂ.ಶಿವಮೂರ್ತಿ



**ಮಂಡ್ಯ:** ವೇಗವಾಗಿ ನಡೆಯುತ್ತಿರುವ ಜಗತ್ತಿನಲ್ಲಿ ಬಣಜಿಗ ಸಮುದಾಯದ ಪೋಷಕರು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು. ಮಕ್ಕಳು ಸರ್ಕಾರದಿಂದ ಸಿಗುವ ಮೂಲ ಸೌಲಭ್ಯ ಪಡೆದು ಸಮಾಜದಲ್ಲಿ ಉತ್ತಮ ಸಾಧನೆ ಮಾಡಬೇಕು ಎಂದು ಮಂಡ್ಯ ಉಪವಿಭಾಗಾಧಿಕಾರಿ ಎಂ.ಶಿವಮೂರ್ತಿ ಹೇಳಿದರು.

ಜಿಲ್ಲಾಡಳಿತ, ಕನ್ನಡ-ಸಂಸ್ಕೃತಿ ಇಲಾಖೆ ಹಾಗೂ ಸರ್ವ ಬಣಜಿಗ ಸಂಘದ ವತಿಯಿಂದ 2025-26 ನೇ ಸಾಲಿನ ಶ್ರೀ ಯೋಗಿ ನಾರೇಯಣ ಯತಿಂದ್ರರ 300ನೇ ಜಯಂತಿ ಕಾರ್ಯಕ್ರಮ ಮಂಡ್ಯ ನಗರದ ಶ್ರೀಯೋಗಿನಾರೇಯಣ ಯತಿಂದ್ರ ಸಮುದಾಯ ಭವನದಲ್ಲಿ ಜ್ಯೋತಿ ಬೆಳಗಿಸಿ. ಶ್ರೀ ಯೋಗಿ ನಾರೇಯಣ ಯತಿಂದ್ರರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

300 ವರ್ಷದ ಹಿಂದೆ ಇದ್ದಂತಹ ಕೈವಾರ ತಾತಯ್ಯ ರವರನ್ನು ಇಂದಿಗೂ ನಾವು ನೆನೆಯುತ್ತಿದ್ದೇವೆ ಅಂದರೆ ಅವರು ನಮ್ಮ ಸಮಾಜಕ್ಕೆ ನೀಡಿರುವ ಒಳ್ಳೆಯ ಸಂದೇಶವೇ ಕಾರಣ. ಕುವೆಂಪುರ ಆಶಯದಂತೆ ಹುಟ್ಟುತ್ತ ವಿಶ್ವ ಮಾನವರಾಗಿ ನಂತರ ಅಲ್ಪ ಮಾನವರಾಗುತ್ತೇವೆ. ಆದ್ದರಿಂದ ಎಲ್ಲರೂ ಶಿಕ್ಷಣ ಪಡೆಯುವ ಮೂಲಕ ವಿಶ್ವ ಮಾನವರಾಗಬೇಕು ಎಂದು ಹೇಳಿದರು.

ಸರ್ವ ಬಣಜಿಗ ಸಂಘದ ಅಧ್ಯಕ್ಷರಾದ ಕೆ. ಎನ್. ಮೋಹನ್ ಕುಮಾರ್ ಮಾತನಾಡಿ. ಯೋಗೇಂದ್ರ ರವರು ಮಹಾನ್ ವ್ಯಕ್ತಿಗಳ ಸಾಲಿನಲ್ಲಿ ಸೇರಿ ಅವರ ಜಯಂತಿ ಆಚರಣೆ ಆಗುತ್ತಿರುವುದು ಖುಷಿಯ ವಿಚಾರ. ತಾತಯ್ಯ ರವರ ಚಿಂತನೆ ಹಾಗೂ ಆದರ್ಶಗಳನ್ನು ಮೈಗೂಡಿಸಿಕೊಂಡು ನಡೆಯಬೇಕು ಅವರ ರಚಿತ ಕೃತಿ ಹಾಗೂ ಪದ್ಯವನ್ನು ಪುಸ್ತಕದ ರೂಪದಲ್ಲಿ ಹೊರತರಲು ನಮ್ಮ ಬೆಂಬಲವಿದೆ ಎಂದು ತಿಳಿಸಿದರು.


ನಿವೃತ್ತ ಉಪನ್ಯಾಸಕ ಕೆ.ಎನ್.ನಾಗನಂದ ಮಾತನಾಡಿ, ಕೈವಾರ ತಾತಯ್ಯರು 110 ವರ್ಷಗಳ ಕಾಲ ಜೀವಿಸಿದ್ದ ಅವರು ಬಳೆ ಮಾರಾಟಗಾರರಾಗಿ ಹಾಡು ಕಟ್ಟಿ ಪದ್ಯ ರಚನೆ ಮಾಡಿ ಜಗತ್ತಿನ ಹಾಗೂ ಹೋಗುಗಳನ್ನು ತಿಳಿಸುವ ಕಾಲಜ್ಞಾನವನ್ನು ನೀಡಿದ ಕೊಡುಗೆ ಅವರದು ಮನುಷ್ಯ ವಿಶಾಲ ಮನೋಭಾವನೆಯಿಂದ ಮು ನ್ನಡೆಯಬೇಕು ಎಂದು ಹೇಳಿದರು.


ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾ ನಿಲಯ ಡೀನ್ ಪ್ರೋ.ರಾಮನಾಥಮ್ ನಾಯ್ಡು ವಿಶೇಷ ಉಪನ್ಯಾಸ ನೀಡಿ ಮಾತನಾಡಿ, ಕನ್ನಡ ನಾಡಿನಲ್ಲಿ ಹಲವಾರು ಮಹನೀಯರು ಜನ್ಮವನ್ನು ತಾಳಿದ್ದಾರೆ ಅದರಲ್ಲಿ ಮಹಾನ್ ಪುಣ್ಯ ಪುರುಷರು ಯೋಗಿ ನಾರೇಯಣ ಯತಿಂದ್ರರು ಒಬ್ಬರು ಎಂದು ಹೇಳಿದರು.

ರೈತರಿದ್ದರೆ ಊರು, ಮಕ್ಕಳಿದ್ದರೆ ಮನೆ ಎಂಬ ಮಾತಿನಂತೆ ದ್ವಾಪರ ಯುಗದಲ್ಲಿ ಕೈವಾರದ ಹೆಸರು ಇದೇ. ಕಾಲಜ್ಞಾನವನ್ನು ಹೊಂದಿದ್ದ ಶ್ರೀಯೋಗಿ ನಾರೇಯಣ ಯತಿಂದ್ರರು ಕೀರ್ತನೆ ಪದ್ಯವನ್ನು ಕೂಡ ರಚನೆ ಮಾಡಿದ್ದಾರೆ. ಸಮಾಜದಲ್ಲಿರುವ ಮೂಢನಂಬಿಕೆಯನ್ನು ಹೋಗಲಾಡಿಸಿ. ಭೂತಕಾಲ ವರ್ತಮಾನ, ಭವಿಷ್ಯತ್ ಕಾಲವನ್ನು ತಿಳಿಸುವ ಕಾಲಜ್ಞಾನ ವನ್ನು ನೀಡಿದ ಕೀರ್ತಿ ಶ್ರೀಯೋಗಿನಾರೇಯಣ ಯತಿಂದ್ರ ರವರಿಗೆ ಸೇರುತ್ತದೆ ಎಂದು ಕೈವಾರ ತಾತಯ್ಯರವರ ಹುಟ್ಟು. ಬೆಳವಣಿಗೆ. ಕೊಡುಗೆ ಕುರಿತು ತಿಳಿಸಿದರು. ಇದೇ ಸಂದರ್ಭದಲ್ಲಿ ಬಣಜಿಗ ಸಮುದಾಯದ ಸಾಧಕರಿಗೆ ಗಣ್ಯರು ಆತ್ಮೀಯವಾಗಿ ಸನ್ಮಾನಿಸಿದರು.

ವೇದಿಕೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕ ಡಾ.ಬಿ.ವಿ.ನಂದೀಶ್, ಉಪಾಧ್ಯಕ್ಷ ಜಗದೀಶ್. ನಾಗನಂದ. ಪ್ರಶಾಂತ್. ಕೆ.ನಾಗಾನಂದ.ಮೋಹನ್ ಕುಮಾರ್, ರವೀಂದ್ರ, ಉಪಸ್ಥಿತರಿದ್ದರು.

# ಇಲಾಖೆ ಸೌಲಭ್ಯ ಕೃಷಿಕರಿಗೆ ಅರಿವು ಮೂಡಿಸಿ: ಸಿಇಓ





**ಮಂಡ್ಯ:** ಸರ್ಕಾರದಿಂದ ರೈತರಿಗೆ ಹಾಗೂ ಸಾರ್ವಜನಿಕರಿಗೆ ನೀಡಲಾಗುತ್ತಿರುವ ವಿವಿಧ ಕೃಷಿ ಸವಲತ್ತುಗಳು ಫಲಾನುಭವಿಗಳಿಗೆ ತಲುಪುವಂತೆ ಕೃಷಿ ಇಲಾಖೆ ವತಿಯಿಂದ ವ್ಯಾಪಕ ಅರಿವು ಮೂಡಿಸುವಂತೆ ಕ್ರಮ ವಹಿಸಬೇಕು ಎಂದು ಜಿ. ಪಂ. ಸಿಇಓ ನಂದಿನಿ ಕೆ.ಆರ್. ರವರು ಕೃಷಿ ಇಲಾಖೆಯ ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳಿಗೆ ಸೂಚಿಸಿದರು.

ಮಂಗಳವಾರ ಜಿಲ್ಲಾ ಪಂಚಾಯತ್ ನ ಮಿನಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ರೈತರ ಪ್ರಗತಿಗೆ ಸಹಾಯಕವಾಗುವ 9 ಪ್ರಮುಖ ಕೃಷಿ ಯೋಜನೆಗಳ ಅನುಷ್ಠಾನ ಹಾಗೂ ಪ್ರಗತಿಯ ಬಗ್ಗೆ ಪರಿಶೀಲನೆ ನಡೆಸಿದರು.

**1.ಕೃಷಿ ಯಂತ್ರಧಾರೆ:** ಯೋಜನೆಯಡಿ ಸರ್ಕಾರದಿಂದ ನೀಡಲಾಗುತ್ತಿರುವ ಯಂತ್ರೋಪಕರಣ, ಸಬ್ಸಿಡಿ ಸವಲತ್ತುಗಳ ಬಗ್ಗೆ ತಾಲ್ಲೂಕು ಹಾಗೂ ಗ್ರಾಮ ಮಟ್ಟದಲ್ಲಿ ರೈತರಿಗೆ ಅರಿವು ಮೂಡಿಸುವಂತೆ ಸೂಚಿಸಲಾಯಿತು. ಅರ್ಹ ರೈತರಿಗೆ ಸಕಾಲದಲ್ಲಿ ಯಂತ್ರೋಪಕರಣಗಳು ದೊರೆಯುವಂತೆ ಹಾಗೂ ಯೋಜನೆಯ ಲಾಭ ನೇರವಾಗಿ ಫಲಾನುಭವಿಗಳಿಗೆ ತಲುಪುವಂತೆ ಅಧಿಕಾರಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕೆಂದು ಸಿಇಓ ರವರು ತಿಳಿಸಿದರು.

**2.ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆ:** ಕೃಷಿ ಯಂತ್ರೋಪಕರಣಗಳನ್ನು ರೈತರಿಗೆ ಸಕಾಲದಲ್ಲಿ ವಿತರಿಸುವಂತೆ ಹಾಗೂ ಯೋಜನೆಗೆ ಮೀಸಲಾದ ಅನುದಾನ ಯಾವುದೇ ಕಾರಣಕ್ಕೂ ವ್ಯತಗತವಾಗದಂತೆ ಕ್ರಮ ಕೈಗೊಳ್ಳಬೇಕೆಂದು ಸಿಇಓ ರವರು ಸೂಚಿಸಿದರು.

ಯಂತ್ರಗಳ ಲಭ್ಯತೆ, ಬಳಕೆ ಹಾಗೂ ನಿರ್ವಹಣೆ ಕುರಿತು ಸ್ಪಷ್ಟ ಮಾಹಿತಿ ನೀಡುವ ಮೂಲಕ ರೈತರಿಗೆ ಯೋಜನೆಯ ಸಂಪೂರ್ಣ ಲಾಭ ದೊರೆಯುವಂತೆ ಅಧಿಕಾರಿಗಳು ಗಮನವಹಿಸಬೇಕು. ಹಾರ್ವೆಸ್ಟರ್‌ಗಳ ಲಭ್ಯತೆ, ಬಾಡಿಗೆ ದರ ಹಾಗೂ ಬುಕ್ಕಿಂಗ್ ವ್ಯವಸ್ಥೆಗಳ ಬಗ್ಗೆ ವ್ಯಾಪಕ ಜಾಗೃತಿ ಮೂಡಿಸಿ ರೈತರ ಹೊಲದಲ್ಲಿ ಕೊಯ್ಲು ಕಾರ್ಯ ಸುಗಮವಾಗುವಂತೆ ನೋಡಿಕೊಳ್ಳಬೇಕು.

**3.ಕರ್ನಾಟಕ ರೈತ ಸಮೃದ್ಧಿ ಯೋಜನೆ:** ನಾಟಿ ಮೊಟ್ಟೆ, ಸಿರಿಧಾನ್ಯ ತಿನಿಸುಗಳು, ಮಶ್ರೂಮ್, ಚಿಕ್ಕಿ, ಜೇನು ಮತ್ತು ಮದ್ದೂರು ವಡೆ ಸೇರಿದಂತೆ ಸ್ಥಳೀಯ ಕೃಷಿ ಹಾಗೂ ಆಹಾರ ಉತ್ಪನ್ನಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಬೇಕು ಹಾಗೂ ಈ ಉತ್ಪನ್ನಗಳಿಗೆ ಮೌಲ್ಯವರ್ಧನೆ, ಗುಣಮಟ್ಟ ಸುಧಾರಣೆ, ಪ್ಯಾಕೇಜಿಂಗ್ ಹಾಗೂ ಮಾರುಕಟ್ಟೆ ಸಂಪರ್ಕ ಕಲ್ಪಿಸುವ ಮೂಲಕ ಯೋಜನೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ರೈತರ ಆದಾಯ ಹೆಚ್ಚಿಸುವಂತೆ ಅಧಿಕಾರಿಗಳಿಗೆ ತಿಳಿಸಲಾಯಿತು. ಯೋಜನೆಯ ಸವಲತ್ತುಗಳು ಅರ್ಹ ರೈತರಿಗೆ ತಲುಪುವಂತೆ ಗ್ರಾಮ ಸಭೆ, ರೈತ ಸಂಪರ್ಕ ಸಭೆಗಳ ಮೂಲಕ ಅರಿವು ಮೂಡಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

**4.ನೈಸರ್ಗಿಕ ಕೃಷಿ ರಾಷ್ಟ್ರೀಯ ಅಭಿಯಾನ:** ನೈಸರ್ಗಿಕ ಕೃಷಿ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸುವ ಉದ್ದೇಶದಿಂದ ಶೀಘ್ರದಲ್ಲೇ ಕೃಷಿ ಮಾರ್ಟ್ ಆರಂಭಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಿಇಓ ಅವರು ಸೂಚಿಸಿದರು. ಕೃಷಿ ಮಾರ್ಟ್ ಮೂಲಕ ರೈತರಿಗೆ ತಮ್ಮ ಉತ್ಪನ್ನಗಳನ್ನು ನೇರವಾಗಿ ಮಾರಾಟ ಮಾಡಲು ಅವಕಾಶ ಕಲ್ಪಿಸಿ, ಮಧ್ಯವರ್ತಿಗಳ ಅವಲಂಬನೆ ಕಡಿಮೆ ಮಾಡುವ ಮೂಲಕ ರೈತರ ಆದಾಯ ಹೆಚ್ಚಿಸುವ ಉದ್ದೇಶ ಹಾಗೂ ರಾಸಾಯನಿಕ ರಹಿತ ಕೃಷಿಯಿಂದ ಉಂಟಾಗುವ ಲಾಭಗಳ ಬಗ್ಗೆ ಜಾಗೃತಿ ಮೂಡಿಸಿ ಹೆಚ್ಚಿನ ರೈತರು ಯೋಜನೆಯಲ್ಲಿ ಭಾಗವಹಿಸುವಂತೆ ಕ್ರಮ ವಹಿಸಬೇಕೆಂದು ತಿಳಿಸಿದರು.

**5.ಸೆಕೆಂಡರಿ ಕೃಷಿ ಯೋಜನೆ:** ರೈತರಿಂದ ಉತ್ಪಾದಿಸುವ ಬೆಳೆಗಳಿಗೆ ಮೌಲ್ಯವರ್ಧನೆ ಮಾಡುವ ಬಗ್ಗೆ ವಿಶೇಷ ಗಮನಹರಿಸುವಂತೆ ಸಿಇಓ ಅವರು ಸೂಚಿಸಿದರು. ಮೌಲ್ಯವರ್ಧನೆ ಮಾಡಲು ಇರುವ ಸರ್ಕಾರದ ಸವಲತ್ತುಗಳ ಬಗ್ಗೆ ರೈತರಿಗೆ ಅರಿವು ಮೂಡಿಸಿ ಸಂಸ್ಕರಣೆ, ಸಂಗ್ರಹಣೆ ಹಾಗೂ ಮಾರುಕಟ್ಟೆ ಸಂಪರ್ಕದ ಸೌಲಭ್ಯಗಳನ್ನು ಬಳಸಿಕೊಂಡು ರೈತರ ಆದಾಯ ಹೆಚ್ಚಿಸುವಂತೆ ಅಧಿಕಾರಿಗಳು ಕಾರ್ಯನಿರ್ವಹಿಸಬೇಕೆಂದು ಸೂಚಿಸಲಾಯಿತು.

**6.ಕೃಷಿ ಪ್ರಶಸ್ತಿ ಯೋಜನೆ:** ಸರ್ಕಾರದಿಂದ ನೀಡಲಾಗುತ್ತಿರುವ ಪ್ರೋತ್ಸಾಹ ಮತ್ತು ಗೌರವದ ಬಗ್ಗೆ ರೈತರಿಗೆ ಹೆಚ್ಚೆಚ್ಚು ಅರಿವು ಮೂಡಿಸಿ, ಉತ್ತಮ ಕೃಷಿ ಸಾಧನೆ ಮಾಡಿದ ರೈತರನ್ನು ಗುರುತಿಸಿ ಪ್ರೋತ್ಸಾಹಿಸುವಂತೆ ತಿಳಿಸಿದರು. ಜಿಲ್ಲೆಗೆ ಈಗಾಗಲೇ ರಾಜ್ಯ ಮಟ್ಟದಲ್ಲಿ ಭತ್ತ ಹಾಗೂ ರಾಗಿ ಬೆಳೆಗೆ 3 ಪ್ರಶಸ್ತಿ ಲಭಿಸಿದ್ದು(ರಾಜ್ಯ ಮಟ್ಟ ಮಹಿಳೆ ಹಾಗೂ ರಾಜ್ಯ ಮಟ್ಟ ಪುರುಷ), ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ರೈತರು ಉತ್ತಮ ಇಳುವರಿ ಹಾಗೂ ಉತ್ತಮ ಕೃಷಿ ಸಾಧನೆ ಮೂಲಕ ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ಗಳಿಸುವಂತೆ ಪ್ರೋತ್ಸಾಹಿಸುವ ಅಗತ್ಯವಿದೆ ಎಂದು ತಿಳಿಸಿದರು.

**7.ರಾಷ್ಟ್ರೀಯ ಆಹಾರ ಭದ್ರತೆ ಮತ್ತು ಪೌಷ್ಟಿಕ ಅಭಿಯಾನ ಕಾರ್ಯಕಾರಿ ಸಮಿತಿ:** ಆಹಾರ ಉತ್ಪಾದನೆ ಹಾಗೂ ಪೌಷ್ಟಿಕತೆಯನ್ನು ಹೆಚ್ಚಿಸುವ ಉದ್ದೇಶದಿಂದ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಅಧಿಕಾರಿಗಳು ಆದ್ಯತೆ ನೀಡಿ ರೈತರನ್ನು ಕರೆಸಿ ಬಿತ್ತನೆ ಕೆಲಸವನ್ನು ಸಕಾಲದಲ್ಲಿ ಕೈಗೊಳ್ಳುವಂತೆ ಸೂಚಿಸಿದರು.

ಮಲ್ಟಿ ಕ್ರಾಪಿಂಗ್‌ಗೆ ಆಸಕ್ತಿ ಇರುವ ರೈತರಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿ, ಜೊತೆಗೆ ಪೌಷ್ಟಿಕತೆಯ ದೃಷ್ಟಿಯಿಂದ ಮಹತ್ವ ಹೊಂದಿರುವ ಕಡಲೆಕಾಯಿ ಹಾಗೂ ಎಳ್ಳು ಬೆಳೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವಂತೆ ತಿಳಿಸಿದರು.

8.ಜಿಲ್ಲಾ ಮಟ್ಟದ ಆತ್ಮ ಚಾಲನಾ ಸಮಿತಿ: ಸರ್ಕಾರದಿಂದ ಒದಗಿಸಲಾಗುತ್ತಿರುವ ತರಬೇತಿ, ತಾಂತ್ರಿಕ ಸಹಾಯ ಹಾಗೂ ರೈತ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸಿ, ರೈತರ ಸಮಸ್ಯೆಗಳಿಗೆ ತ್ವರಿತ ಸ್ಪಂದನೆ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

**9.ಕೃಷಿ ಭಾಗ್ಯ ಯೋಜನೆ:** ನೀರಾವರಿ ಹಾಗೂ ಮಳೆನೀರು ಸಂಗ್ರಹ ಸವಲತ್ತುಗಳ ಬಗ್ಗೆ ರೈತರಿಗೆ ಮಾಹಿತಿ ತಿಳಿಸಿ, ಯೋಜನೆಯ ಸೌಲಭ್ಯಗಳು ಅರ್ಹ ರೈತರಿಗೆ ತಲುಪುವಂತೆ ಹಾಗೂ ರೈತರ ಕೃಷಿ ಉತ್ಪಾದನೆ ಹೆಚ್ಚಿಸುವಂತೆ ಕ್ರಮ ಕೈಗೊಳ್ಳಬೇಕೆಂದು ಸಿಇಓ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ರೈತರಿಗಾಗಿ ಸರ್ಕಾರ ಜಾರಿಗೆ ತಂದಿರುವ ವಿವಿಧ ಕೃಷಿ ಯೋಜನೆಗಳ ಸವಲತ್ತುಗಳ ಬಗ್ಗೆ ತಾಲ್ಲೂಕು ಹಾಗೂ ಗ್ರಾಮ ಮಟ್ಟದಲ್ಲಿ ಅರಿವು ಮೂಡಿಸಿ,

ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವಂತೆ ಸೂಚನೆ ನೀಡಿದರು.

ಈ ಸಭೆಯಲ್ಲಿ ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರಾದ ಅಶೋಕ್, ಉಪ ಕೃಷಿ ನಿರ್ದೇಶಕರುಗಳಾದ ಮುನೇಗೌಡ, ಭಾನುಪ್ರಕಾಶ್, ಸಹಾಯಕ ಕೃಷಿ ನಿರ್ದೇಶಕರಾದ ಶ್ರೀಹರ್ಷ ಸೇರಿದಂತೆ ಇಲಾಖೆಯ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಮೈಸೂರಿಗರಿಗೆ ಬೇಡವಾದರೇ ಈ ಹಸಿರು ಸುಂದರಿಯರು

**ಮೈಸೂರು:** ಸಾಂಸ್ಕ ತಿಕ ಪರಂಪರೆ ಹೊಂದಿರುವ ಮೈಸೂರಿ ನಲ್ಲಿ ಪರಿಸರ ಮಾಲಿನ್ಯ ತಡೆಗಟ್ಟಲು ಮತ್ತು ಉತ್ತಮ ಆರೋಗ್ಯವನ್ನು ಹೊಂದಲು ಸಹಕಾರಿ ಆಗಲಿ ಎಂಬ ಉದ್ದೇಶದಿಂದ ಹಸಿರು ಶಕ್ತಿ ಯೋಜನೆಯಾಗಿ ಟ್ರಿಣ್ ಟ್ರಿಣ್ ಸೈಕಲ್ ಯೋಜನೆಯನ್ನು ಜಾರಿಗೆ ತರಲಾಯಿತು. ಆ ಮೂಲಕ ಮೈಸೂರು ನಗರ ಸಾರ್ವಜನಿಕ ಬೈಸಿಕಲ್ ಹಂಚಿಕೆ ವ್ಯವಸ್ಥೆ ಮಾಡಿದ ದೇಶದ ಮೊದಲ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ಟ್ರಿಣ್ ಟ್ರಿಣ್ ಸೈಕಲ್ ನೂತನ ಯೋಜನೆ ಮೂಲಕ ಮೈಸೂರು ದೇಶದ ಗಮನ ಸೆಳೆಯಿತು. ನಂತರ ಕೆಲವೇ ವರ್ಷಗಳಲ್ಲಿಯೇ ಜನರಲ್ಲಿ ಅದ್ಯಾಕೋ ಈ ಸೈಕಲ್ ಸಹವಾಸ ಸಾಕು ಅನಿಸಿಬಿಟ್ಟಂತಿದೆ. ಇಂದು ನಗರದ ನಲವತ್ತೆಂಟು ಹಬ್‌ಗಳಲ್ಲಿ ಹಸಿರು ಸುಂದರಿ ಬೇಸರದಿಂದ ತನ್ನನ್ನು ಯಾರೂ ಉಪಯೋಗಿಸುತ್ತಿಲ್ಲ ಎಂಬ ಬೇಸರದಿಂದ ನಿಂತಿದ್ದಾಳೆ. 2017ರಲ್ಲಿ ಕಃಖ (ಕಣಾಭಟುಬಿ ಭಿಭಿಭಿಟಜ, ಜಡಿತುಭಿಜ) ಸಾರ್ವಜನಿಕ ಬೈಸಿಕಲ್ ಹಂಚಿಕೆ ವ್ಯವಸ್ಥೆ ಆರಂಭವಾದಾಗ ಈ ಪರಿಕಲ್ಪನೆಗೆ ಯಾವ ಹೆಸರು ಇಡಬೇಕು ಎಂದು ಸಾರ್ವಜನಿಕರ ವಲಯದಲ್ಲಿ ಪ್ರಸ್ತಾವನೆ ಇಟ್ಟಾಗ ಜನರು ಹೇಳಿದ ಹೆಸರು ಟ್ರಿಣ್ ಟ್ರಿಣ್. ಇಂದು ಟ್ರಿಣ್ ಟ್ರಿಣ್ ಹೆಸರನ್ನು ಹಾಗೇ ಉಳಿಸಿಕೊಂಡು ಇದರ ಮುಂದೆ ಸಂಸ್ಥೆಯ ಮೈ ಬೈಕ್ ಹೆಸರು ಸೇರಿಸಿ ಟ್ರಿಣ್ ಟ್ರಿಣ್ ಮೈ ಬೈಕ್ ಎಂದು ಮುಂದುವರಿಯುತ್ತಿದೆ.

ಪವರ್ ಪೆಡಲ್ ಮೈ ಬೈಕ್ ಬೈಸಿಕಲ್ ಮೊಟ್ಟಮೊದಲ ಬಾರಿಗೆ ಆರಂಭವಾಗಿದ್ದು ಗುಜರಾತ್‌ನ ಅಹಮದಾಬಾದ್ ನಗರದಲ್ಲಿ. ಸದ್ಯಕ್ಕೆ ಮೈ ಬೈಕ್ ಬೈಸಿಕಲ್ ಮೈಸೂರು, ಕೊಚ್ಚಿ, ಎರ್ನಾಕುಲಂ, ಉತ್ತರ ಪ್ರದೇಶ, ಉದಯ್ ಪುರ್, ನಾಗ್ಪುರ್ ಸೇರಿದಂತೆ ಹತ್ತಕ್ಕೂ ಹೆಚ್ಚು ನಗರಗಳಲ್ಲಿ ಸೇವೆ ನೀಡುತ್ತಿದೆ.ಮೈಸೂರಲ್ಲಿ ಮೈ ಬೈಕ್ ಬೈಸಿಕಲ್ ಕಂಪೆನಿ ಆರಂಭವಾಗಿ ಎರಡೂವರೆ ವರ್ಷಗಳಾಗಿವೆ. ಮೈಸೂರಿನಲ್ಲಿ ಒಟ್ಟು 48 ಹಬ್‌ಗಳಿದ್ದು, ಐನೂರು ಬೈಸಿಕಲ್‌ಗಳು ಇವೆ. ಮೊದಲು ಸ್ಮಾರ್ಟ್ ಕಾರ್ಡ್ ಮೂಲಕ ಬೈಸಿಕಲ್ ಬಳಕೆ ಮಾಡವಾಗುತ್ತಿತ್ತು. ಆದರೆ ಪ್ರಸ್ತುತ ನೀವು ಮೈ ಬೈಕ್ ಪವರ್ ಪೆಡಲ್ ಬೈಸಿಕಲ್ ಬಳಸಬೇಕು. ಅಂದರೆ ಮೊಬೈಲ್ ಅಪ್ಲಿಕೇಶನ್ ಮೂಲಕವೇ ಬಳಸಬಹುದು. ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಮತ್ತು ಐಓಎಸ್‌ನಲ್ಲಿ ಒಜಃಜಪಿ ಅಪ್ಲಿಕೇಶನ್ ಲಾಂಚ್ ಮಾಡಿದೆ.ಪ್ರತಿಯೊಂದು ಹಬ್‌ಗೂ ಪ್ರತ್ಯೇಕ ಹೆಸರು ಇಟ್ಟಿದ್ದು, ಒಂದೊಂದು ಹಬ್‌ನಲ್ಲಿ ಐದರಿಂದ ಆರು ಬೈಸಿಕಲ್ ಇರುತ್ತವೆ. ಪ್ರತಿಯೊಂದು ಬೈಸಿಕಲ್‌ಗೂ ಐಡಿ ನಂಬರ್ ಇರುತ್ತದೆ. ಮೈ ಬೈಕ್ ಬೈಸಿಕಲ್ ಎಲೆಕ್ಟ್ರಿಕಲ್ ಸೈಕಲ್, ಪವರ್ ಪೆಡಲ್ ಅಸಿಸ್ಟೆಡ್, ಪೆಡಲ್ ತುಳಿದಾಗ ಸೆನ್ಸಾರ್ ರನ್ ಆಗಿ ಮೋಟಾರ್ ರನ್ ಆಗುತ್ತೆ. ಒಂದು ಬಾರಿ ಗರಿಷ್ಟ 4 ನಾಲ್ಕು ಗಂಟೆ ಚಾರ್ಜ್ ಮಾಡಿದರೆ ಗರಿಷ್ಟ 30 ಕಿ.ಮೀ. ದೂರ ಕ್ರಮಿಸಬಹುದಾಗಿದೆ.



ಒಜಃಜಪಿ ಅಪ್ಲಿಕೇಶನ್ ಡೌನ್ಲೋಡ್ ಮಾಡಿಕೊಂಡು ಇದರಲ್ಲಿ ನಿಮ್ಮ ಕನಿಷ್ಠ ಮಾಹಿತಿ ಉದಾಹರಣೆಗೆ ನಿಮ್ಮ ಹೆಸರು, ಇ-ಮೇಲ್ ಐಡಿ ಕೊಟ್ಟು ಪಾಸ್‌ವರ್ಡ್ ಸೆಟ್ ಮಾಡಿದರೆ ಅಪ್ಲಿಕೇಶನ್ ರಿಜಿಸ್ಟರ್ ಮಾಡಿಕೊಂಡು ನಿಮಗೆ ಎಲ್ಲೆಲ್ಲಿ ಸೈಕಲ್ ಹಬ್ ಇವೆ? ನಿಮ್ಮ ಸಮೀಪ ಇರುವ ಹಬ್ ಎಲ್ಲಿದೆ? ಎಷ್ಟು ಅಂತರ ಇದೆ? ಆ ಬೈಸಿಕಲ್ ಕಾರ್ಯಕ್ಷಮತೆ ಸ್ಥಿತಿ ಹೇಗಿದೆ? ಎಂಬುದರ ಮಾಹಿತಿ ಜೊತೆಗೆ ಇದರಲ್ಲಿ ಟ್ಯಾರಿಫ್ ಪ್ಲಾನ್ ಕೂಡ ಇರುತ್ತೆ. ಎಷ್ಟು ಗಂಟೆವರೆಗೆ ನಿಮಗೆ ಬೈಸಿಕಲ್ ಬಾಡಿಗೆ ಬೇಕಿದೆ, ಒಂದು ಗಂಟೆಗೆ, ಒಂದು ದಿನಕ್ಕೆ, ವಾರಕ್ಕೆ, ತಿಂಗಳಿಗೆ ಹೀಗೆ ವಿವಿಧ ಪ್ಲಾನ್ ಇರುತ್ತವೆ.ಇದರಲ್ಲಿ ಗರಿಷ್ಟ ಎರಡು ತಿಂಗಳವರೆಗೆ ನೀವು ಈ ಬೈಸಿಕಲ್ ಬಾಡಿಗೆ ಪಡೆಯಬಹುದು.

ಈ ತಿಂಗಳ ಪ್ಲಾನ್ ಅಲ್ಲಿ ವಿಥ್ ಚಾರ್ಜರ್ ಅಂಡ್ ವಿಥೌಟ್ ಚಾರ್ಜರ್ ಇರುತ್ತದೆ. ಸೈಕಲ್ ಜೊತೆಗೆ ಚಾರ್ಜರ್ ತಗೊಂಡು ಹೋಗಬಹುದು. ಹೀಗೆ ನಿಮ್ಮ ಎಲ್ಲ ಗೊಂದಲ, ಪ್ರಶ್ನೆಗಳಿಗೆ ಉತ್ತರ ಅಪ್ಲಿಕೇಶನ್‌ನಲ್ಲಿಯೇ ಇರುತ್ತದೆ. ಎಲ್ಲ ವಿವರಗಳನ್ನೂ ನೀವು ಮೈ ಬೈಕ್ ಅಪ್ಲಿಕೇಶನ್ ಮೂಲಕವೇ ತಿಳಿದುಕೊಂಡು ಬೈಸಿಕಲ್ ಸವಾರಿ ಮಾಡಬಹುದು.ಮೈಸೂರಿಗರು ಈ ಮೈ ಬೈಕ್ ಬೈಸಿಕಲ್ ಬಳಸಲು ನಿರಾಸಕ್ತಿ ತೋರುತ್ತಿದ್ದಾರಲ್ಲ. ಹಾಗಾದರೆ ಇದರ ಬಾಡಿಗೆ ವೆಚ್ಚ ಎಷ್ಟು ದುಬಾರಿ ಇರಬಹುದು ಎಂದು ನೋಡೋವುದಾದರೆ ಅದು ಕೂಡ ಅಗ್ಗವೇ ಬಿಡಿ. ಪ್ರವಾಸಿಗರಿಗೆ ಒಂದು ದಿನ ಮೈಸೂರು ಸುತ್ತಾಡಲು ಬೇಕಾದಾಗ ಅವರು ಒಂದು ದಿನದ ಪ್ಲಾನ್‌ಗೆ ಹೋಗಬಹುದು. ಒಂದು ದಿನದ ಪ್ಲಾನ್ ತೆಗೆದುಕೊಂಡರೆ 100 ರೂ. ಠೇವಣಿ ಇಡಬೇಕಾಗುತ್ತದೆ. ಈ ಹಣ ನಿಮಗೆ ರೀ ಫಂಡ್ ಆಗುತ್ತದೆ. ಒಂದು ದಿನದ ಬಾಡಿಗೆ 79 ರೂ. ಇರುತ್ತದೆ. 30 ನಿಮಿಷಕ್ಕೆ 20 ರೂ. ಬಾಡಿಗೆ ಇರುತ್ತದೆ. ಎರಡು ತಿಂಗಳ ಪ್ಲಾನ್‌ಗೆ 2,500 ರೂ. ಇದ್ದು, ಇದರಲ್ಲಿ 1,000 ಠೇವಣಿ ಇದ್ದು ಇದು ಕೂಡ ರೀ ಫಂಡ್ ಆಗುತ್ತದೆ. 500 ರೂ. ಬ್ಯಾಟರಿ ಚಾರ್ಜರ್ ಮತ್ತು 500 ರೂ. ಬೈಸಿಕಲ್ ಠೇವಣಿ ಆಗಿರುತ್ತದೆ. 1,500 ರೂ. ಗಳಲ್ಲಿ ಎರಡು ತಿಂಗಳವರೆಗೆ ಸೈಕಲ್ ಬಳಸಬಹುದು. ಈ ಪ್ಲಾನ್‌ನಲ್ಲಿ ಮೈಸೂರಿನ ಯಾವುದೇ ಹಬ್‌ನಲ್ಲಿ ಸೈಕಲ್ ರಿಟರ್ನ್ ಮಾಡಬಹುದು. ಚಾರ್ಜರ್ ಖಾಲಿಯಾದಾಗ ಸೈಕಲ್ ಬದಲಾವಣೆ ಮಾಡಬಹುದು.ನಗರದಲ್ಲಿ ಸದ್ಯದ ಮಟ್ಟಿಗೆ ರಾಮಸ್ವಾಮಿ ಸರ್ಕಲ್, ರೈಲ್ವೆ ನಿಲ್ದಾಣ, ಸಿಟಿ ಬಸ್ ನಿಲ್ದಾಣ, ಮೈಸೂರು ಯೂನಿವರ್ಸಿಟಿ ಹೀಗೆ ಒಂದಿಷ್ಟು ಹಬ್‌ಗಳಲ್ಲಿ ಬೇಡಿಕೆ ಹೆಚ್ಚಿದ್ದು, ಬಹಳ ಜನ ಪ್ರವಾಸಿಗರು ಒಬ್ಬರೇ ಇದ್ದಾಗ ಆಟೋ, ಕಾರು, ಬೈಕ್‌ಗಳಲ್ಲಿ ಸುತ್ತಾಟ ನಡೆಸುವುದಕ್ಕಿಂತ ಹೆಚ್ಚಾಗಿ ಮೈ ಬೈಕ್ ಬೈಸಿಕಲ್ ಬಳಸುತ್ತಾರೆ. ಜೊತೆಗೆ ಸ್ವಿಗ್ಗಿ, ಜೊಮೋಟೋ, ಜೆಪ್ಟೊ?ಟೀ ಡೆಲಿವರಿ ಹುಡುಗರು ಕೂಡ ಬಳಸುತ್ತಾರೆ. ಜೊತೆಗೆ ಬೆಳಿಗ್ಗೆ ವಾಕಿಂಗ್ ಮಾಡು ವವರು ಸಂಜೆ ವಿಹಾರ ಮಾಡುವವರು ಬಳಸುತ್ತಾರೆ.

ಸೈಕಲ್‌ನ ಯಾವುದೇ ಸರ್ವೀಸ್ ಇದ್ದರೂ ಮೈ ಬೈಕ್ ಕಂಪೆನಿ ಉಚಿತವಾಗಿ ನೋಡಿಕೊಳ್ಳುತ್ತದೆ. ಬಳಕೆದಾರರು ಕೇವಲ ಬಾಡಿಗೆ ಕೊಟ್ಟು ಸೈಕಲ್ ಬಳಸಬಹುದು. ಸೈಕಲ್‌ನಲ್ಲಿ ದೋಷ ಕಂಡು ಬಂದರೆ ತಕ್ಷಣ ಕಂಪೆನಿಯ ಸಿಬ್ಬಂದಿ ಇರುವ ಜಾಗಕ್ಕೆ ಬಂದು ಸರಿಪಡಿಸಿ ನಿಮಗೆ ಎದುರಾಗುವ ತೊಂದರೆಗೆ ಪರಿಹಾರ ಒದಗಿಸುತ್ತಾರೆ. ವಾರಾಂತ್ಯದಲ್ಲಿ ಯುವ ಸಮೂಹ ಹೆಚ್ಚಾಗಿ ಈ ಬೈಸಿಕಲ್ ಬಳಸುವುದುಂಟು ಹಾಗೂ ಒಂದಷ್ಟು ಮಂದಿ ಬೈಸಿಕಲ್‌ಅನ್ನು ತಿಂಗಳ ಪ್ಲಾನ್‌ನಲ್ಲಿ ತೆಗೆದುಕೊಂಡು ಮನೆಗೆ ಚಾರ್ಜರ್ ತೆಗೆದುಕೊಂಡು ಬಂದು ಬಳಸುತ್ತಾರೆ. ಅಗತ್ಯ ಇರುವ ಬಳಕೆದಾರರು ಹಬ್‌ಗಳಿಗೆ ಬಂದು ದಿನಾ ಸೈಕಲ್ ಬದಲಾವಣೆ ಮಾಡುವುದಿಲ್ಲ. ತಿಂಗಳ ಪೂರಾ ತಮ್ಮ ಮನೆಯಲ್ಲೇ ಇಟ್ಟುಕೊಂಡಿರುತ್ತಾರೆ.ದಿನದ 24 ಗಂಟೆಗಳೂ ಮೈ ಬೈಕ್ ಸೈಕಲ್ ಸೌಲಭ್ಯ ಇರುತ್ತದೆ. ಈ ಸಂಸ್ಥೆಯ ಸಿಬ್ಬಂದಿ ಬೆಳಿಗ್ಗೆ 6ರಿಂದ ರಾತ್ರಿ 11ರವರೆಗೆ ಸ್ಥಳೀಯವಾಗಿ ಲಭ್ಯ ಇರುತ್ತಾರೆ. ಸೈಕಲ್‌ನಲ್ಲಿ ಏನೇ ತಾಂತ್ರಿಕ ಸಮಸ್ಯೆ ಎದುರಾದರೂ ಕಸ್ಟಮರ್ ಕೇರ್‌ನಲ್ಲಿ ಮಾಹಿತಿ ಪಡೆದು ಗ್ರಾಹಕರಿಗೆ ನೇರವಾಗಿ ನೆರವು ನೀಡುತ್ತಾರೆ. ಸೈಕಲ್‌ನಲ್ಲಿ ಜಿಪಿಎಸ್ ಇರುವುದರಿಂದ ಗ್ರಾಹಕರು ಎಲ್ಲೇ ಇದ್ದರೂ ಸಿಬ್ಬಂದಿ ಆ ಸ್ಥಳಕ್ಕೆ ಬಂದು ಸಹಾಯ ಮಾಡಬಹುದಾಗಿದೆ.

ಆದರೆ ಸಮಸ್ಯೆ ಆಗೋದು ಎಲ್ಲಿ ಅಂದರೆ ಗ್ರಾಹಕರು ಮೊದಲ ಬಾರಿ ಬಳಕೆ ಮಾಡುವಾಗ ಅಪ್ಲಿಕೇಶನ್‌ನಲ್ಲಿ ಸೈಕಲ್ ನೋಡಿ ಅನ್‌ಲಾಕ್ ಮಾಡಿ ತೆಗೆದುಕೊಳ್ಳುತ್ತಾರೆ. ಆದರೆ ಅದಕ್ಕೂ ಮೊದಲು ಬಳಕೆದಾರರು ಸೈಕಲ್ ರೇಂಜ್ ನೋಡಬೇಕು. ಯಾವ ಟೈಮಿಗೆ ರೀಚಾರ್ಜ್ ಆಗಿದೆ? ಎಷ್ಟು ಕಿಮೀ ದೂರ ಕ್ರಮಿಸಬಹುದು? ಮುಂತಾದ ಕಾರ್ಯಕ್ಷಮತೆ ಅಪ್ಲಿಕೇಶನ್ ನಲ್ಲಿಯೇ ಇದ್ದು, ಆ ಸೈಕಲ್ ಬಗ್ಗೆ ಮಾಹಿತಿ ಅಪ್‌ಡೇಟ್ ಆಗಿರುತ್ತದೆ. ಈ ಬಗ್ಗೆ ಬಳಕೆದಾರರು ಗಮನಿಸದೇ ಜಾರ್ಜ್ ಕಡಿಮೆ ಇರುವ ಸೈಕಲ್ ತೆಗೆದುಕೊಂಡು ಹೋಗಿ ದೂರ ಹೋಗಿ ದೂರು ಹೇಳುತ್ತಾರೆ. ಪವರ್ ಬಿಟ್ಟು ತಾವೇ ಒಂದಷ್ಟು ಬಾರಿ ಪೆಡಲ್ ಮಾಡಿದರೆ ನಿರ್ದಿಷ್ಟ ಕಿ.ಮೀ.ಗಿಂತ ಹೆಚ್ಚು ಮೂರ್ನಾಲ್ಕು ಕಿ.ಮೀ. ದೂರ ಕ್ರಮಿಸಬಹುದಾಗಿರುತ್ತದೆ. ಸೈಕಲ್ ಸವಾರರಿಗೆ ಅಂತಾನೆ ಪ್ರತ್ಯೇಕವಾಗಿ ಸೈಕಲ್ ಟ್ರ್ಯಾಕ್ ಯೋಜನೆ ಕೈಗೊಂಡರೂ ಕೆಲವು ಸಮಸ್ಯೆ ಉಂಟಾಗಿ ಈ ಸೈಕಲ್ ಟ್ರ್ಯಾಕ್ ವ್ಯವಸ್ಥೆ ಇಂದು ಅಪೂರ್ಣಗೊಂಡಿದೆ. ಆದರೆ ವಿಶ್ವಮಾನವ ಜೋಡಿ ರಸ್ತೆಯಲ್ಲಿ ಕುವೆಂಪು ನಗರ ವೃತ್ತದಿಂದ ಕೆ.ಇ.ಬಿ. ವೃತ್ತದವರೆಗೆ ಈ ಸೈಕಲ್ ಟ್ರ್ಯಾಕ್ ಕಾಣಬಹುದು. ಆದರೆ ಆ ಸೈಕಲ್ ಟ್ರ್ಯಾಕ್‌ನಲ್ಲಿ ಸೈಕಲ್ ಸವಾರರು ಹೋಗುವುದಕ್ಕಿಂತ ವಾಕಿಂಗ್ ಮಾಡುವುದಕ್ಕೆ ಸಾರ್ವಜನಿಕರು ಬಳಸಿಕೊಳ್ಳುತ್ತಿದ್ದಾರೆ.ಮೊದಲ ಅವಧಿಯಲ್ಲಿ ಈ ಟ್ರಿಣ್ ಟ್ರಿಣ್ ಸೈಕಲ್ ನಿರ್ವಹಣೆ ಒಳಗೊಂಡಂತೆ ಸಂಪೂರ್ಣ ಸರ್ಕಾರದ ಯೋಜನೆ ಆಗಿತ್ತು. 2017ರಿಂದ 2023ರವರೆಗೆ 6 ವರ್ಷಗಳ ಅವ?ಯವರೆಗೆ ಈ ಗ್ರೀನ್ ವ್ಹೀಲ್ ರೈಡ್ ಸಂಸ್ಥೆ ಗುತ್ತಿಗೆ ಪಡೆದುಕೊಂಡಿತ್ತು. ಇದೀಗ 2023ರಿಂದ ಗುಜರಾತ್ ಅಹಮದಾಬಾದ್‌ನ ಗ್ರೀನ್ ಪೀಡಿಯಾ ಬೈಕ್ ಶೇರ್ ಲಿಮಿಟೆಡ್ ಕಂಪೆನಿ ಟ್ರಿಣ್ ಟ್ರಿಣ್ ಮೈ ಬೈಕ್ ಬೈಸಿಕಲ್ ಹೆಸರಿನಲ್ಲಿ ಪ್ರಸ್ತುತ ಗುತ್ತಿಗೆ ಪಡೆದು ಕಾರ್ಯನಿರ್ವಹಿಸುತ್ತಿದೆ. ಮೈಸೂರು ಮಹಾನಗರ ಪಾಲಿಕೆ ಸೈಕಲ್ ಹಬ್ಬಳಿಗೆ ಜಾಗ ನೀಡುತ್ತಿದೆ. ಸದ್ಯಕ್ಕೆ ಮೈಸೂರು ನಗರ ಬೃಹತ್ ಮೈಸೂರು ಮಹಾನಗರ ಪಾಲಿಕೆಯಾಗಿ ಹೊರಹೊಮ್ಮಿದ್ದು, ಜನಸಂಖ್ಯೆ ಹೆಚ್ಚಾಗುವುದರ ಜೊತೆಗೆ ವಾಹನಗಳ ಸಂಖ್ಯೆ ಕೂಡ ಜಾಸ್ತಿಯಾಗಿ ಬೆಂಗಳೂರಿನಂತೆ ಮೈಸೂರಿನಲ್ಲಿಯೂ ಸಂಚಾರ ದಟ್ಟಣೆ ಸಾಮಾನ್ಯವಾಗಿ ಬಿಟ್ಟಿದೆ. ಇಂದು ನಾವು ವಾಕಿಂಗ್ ಮಾಡುವುದಕ್ಕೂ ಬೈಕ್ ಬಳಸುವ ಬದಲು ಸೈಕಲ್ ಬಳಸಿ ಪರಿಸರ ಸ್ನೇಹಿ ವಾತಾವರಣದಲ್ಲಿ ಬದುಕಲು ಅನುವು ಮಾಡಿಕೊಳ್ಳಬೇಕಾಗಿದೆ.

# ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಅರ್ಥಪೂರ್ಣವಾಗಿ ಆಚರಿಸಲು ಕರೆ



**ಮಂಡ್ಯ:** ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಅಂತರ್ ರಾಷ್ಟ್ರೀಯ ಮಹಿಳಾ ದಿನಾಚರಣೆ-2026 ರ ಅಂಗವಾಗಿ ಪೂರ್ವಭಾವಿ ಸಭೆಯನ್ನು ನಡೆಸಿದರು.

ಸಭೆಯಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ಆರೋಗ್ಯ ಪೂರ್ಣ ವಾತಾವರಣವನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ಎಲ್ಲಾ ಇಲಾಖೆಗಳ ಸಹಕಾರ ಸಹಾಯ ಬಹಳ ಮುಖ್ಯ. ಈ ಅಂತರ್ ರಾಷ್ಟ್ರೀಯ ಮಹಿಳಾ ದಿನಚರಣೆ ಒಂದು ದಿನದ ಆಚರಣೆಯಾಗಬಾರದು ಇದು ನಿರಂತರವಾಗಿ ಮಹಿಳೆಯರ ಸಮಸ್ಯೆಗಳನ್ನು ಪರಿಹರಿಸುವ ಜಾಗೃತಿ ಕಾರ್ಯಕ್ರಮವಾಗಬೇಕೆಂದು ತಿಳಿಸಿದರು.

ಮಹಿಳೆಯರ ಆರೋಗ್ಯ ಸಮಸ್ಯೆಗಳಾದ ಗರ್ಭಕಂಠ ಕ್ಯಾನ್ಸರ್, ಸ್ತನ ಕ್ಯಾನ್ಸರ್, ಅಪೌಷ್ಟಿಕತೆ, ಋತು ಚಕ್ರ ನೈರ್ಮಲ್ಯ ನಿರ್ವಹಣೆ, ಉಚಿತ ಕಾನೂನು ಅರಿವು ಹಾಗೂ ಸಾಮಾಜಿಕ ಪಿಡುಗುಗಳಾದ ಬಾಲ್ಯ ವಿವಾಹ, ವರದಕ್ಷಿಣೆ ಕಿರುಕುಳ, ಕೌಟುಂಬಿಕ ದೌರ್ಜನ್ಯ ಇತ್ಯಾದಿಗಳ ನಿರ್ಮೂಲನೆ ಬಗ್ಗೆ ವ್ಯಾಪಕ ಅರಿವು ಮೂಡಿಸುವುದು ಅವಶ್ಯಕವಾಗಿದೆ ಎಂದು ತಿಳಿಸಿದರು.

ಈ ಮಹಿಳಾ ದಿನಾಚರಣೆಯ ಅಂಗವಾಗಿ ಕಾಲೇಜು/ಹಾಸ್ಟೆಲ್ ವಿದ್ಯಾರ್ಥಿನಿಯರಿಗೆ, ಅಡುಗೆ ಸಿಬ್ಬಂದಿಗಳು, ಆಶಾ, ಅಂಗನವಾಡಿ ಕಾರ್ಯಕರ್ತೆಯರು, ಶಿಕ್ಷಕಿಯರು, ಸ್ವ-ಸಹಾಯ ಸಂಘದ ಮಹಿಳೆಯರು ಹಾಗೂ ಸಾಮಾನ್ಯ ಮಹಿಳೆಯರಿಗೂ ಕೂಡ ವಿವಿಧ ಕ್ರೀಡೆಗಳನ್ನು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಕ್ರೀಡೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿಜೇತರಾದ ಮಹಿಳೆಯರಿಗೆ ಬಹುಮಾನವನ್ನು ವಿತರಿಸುವುದರ ಜೊತೆಗೆ ಜಿಲ್ಲಾ/ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಕಾರ್ಯಕ್ರಮದ ವಿವಿಧ ಜವಾಬ್ದಾರಿಗಳನ್ನು ಹಂಚಿಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಉಪಕಾರ್ಯದರ್ಶಿ(ಅಭಿವೃದ್ಧಿ), ಜಿ,ಪಂ. ಮಂಡ್ಯ. ಉಪಕಾರ್ಯದರ್ಶಿ(ಆಡಳಿತ), ಜಿ,ಪಂ. ಮಂಡ್ಯ, ಯೋಜನಾ ನಿರ್ದೇಶಕರು, ಜಿ,ಪಂ. ಮಂಡ್ಯ. ಸಹಾಯಕ ಯೋಜನಾಧಿಕಾರಿ, ಜಿ,ಪಂ. ಮಂಡ್ಯ. ಹಾಗೂ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

## ಮಾರ್ಚ್ 05 ರಂದು ವಿಕಸಿತ ಭಾರತ ಯುವ ಸಂಪರ್ಕ ಕಾರ್ಯಕ್ರಮ



**ಮಂಡ್ಯ:** ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ, ಮಂಡ್ಯ ವಿಶ್ವವಿದ್ಯಾನಿಲಯ, ಮೈ ಭಾರತ್ ಮಂಡ್ಯ, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಸಹಯೋಗದಲ್ಲಿ ವಿಕಸಿತ ಭಾರತ ಯುವ ಸಂಪತ್ತು ಜಿಲ್ಲಾಮಟ್ಟದ ಸ್ಪರ್ಧೆ ಮತ್ತು ವಿಕಸಿತ ಭಾರತ ಯುವ ಸಂಪರ್ಕ ಕಾರ್ಯಕ್ರಮ ತುಇುಣ ಝುಚಿಡಿಚಿಣ youth parliament-2026 ಕಾರ್ಯಕ್ರಮವನ್ನು ಮಾರ್ಚ್ 5 ರಂದು ಬೆಳಿಗ್ಗೆ 10.30 ಗಂಟೆಗೆ ಮಂಡ್ಯ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವರಾದ ಎಚ್. ಡಿ ಕುಮಾರಸ್ವಾಮಿ ರವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.

ಕೃಷಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎನ್ ಚಲುವರಾಯಸ್ವಾಮಿ ರವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಜಿಲ್ಲಾ ಶಾಸಕರಾದ ಪಿ. ರವಿಕುಮಾರ್ ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿಗಳಾದ ಡಾ. ಕುಮಾರ, ಮಂಡ್ಯ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಶಿವಚಿತ್ತಪ್ಪ ಕೆ. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾದ ಕೆ.ಆರ್. ನಂದಿನಿ, ಜಿಲ್ಲಾ ಪೊಲೀಸ್ ಅಧಿಕ್ಷಕರಾದ ಡಾ. ಶೋಭಾರಾಣಿ ವಿ. ಜೆ, ಮಂಡ್ಯ ವಿಶ್ವವಿದ್ಯಾಲಯದ ಕುಲಸಚಿವರು( ಆಡಳಿತ) ಕೃಷ್ಣಕುಮಾರ್ ಎಂ.ಪಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

# ಕೆಂಪು ಬೊಟ್ಟಿನ ಹುಡುಗಿ



| ಪುಷ್ಪ ಪ್ರಸಾದ್

ನಾನು ಅವಳಿಗಾಗಿ ಕಾಯುತ್ತ ಕುಳಿತಿದ್ದೆ. ಜೋರಾಗಿ ಮಳೆ ಬರಲು ಶುರುವಾದಾಗಲೇ ಅವಳ ಕನಸುಗಳೂ ಸಹ ಮಳೆಯಲ್ಲಿ ತೋಯುತ್ತಿದ್ದದ್ದಂತೆ. ಇನ್ನೂ ಆ ಹುಡುಗಿ ಕೈ ಸೇರಿಲ್ಲವಲ್ಲ ಎನ್ನುತ್ತ ಕುಳಿತಿದ್ದಾಗ ಅವಳು ಕೈಸೇರಿದಳು. ಯಾರೆಂದು ಯೋಚಿಸುತ್ತಿರುವಿರಾ ಅವಳೇ ಕೆಂಪು ಬೊಟ್ಟಿನ ಹುಡುಗಿ.

ಯಾಕೆ ಇಷ್ಟು ಹೊತ್ತು ಕಾದೆ ಅವಳಿಗೆ ಎನ್ನುವುದಕ್ಕಿಂತ ಅವಳ ಹೆಸರಿನ ಖುಷಿ ಇತ್ತು. ಜೀವನವೆಂದರೆ ನಮ್ಮ ಸಂತೋಷಕ್ಕಾಗಿ ಮಾತ್ರ ಬದುಕುವುದಲ್ಲ. ನಮ್ಮಿಂದ ಸಂತೋಷವಾಗುವವರಿಗಾಗಿ ಬದುಕುವುದು. ಎಂದು ಎಲ್ಲೋ ಓದಿದ ಎರಡು ಸಾಲು ನೆನಪಾದಂತಿತ್ತು. ಇಷ್ಟು ಹೊತ್ತು ಕಾದ ಕ್ಷಣವೆಲ್ಲಾ ಅವಳ ಮುಂದೆ ಶೂನ್ಯವಾಗಿ ಕಾಣುವಂತಿತ್ತು. ಹೌದು ಈ ಕೆಂಪು ಬೊಟ್ಟಿನ ಹುಡುಗಿ ನನ್ನ ಗೆಳತಿ ಅನಿತಾ ಶೆಟ್ಟಿಯವರ ಕವನ ಸಂಕಲನ. ಆತ್ಮೀಯರಾದ ಅನಿತಾರವರು ಸದಾ ಲವಲವಿಕೆಯಿಂದ ಅನೇಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರು. ರಾಜ್ಯಮಟ್ಟದ ನೃತ್ಯ ಸ್ಪರ್ಧೆಯಲ್ಲಿ ನಾವಿಬ್ಬರೂ ಒಂದೇ ವೇದಿಕೆಯಲ್ಲಿ ಭಾಗವಹಿಸಿದವರು.

ಕೆಲವೊಂದು ಸಂದರ್ಭಗಳಲ್ಲಿ ನಮ್ಮ ಮನಸ್ಸನ್ನು ಹಿಡಿತದಲ್ಲಿಡಲು ಆಗಾಗ ಸೋತು ಹೋಗುವುದಂತೂ ನಿಜ. ಇದಕ್ಕೆ ಕಾರಣ ಮನಸ್ಸಿಗಾದ ಆಘಾತ, ಹೃದಯಕ್ಕಾದ ನೋವು, ಮನಸ್ಸು ತನ್ನ ಅಸ್ತಿತ್ವವನ್ನು ಕಳೆದುಕೊಂಡು ವಿಲ ವಿಲ ಒದ್ದಾಡುತ್ತಿರುತ್ತದೆ. ಹುಡುಕುತ್ತ ಹೋದರೆ ದಿನ ನಿತ್ಯದ ಜೀವನದಲ್ಲಿ ಬೇಕಾದಷ್ಟು ಸಿಗುತ್ತವೆ. ಕೆಲವನ್ನು ನಮ್ಮ ಕೆಲಸದ ಒತ್ತಡದಲ್ಲಿ ಮರೆತು ಬಿಡುತ್ತೇವೆ. ಇನ್ನು ಕೆಲವು ಆಗಾಗ ಮನಸ್ಸನ್ನು ಕುಟುಕುತ್ತಾ ಇರುತ್ತದೆ. ಮರೆಯಲು ಅಥವಾ ನಮ್ಮ ಮನಸ್ಸನ್ನು ಹಿಡಿತಕ್ಕೆ ತರಲು ಒದ್ದಾಡುವ ಪರಿಸ್ಥಿತಿ ನಿರ್ಮಾಣವಾಗಿಬಿಡುತ್ತದೆ. ಆಗೆಲ್ಲಾ ರಾತ್ರಿ ನಿದ್ದೆನೂ ಇಲ್ಲದೇ ಹಗಲು ನೆಮ್ಮದಿಯಿಂದ ಇರಲಾಗದೇ ಏನ್ಮಾಡ್ಲಿ, ಯಾರಲ್ಲಿ ಹೇಳಿಕೊಳ್ಳಲಿ ಎಂಬಂತಾಗುತ್ತದೆ. ಆದರೆ ಇದರ ಮೂಲ ಸಾಮಾನ್ಯವಾಗಿ ನಮಗೆ ಗೊತ್ತಾದರೂ ಇದರಿಂದ ಹೊರಗೆ ಬರುವ ದಾರಿ ನಾವು ಎಷ್ಟೋ ಬಾರಿ ಹುಡುಕುವ ಪ್ರಯತ್ನವನ್ನೇ ಮಾಡದೆ ಬರೀ ಚಿಂತಿಸುತ್ತ, ದುಃಖ ಪಡುತ್ತ, ಒಂದಷ್ಟು ಕಣ್ಣೀರು ಸುರಿಸುತ್ತ ಕಳೆದು ಬಿಡುತ್ತೇವೆ. ಕೆಲವನ್ನು ಆತ್ಮೀಯರಲ್ಲಿ ಹೇಳಿಕೊಳ್ಳಲೂ ಆಗುವುದಿಲ್ಲ. ಏಕೆಂದರೆ ತೀರಾ ವಯಕ್ತಿಕ ವಿಷಯ ಅದರಲ್ಲೂ ಮನೆಯ ಅಥವಾ ಕುಟುಂಬದ ವಿಷಯ ಹೇಳಲೂ ಆಗದೇ ನುಂಗಿಕೊಳ್ಳಲೂ ಆಗದೇ ಕೊನೆಗೆ ಆರೋಗ್ಯದ ಮೇಲೆ ಪರಿಣಾಮ ಬೀರುವ ಪರಿಸ್ಥಿತಿ. ಚಿತೆ ದೇಹ ಸುಟ್ಟರೆ ಚಿಂತೆ ಆರೋಗ್ಯವನ್ನು ಹದ ಗೆಡಿಸುವುದು ದಿಟ. ಎಷ್ಟೋ ಸಾರಿ ಒಂದು ರೀತಿ ಅನಾಥ ಭಾವ., ಬರೀ ಬರಿತೀನಿ, ಆದರೆ ತನ್ನ ಸಮಸ್ಯೆ, ಆತಂಕ, ಹೇಳಿಕೊಳ್ಳಲೇ ಬೇಕಾದ ಬರಹದ ಬಗೆಗಿನ ಮಾತುಗಳು, ಪ್ರಶ್ನೆಗಳು ಇವಕ್ಕೆಲ್ಲ ಸರಿಯಾಗಿ ಸಮರ್ಪಕವಾಗಿ ಉತ್ತರಿಸುವವರು ಒಬ್ಬರಾದರೂ ಇದ್ದಿದ್ದರೆ? ಆಗೆಲ್ಲ ತುಂಬಾ ತುಂಬಾ ಹತಾಷೆ, ಬೇಜಾರಾಗಿ ಅಳುತ್ತ ಕೂಡುವಂತಾಗುತ್ತದೆ. ಆಗ ನಮ್ಮ ಮನದ ಭಾವಗಳನ್ನು ಅಕ್ಷರ ರೂಪಕ್ಕೆ ಇಳಿಸುತ್ತೇವೆ. ಅಂತಹ ಭಾವನೆಗಳನ್ನೂ ಅನಿತಾ ಶೆಟ್ಟಿಯವರು ಈ ಕವನ ಸಂಕಲನದಲ್ಲಿ ಕವನಗಳ ಮೂಲಕ ಸ್ತ್ರೀಯಾಗಿ ಹೆಣ್ಣೊಬ್ಬಳ ನೋವು, ನಲಿವು, ಅಂತರಂಗದ ಚಿಂತೆಗಳು, ವಿಪ್ಲವಗಳು, ತಲ್ಲಣಗಳು ಎಲ್ಲವನ್ನು ಇಲ್ಲಿ ಕವನಗಳ ಮೂಲಕ ಬಣ್ಣಿಸಿದ್ದಾರೆ. ರವಿ ಕಾಣದ್ದನ್ನು ಕವಿ ಕಾಣುತ್ತಾನೆ ಎನ್ನುವ ಹಾಗೆ ಪರಿಸರ, ಸ್ತ್ರೀ ಭಾವದ ನೋವು ನಲಿವುಗಳು, ಸಮಾಜದ ದುಸ್ತರ, ವಿಸ್ತಾರ, ಬದುಕಿನ ಬವಣೆಗಳು, ಇಬ್ಬರ ನಡುವಿನ ಮೌನಕ್ಕೂ, ಮಾತು ಕಲಿಸುವವರ್ಯಾರೆಂಬ ಪ್ರಶ್ನೆ. ಪ್ರೀತಿಯೆಂದರೆ ಇದೇನಾ? ಪ್ರೀತಿಸುವವರಿಗೆ ಕೆಲವೊಮ್ಮೆ ಇಡೀ ಜಗತ್ತೂ ಸುಂದರವಾಗಿ ಕಾಣುತ್ತಂತೆ. ಒಂದಿಷ್ಟು ಪ್ರೀತಿ ಪ್ರೇಮದ ಪರಿ, ಸಂತೋಷ ಎಲ್ಲವನ್ನು ಅಕ್ಷರ ರೂಪದಲ್ಲಿ ಬರೆದು ಕವನಗಳ ಮೂಲಕ ಅರಳಿಸಿದ್ದಾರೆ. ಮನಸ್ಸಿಗೆ ಒಗ್ಗದ ಇನ್ನೊಂದು ಮನಸ್ಸಿನ ಮಾತಿನ ಸುಳಿಯಲ್ಲಿ ಸಿಲುಕಿ ಹೀಗೆ ಆಗುವುದು ಅಥವಾ ಆತ್ಮೀಯ ಸ್ನೇಹಿತರೊ, ಇಲ್ಲಾ ಮನೆ ಜನ ಇಲ್ಲಾ ಕುಟುಂಬ ವರ್ಗದವರಲ್ಲಿ ನಡೆಯುವ ಮಾತುಗಳು ನಮ್ಮ ಕಿವಿಗೆ ಬಿದ್ದಾಗ ಕುಟುಕಿದಂತಾಗಿ ನೆಮ್ಮದಿ ಕಳೆದುಕೊಂಡು ಬಿಡುತ್ತೇವೆ. ಸಂಬಂಧಿಕರು, ಕುಟುಂಬದವರು ಅಥವಾ ಮನೆ ಜನವಾದರೆ ಮೌನ ತಾಳದೇ ಒಂದಷ್ಟು ಚರ್ಚೆ ಮಾಡದೇ ಗತಿ ಇಲ್ಲ. ಅಂತಹವರನ್ನು ದೂರ ಇಡಲೂ ಆಗದೇ ಅವರ ಪರಿಧಿಯಲ್ಲಿ ಇರಲೂ ಆಗದೇ ಮನಸ್ಸಿಗೆ ಇರುಸು ಮುರುಸಾಗುವು ದಿಟ. ಒಮ್ಮೊಮ್ಮೆ ಮುಂಜಾವಿನ ಮಗ್ಗುಲಲ್ಲೇ ತನ್ನದೊಂದೆಲ್ಲಿಡಲೆಂಬ ಹಪಹಪಿ ಈ ಹನಿ ಮಳೆಗೆ. ಕೈ ಬಿಡುವಿಲ್ಲದ ಧಾವಂತದ ದಿನಗಳು ಈ ಸನ್ನಿವೇಶ. ಬದುಕನ್ನು ನಾವು ಯಾವ ರೀತಿ ನೋಡುತ್ತೀವೊ ಅದರಲ್ಲಿ ನಮ್ಮ ನೆಮ್ಮದಿ ಅಡಗಿದೆ. ಸಿಗಲಾರದ್ದಕ್ಕೆ ಪರಿತಪಿಸುತ್ತ ವ್ಯಥೆ ಪಡುವುದಕ್ಕಿಂತ ಸಿಕ್ಕಿದ್ದನ್ನೇ ಸ್ವೀಕರಿಸಿ ಅನುಭವಿಸುವುದರಲ್ಲಿ ಹೆಚ್ಚಿನ ಸಂತೋಷವಿದೆ. ಸುಂದರ ಬದುಕೆನ್ನುವುದು ಒಂದು ಕಲ್ಪನೆಯಷ್ಟೇ. ಆದರೆ ನಿಜವಾದ ಬದುಕು ಕಲ್ಪನೆಗಿಂತಲೂ ಸುಂದರವಾಗಿರುತ್ತದೆ.

ವೃತ್ತಿಯಲ್ಲಿ ಶಿಕ್ಷಕರು ಆಗಿರುವಂತಹ ಶ್ರೀಮತಿ ಅನಿತಾ ಶೆಟ್ಟಿ ಮೂಡುಬಿದ್ರೆ ಇವರು ಪ್ರವೃತ್ತಿಯಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಅಪಾರ ಆಸಕ್ತಿಯನ್ನು ಹೊಂದಿದವರು. ಸಾಹಿತ್ಯ ಕ್ಷೇತ್ರದಲ್ಲಿ ಹಲವಾರು ಪ್ರಶಸ್ತಿಗಳನ್ನು ತಮ್ಮ ಮುಡಿಗೇರಿಸಿ ಕೊಂಡವರು. ಹಲವಾರು ಸನ್ಮಾನಗಳಿಗೂ ಭಾಜನರಾದವರು. ಸಾಹಿತ್ಯ ಮಾತ್ರವಲ್ಲದೇ, ನಾಟಕ, ನೃತ್ಯ, ರೂಪಕ, ಏಕಪಾತ್ರ ಅಭಿನಯ ಇನ್ನೂ ಹಲವಾರು ಆಸಕ್ತಿಗಳನ್ನು ತನ್ನೊಳಗೆ ಬೆಳೆಸಿ ಕೊಂಡವರು. ಜೊತೆಗೆ ಅತ್ಯುತ್ತಮ ನಿರೂಪಕರು, ಹಲವಾರು ಕಾರ್ಯಕ್ರಮದಲ್ಲಿ ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ಅನುಭವ ಉಳ್ಳವರು. ತಮ್ಮ ವೃತ್ತಿ ಜೀವನ ಹಾಗೂ ಕುಟುಂಬ ನಿರ್ವಹಣೆಯ ಜೊತೆಗೆ ತಮ್ಮಲ್ಲಿರುವ ಪ್ರತಿಭೆಯನ್ನು ಎಲ್ಲೂ ಬಿಟ್ಟು ಕೊಡದೆ ಆಸಕ್ತಿಯಿಂದ ದೈನಂದಿನ ಬದುಕಿನ ಜೊತೆಗೆ ಮೈಗೂಡಿಸಿಕೊಂಡು ಸದಾ ಲವಲವಿಕೆಯಿಂದ ಕೂಡಿರುವ ಇವರ ಬದುಕು ಸಮಾಜಕ್ಕೆ ಸ್ಫೂರ್ತಿ. ಅಲ್ಲದೇ ಇವರು ಆಮಂತ್ರಣ ಸಾಂಸ್ಕೃತಿಕ ಹಾಗೂ ಸಾಹಿತ್ಯ ವೇದಿಕೆ ದಕ್ಷಿಣ ಕನ್ನಡ ಜಿಲ್ಲಾ ಉಪಾಧ್ಯಕ್ಷರು ಕೂಡ ಹೌದು. ಈ ಕೆಂಪು ಬೊಟ್ಟಿನ ಹುಡುಗಿಯ ಬಗ್ಗೆ ಎಷ್ಟು ಹೇಳಿದರೂ ಸಾಕಾವುದಿಲ್ಲ, ಅದರೊಳಗಿನ ಎಲ್ಲಾ ಕವನಗಳನ್ನು ಆಸ್ವಾದಿಸಿದರೆ ತಿಳಿಯುವುದು ಅದರ ರುಚಿ. ಗೆಳತಿ ಅನಿತಾ ಶೆಟ್ಟಿಯವರಿಂದ ಮತ್ತಷ್ಟು ಕೃತಿಗಳು ಹೊರಬಂದು ಕನ್ನಡದ ಕಂಪನ್ನು ಹೆಚ್ಚಿಸಲಿ.

**ಕೆಂಪು ಬೊಟ್ಟಿನ ಹುಡುಗಿ ಕೃತಿ ಬೇಕಾದವರು ಇವರನ್ನ ಸಂಪರ್ಕಿಸಬಹುದು, ಬೆಲೆ : 150/-.**



# ಬಣ್ಣಗಳ ಹಬ್ಬ ಹೋಳಿ



| ವೀಣಾ ಹೇಮಂತ್‌ಗೌಡ ಪಾಟೀಲ್

ಒಂದು ಕ್ಷಣ ಕಣ್ಣು ಮುಚ್ಚಿಕೊಂಡು ಈ ಜಗತ್ತನ್ನು ಕಲ್ಪನೆ ಮಾಡಿಕೊಳ್ಳಿ ಎಲ್ಲವೂ ಕೇವಲ ಬಿಳಿ ಇಲ್ಲವೇ ಕೇವಲ ಕಪ್ಪು ಬಣ್ಣವನ್ನು ಹೊಂದಿದ್ದರೆ ಹೇಗಿರುತ್ತದೆ ಎಂದು???. ಬೆಳ್ಳನೆಯ ಮೋಡ, ಬೆಳ್ಳನೆಯ ವಿಶಾಲ ಸಮುದ್ರ, ಬೆಳ್ಳನೆಯ ಗಿಡ ಮರಗಳು, ಬೆಳ್ಳನೆಯ ರಸ್ತೆಗಳು, ಬೆಳ್ಳನೆಯ ದೇಹದ ಆಕೃತಿಗಳು ಅಬ್ಬಬ್ಬಾ ಯಾವುದೂ ಚೆನ್ನಾಗಿರುವುದಿಲ್ಲ. ಅಷ್ಟರಲ್ಲಿಯೇ ಕಪ್ಪು ಮತ್ತು ಬಿಳಿ ಎರಡು ಬಣ್ಣಗಳನ್ನು ಕೂಡಿಸಿದ ಬಣ್ಣ ತುಸು ಹೆಚ್ಚೇ ಮನಮೋಹಕ ಎನಿಸುತ್ತದೆ.

ಆದರೆ ಹಲವಾರು ಬಣ್ಣಗಳನ್ನು ಹೊಂದಿರುವ ಈ ಪ್ರಕೃತಿ ಅತ್ಯಂತ ಸುಂದರ, ನಯನ ಮನೋಹರವಾಗಿರುತ್ತದೆ. ಬಣ್ಣವಿಲ್ಲದ ಬದುಕು ಬರಡು ಎನಿಸುತ್ತದೆ. ಆಕಾಶದಲ್ಲಿ ತಿಳಿ ನೀಲಿ ಮೋಡಗಳು ಮತ್ತು ಕಪ್ಪು ಮೋಡಗಳು, ಹಸಿರು ಹಾಸಿದ ಗಿಡಮರಗಳು, ಆಕಾಶದ ನೀಲಿಯನ್ನೇ ಹೊದ್ದ ತಿಳಿ ನೀಲ ಸಾಗರ, ಕಪ್ಪನೆಯ ಟಾರು ರಸ್ತೆಗಳು, ಬೆಳ್ಳನೆಯ ಬೆಳ್ಳಕ್ಕಿಗಳು, ವಿಧವಿಧ ಬಣ್ಣದ ಪಕ್ಷಿಗಳು, ಪ್ರಾಣಿಗಳು ಹೀಗೆ ಬಣ್ಣಮಯ ಲೋಕ ನಮ್ಮದು. ಈ ಬಣ್ಣ ಬಣ್ಣದ ಲೋಕವನ್ನು ಬಣ್ಣಿಸಲು ಪದಗಳು ಸಾಲದಾಗುತ್ತವೆ ಎಂದರೆ ಅದು ಅತಿಶಯೋಕ್ತಿಯೇನಲ್ಲ!!

ಬಣ್ಣಗಳು ಕೂಡ ನಮ್ಮ ಮನಸ್ಸಿನ ಭಾವಗಳನ್ನು ಸೂಚಿಸುತ್ತವೆ. ನಮ್ಮ ಮನಸ್ಸು ಅತ್ಯಂತ ಉದಾಸ ಸ್ಥಿತಿಯಲ್ಲಿದ್ದಾಗ ಊದಾ ಬಣ್ಣದ ಗೋಡೆಗಳು ಇಷ್ಟವಾದರೆ ತಿಳಿ ನೀಲಿ ಮತ್ತು ತಿಳಿ ಹಸಿರು ಬಣ್ಣ ಕಣ್ಣಿಗೆ ಮತ್ತು ಮನಸ್ಸಿಗೆ ಹಿತವನ್ನು ನೀಡುತ್ತವೆ. ಕೆಂಪು ಗುಲಾಬಿಯ ಬಣ್ಣ ಪ್ರೀತಿಯ ದ್ಯೋತಕವಾದರೆ ಬಿಳಿ ಶಾಂತಿಯ ಸೂಚಕ. ಹಳದಿ ಬಣ್ಣ ಸ್ನೇಹವನ್ನು ಸೂಚಿಸಿದರೆ ಹಸಿರು ಸಮೃದ್ಧಿಯ ಸಂಕೇತ. ಹಲವಿಧದ ಬಣ್ಣಗಳನ್ನು ತನ್ನ ಗರಿಗಳಲ್ಲಿ ಅಡಗಿಸಿಕೊಂಡಿರುವ ನವಿಲು ನಮ್ಮ ರಾಷ್ಟ್ರ ಪಕ್ಷಿ. ಬಣ್ಣಗಳು ಭಾವನೆಗಳನ್ನು ಅರಳಿಸುತ್ತವೆ.... ಅಂತೆಯೇ ಬಣ್ಣದ ಹಬ್ಬವು ಕೂಡ. ಕೆಲ ಹಬ್ಬಗಳಲ್ಲಿ ಧಾರ್ಮಿಕ ವಿಧಿ ವಿಧಾನಗಳು ಪ್ರಮುಖ ಪಾತ್ರವನ್ನು ವಹಿಸಿದರೆ ಮತ್ತೆ ಕೆಲ ಹಬ್ಬಗಳಲ್ಲಿ ನಮ್ಮಲ್ಲಿ ಅಡಗಿ ಕುಳಿತಿರುವ ತುಂಟತನ, ಪೋಲಿತನಗಳನ್ನು ಹೊರ ಹಾಕುವ ಹಬ್ಬವಾಗಿರುತ್ತದೆ.

ಪ್ರತಿ ವರ್ಷ ಹೋಳಿ ಹುಣ್ಣಿಮೆಯ ಆಸುಪಾಸಿನಲ್ಲಿ ಜರುಗುವ ಈ ಬಣ್ಣದ ಹಬ್ಬ ನಮ್ಮ ಬದುಕಿಗೆ ನವ ಚೈತನ್ಯವನ್ನು ತರುತ್ತದೆ ಎಂದರೇ ಅಚ್ಚರಿಯೇನಲ್ಲ.

ಪೌರಾಣಿಕ ಐತಿಹ್ಯಗಳ ಪ್ರಕಾರ ಶಿವನ ಪತ್ನಿಯಾದ ಸತಿ ದೇವಿಯು ತನ್ನ ತಂದೆ ದಕ್ಷ ರಾಜನು ನಡೆಸುತ್ತಿದ್ದ ಯಜ್ಞಕ್ಕೆ ಆಹ್ವಾನವಿಲ್ಲದೆ ಹೋಗುವುದು ಬೇಡ ಎಂಬ ಗಂಡನ ಆಣತಿಯನ್ನು ಮೀರಿ ತವರು ಮನೆಯ ಕಾರ್ಯಕ್ರಮವೆಂದು ಹೋಗಿ ಅಲ್ಲಿ ತನ್ನ ತಂದೆಯಿಂದಲೇ ಅವಮಾನಿತಳಾಗಿ ಯಜ್ಞ ಕುಂಡದಲ್ಲಿ ಹಾರಿ ಪ್ರಾಣ ಬಿಡುತ್ತಾಳೆ. ಪತ್ನಿಯನ್ನು ಕಳೆದುಕೊಂಡ ಮಹಾದೇವ ರೌದ್ರಾವೇಶದಿಂದ ಆಕೆಯ ದೇಹವನ್ನು ಹೊತ್ತು ತಿರುಗುತ್ತಿದ್ದಾಗ ಆತನ ಆವೇಶಕ್ಕೆ ಇಡೀ ಪ್ರಪಂಚ ನಡುಗುತ್ತಿತ್ತು. ಶಿವನ ಕೋಪವು ವೈಪರೀತ್ಯಕ್ಕೆ ತಿರುಗಬಾರದು ಎಂಬ ಕಾರಣದಿಂದ ಮಹಾವಿಷ್ಣು ತನ್ನ ಸುದರ್ಶನ ಚಕ್ರವನ್ನು ಬಳಸಿ ಸತಿ ದೇವಿಯ ದೇಹವನ್ನು ಛಿದ್ರಗೊಳಿಸಿದನು. ಈಗಾಗಲೇ ಸುಟ್ಟು ಹೋದ ಆಕೆಯ ದೇಹದ ಭಾಗಗಳು ಅಖಂಡ ಭಾರತದ 54 ಸ್ಥಳಗಳಲ್ಲಿ ಬೀಳಲ್ಪಟ್ಟು 54 ಶಕ್ತಿ ಪೀಠಗಳು ಆವಿರ್ಭವಿಸಿದವು. ಮಹಾವಿಷ್ಣು ಶಿವನನ್ನು ಶಾಂತಗೊಳಿಸಿದ ನಂತರ ಇವನು ಉಗ್ರ ತಪಸ್ಸನ್ನು ಆಚರಿಸಲು ಹೊರಟು ಹೋದನು. ಅದಕ್ಕೂ ಮುನ್ನ ತಾರಕಾಸುರನು ಭೋಲಾಶಂಕರನ ಏಳು ದಿನದ ಮಗುವಿನಿಂದ ಮಾತ್ರ ತನಗೆ ಮರಣ ಬರಲಿ ಎಂದು ಬ್ರಹ್ಮದೇವನಿಂದ ವರ ಪಡೆದಿದ್ದನು. ಭಕ್ತ ಪ್ರಿಯ ಬ್ರಹ್ಮನು ತಥಾಸ್ತು ಎಂದು ಹೇಳಿಯೂ ಆಗಿತ್ತು. ನಂತರ ತಾರಕಾಸುರನ ಕೋಟಲೆಗಳು ಒಂದಲ್ಲ ಎರಡಲ್ಲ ಇಡೀ ಪೃಥ್ವಿಯ ಜನರನ್ನು ಆತ ಅತ್ಯಂತ ಕ್ರೂರವಾಗಿ ಕಾಡಲಾರಂಭಿಸಿದನು. ದೇವತೆಗಳಿಗೂ ಆತನ ಕಾಟದ ಬಿಸಿ ತಗುಲಿದಾಗ ಅವರೆಲ್ಲರೂ ಸೇರಿ ಬ್ರಹ್ಮ ಮತ್ತು ವಿಷ್ಣುವನ್ನು ಭೇಟಿಯಾಗಿ ತಮ್ಮ ಸಂಕಷ್ಟವನ್ನು ಹೇಳಿಕೊಂಡರು.ಇದೀಗ ಬ್ರಹ್ಮ ವಿಷ್ಣು ಮತ್ತು ದೇವತೆಗಳು ಸೇರಿ ಘೋರ ತಪಸ್ಸಿನಲ್ಲಿ ನಿರತನಾದ ಶಿವನ ವಿವಾಹವನ್ನು ಹಿಮವಂತ ಮತ್ತು ಮೇನಾ ದೇವಿಯರ ಪುತ್ರಿ ಗಿರಿಜಾದೇವಿಯೊಂದಿಗೆ ಮಾಡುವ ಆಶಯಕ್ಕೆ ಬೆಂಬಲವಾಗಿ ಶಿವನನ್ನು ಎಚ್ಚರಿಸುವ ಮಹಾ ಕಾರ್ಯಕ್ಕೆ ಕಾಮದ ಅಧಿದೇವತೆಯಾದ ಮನ್ಮಥನಿಗೆ ಒಪ್ಪಿಸಿದರು. ಶಿವನನ್ನು ಎಚ್ಚರಗೊಳಿಸುವ ಈ ಮಹಾಮಣಿಹದಲ್ಲಿ ತನ್ನ ಪ್ರಾಣ ಹೋಗುವದೆಂಬ ಅರಿವಿದ್ದರೂ ಕೂಡ ಲೋಕ ಕಲ್ಯಾಣಕ್ಕಾಗಿ ಈ ಕಾರ್ಯವನ್ನು ಒಪ್ಪಿಕೊಂಡ ಕಾಮದೇವನು ತನ್ನ ಪತ್ನಿ ರತಿದೇವಿಯೊಂದಿಗೆ ಶಿವನು ತಪಸ್ಸು ಮಾಡುತ್ತಿದ್ದ ಸ್ಥಳಕ್ಕೆ ಬಂದು ಅಲ್ಲೊಂದು ಸುಂದರ ಲೋಕವನ್ನು ಸೃಷ್ಟಿಸಿ ಪತ್ನಿಯೊಂದಿಗೆ ಮೋಹಕವಾಗಿ ನೃತ್ಯ ಮಾಡಿ ಶಿವನ ಮನಸ್ಸನ್ನು ತಣಿಸಲು ಪ್ರಯತ್ನಿಸಿದನು. ಕಾಮದೇವ ಮತ್ತು ರತಿದೇವಿಯರ ಸಾಕಷ್ಟು ಪ್ರಯತ್ನದ ನಂತರ ಕೂಡ ಶಿವ ಎಚ್ಚರಗೊಳ್ಳದೆ ಹೋದಾಗ ಅಂತಿಮ ಪ್ರಯತ್ನವಾಗಿ ಕಾಮದೇವನು ಪುಷ್ಪ ಬಾಣವನ್ನು ಶಿವನೆಡೆಗೆ ಬಿಟ್ಟನು. ಪುಷ್ಪಬಾಣ ಸೋಕಿದ ಶಿವನು ಎಚ್ಚರಗೊಂಡು ತನ್ನ ತಪಸ್ಸನ್ನು ಕೆಡಿಸಲು ಯತ್ನಿಸಿದ ಕಾಮದೇವನನ್ನು ತನ್ನ ಮೂರನೇ ಕಣ್ಣ ತೆರೆದು ಸುಟ್ಟುಬಿಟ್ಟನು. ಆಗ ಅಲ್ಲಿಯೇ ಇದ್ದ ರತಿ ದೇವಿಯು ಲೋಕ ಕಲ್ಯಾಣಕ್ಕಾಗಿ ದೇವತೆಗಳ ಆಗ್ರಹದ ಮೇರೆಗೆ ತನ್ನ ಪತಿ ಈ ಕಾರ್ಯಕ್ಕೆ ಎಳಸಿದನೆಂದು ತನಗೆ ಪತಿ ಭಿಕ್ಷೆ ನೀಡಬೇಕೆಂದು ಶಿವನನ್ನು ಕೇಳಿಕೊಂಡಳು. ಆಗ ಶಿವನು ಕಾಮದೇವನು ಆಕೆಯ ಕಣ್ಣಿಗೆ ಮಾತ್ರ ಕಾಣುವಂತೆ ವರ ನೀಡಿ ಇಡೀ ಲೋಕದ ಪಾಲಿಗೆ ಮನ್ಮಥನು ಅನಂಗನಾಗಿ ಇರುವಂತೆ ವರ ನೀಡಿದನು. ಈ ಆನಂಗ ವ್ಯಕ್ತಿತ್ವವೇ ನಮ್ಮ ನಿಮ್ಮೊಳಗಿರುವ ಕಾಮ. ಕಾಮ ಎಂದರೆ ಕೇವಲ ದೈಹಿಕ ಲಾಲಸೆಯಲ್ಲ ಅದು ನಮ್ಮನಿಮ್ಮೊಳಗೆ ಅಡಗಿರುವ ಆಸೆಯ ಮೂರ್ತ ರೂಪ. ಅರಿಷಡ್ವರ್ಗಗಳಲ್ಲಿ ಒಂದಾಗಿರುವ ಈ ಕಾಮ ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಇರುತ್ತದೆ. ಅಂತಹ ಕಾಮದ ಕೆಟ್ಟತನವನ್ನು, ಅತಿ ಆಸೆಯನ್ನು ಪ್ರತಿವರ್ಷ ಶಿಶಿರ ಮಾಸದ ಹುಣ್ಣಿಮೆಯ ದಿನದಂದು ಕಟ್ಟಿಗೆಯ ರೂಪದಲ್ಲಿ ಸುಟ್ಟು ಹಾಕುವ ಮೂಲಕ ಕಾಮದಹನವನ್ನು ನಾವು ಆಚರಿಸುತ್ತೇವೆ. ಈ ಸಮಯದಲ್ಲಿ ಕೆಟ್ಟ ಕೆಟ್ಟ ಬೈಗುಳಗಳು, ಪೋಲಿ ಮಾತುಗಳನ್ನು ಕೂಡ ಆಡಿ ತೀಟೆ ತೀರಿಸಿಕೊಳ್ಳುವ ಸಂಪ್ರದಾಯ ಇದೆ. ಲಬೋ ಎಂದು ಬಾಯಿಗೆ ಕೈಯಿಟ್ಟು ಬಾಯಿ ಬಡೆದುಕೊಳ್ಳುವ ಆ ಮೂಲಕ ಕಾಮದಹನವನ್ನು ಆಚರಿಸುವ ಪ್ರಕ್ರಿಯೆ ನಮ್ಮ ಉತ್ತರ ಕರ್ನಾಟಕದ ಭಾಗದಲ್ಲಿ ಪ್ರಚಲಿತವಾಗಿದೆ.

ನಾವು ಚಿಕ್ಕವರಿದ್ದಾಗ ನನ್ನ ಅಣ್ಣಂದಿರು ತಮ್ಮದೇ ಒಂದು ತಂಡ ಕಟ್ಟಿಕೊಂಡು ಮನೆ ಮನೆಯಲ್ಲಿ ಕಾಮಣ್ಣನ ಪಟ್ಟಿಯನ್ನು ಸಂಗ್ರಹಿಸಿ ಅದರ ಜೊತೆಗೆ ಉರುವಲುಗಳನ್ನು ಕೂಡ ಮನೆ ಮನೆಗಳಿಂದ ಪಡೆಯುತ್ತಿದ್ದರು. ಅವರೊಂದಿಗೆ ನಾವು ಚಿಕ್ಕ ಹೆಣ್ಣು ಮಕ್ಕಳು ಕೂಡ ಜೊತೆಗೂಡುತ್ತಿದ್ದೆವು. ಇದರ ಜೊತೆಗೆ ಮನೆಯ ಹಿತ್ತಲಿನಲ್ಲಿ ಇರುತ್ತಿದ್ದ ಸಣ್ಣ ಪುಟ್ಟ ಮರದ ನಿರುಪಯುಕ್ತ ಪೀಠೋಪಕರಣಗಳ ತುಂಡುಗಳನ್ನು, ರಟ್ಟಿನ ಡಬ್ಬಿಗಳನ್ನು ಮತ್ತಿತರ ಉರುವಲು ಸಾಮಗ್ರಿಗಳನ್ನು ಕದ್ದು ಈ ಕಾಮ ದಹನದ ಕಾರ್ಯಕ್ಕೆ ಬಳಸುತ್ತಿದ್ದೆವು. ಹೀಗೆ ತಂದ ವಸ್ತುಗಳನ್ನು ಕಾಮದಹನಕ್ಕೆ ಸಜ್ಜಾಗಿದ ಅಂಗಳದಲ್ಲಿ ಸೇರಿಸಿ ಅದರ ಮೇಲೆ ತೆಂಗಿನ ಗರಿಗಳನ್ನು ಉದ್ದಕ್ಕೆ ಸೇರಿಸಿ ಮುಚ್ಚಿ ಬಿಡುತ್ತಿದ್ದೆವು. ಹುಣ್ಣಿಮೆಯ ದಿನ ರಾತ್ರಿ ಕಾಮನ ಪೂಜೆಯನ್ನು ಮಕ್ಕಳಲ್ಲಿ ಒಬ್ಬರು ಶಾಸ್ತ್ರೋಕ್ತವಾಗಿ ಮಾಡಿ ತಮಟೆಯ ಸದ್ದಿನ ನಡುವೆ ಕಾಮಣ್ಣನನ್ನು ಸುಡುವ ಮೂಲಕ ಆಚರಿಸುತ್ತಿದ್ದೆವು.

ಮರುದಿನ ಮುಂಜಾನೆ ಈ ಕಾಮನನ್ನು ಸುಟ್ಟ ಕೆಂಡದಿಂದಲೇ ಪ್ರತಿ ಮನೆಯಲ್ಲಿಯೂ ಒಲೆ ಹಚ್ಚಿ ಅಡುಗೆ ಮಾಡುತ್ತಾರೆ ಹಾಗೆ ಒಲೆ ಇಲ್ಲದವರು ಕಾಮಣ್ಣನನ್ನು ಸುಡಲು ಬಳಸಿದ ಕಟ್ಟಿಗೆಯ ಕೆಂಡವನ್ನು ತಂದು ನೀರು ಕಾಯಿಸುವ ಒಲೆಗೆ ಹಾಕಿ ನೀರು ಕಾಯಿಸಿ ಆ ನೀರಿನಲ್ಲಿ ಸ್ನಾನ ಮಾಡುತ್ತಾರೆ. ಈ ಕೆಲಸವನ್ನು ಮನೆಯ ಅಮ್ಮ,ಅಜ್ಜಿಯಂದಿರು ಮಾಡಿದರೆ... ಅಪ್ಪ ಹಿಂದಿನ ದಿನವೇ ಅಂಗಡಿಯಿಂದ ತಂದ ಬೇರೆ ಬೇರೆ ಬಣ್ಣಗಳನ್ನು ಬೇರೆ ಬೇರೆಯಾಗಿಯೇ ಬಕೀಟುಗಳಲ್ಲಿ ಕಲಸಿ ವಿವಿಧ ಬಾಟಲಿಗಳಿಗೆ ತುಂಬಿ ಕೊಡುತ್ತಿದ್ದರು. ತುಸು ಹಳೆಯದಾದ ಬಟ್ಟೆಗಳನ್ನು ತೊಟ್ಟ ಮಕ್ಕಳು ಬಣ್ಣದ ಬಾಟಲಿಗಳನ್ನು,ಪಿಚಕಾರಿಗಳನ್ನು ಹಿಡಿದುಕೊಂಡು ಬೇರೆಯವರ ಮೇಲೆ ಬಣ್ಣವನ್ನು ಎರಚುತ್ತಾ ಖುಷಿಯಿಂದ ಕೇಕೆ ಹಾಕುತ್ತಾ ಮನೆಯ ಸುತ್ತ ಬೇರೆ ಬೇರೆ ಓಣಿಗಳಲ್ಲಿ ಓಡಾಡಿ ಬಣ್ಣ ಎರಚಿ ಸಂಭ್ರಮಿಸುತಿದ್ದರು. ಇನ್ನು ತುಸು ದೊಡ್ಡವರು ಬಣ್ಣದ ಒಣ ಪುಡಿಗಳನ್ನು ಜೇಬಿನಲ್ಲಿ ಇಟ್ಟುಕೊಂಡು ಸ್ನೇಹಿತರಿಗೆ ಮತ್ತು ಪರಿಚಿತರಿಗೆ ಬಣ್ಣವನ್ನು ಹಚ್ಚಿ ಖುಷಿಪಡುತ್ತಿದ್ದರು ಕೆಲವೊಮ್ಮೆ ಜಗಳವಾಡಿ ಮಾತು ಬಿಟ್ಟ ಸ್ನೇಹಿತರು ಕೂಡ ಹೋಳಿ ಹಬ್ಬದ ಈ ಸಮಯದಲ್ಲಿ ಒಬ್ಬರಿಗೊಬ್ಬರು ಬಣ್ಣ ಹಚ್ಚುವ ಮೂಲಕ ಮತ್ತೆ ಒಂದಾಗುತ್ತಿದ್ದರು. ಮಧ್ಯಾಹ್ನದವರಿಗೂ ಬಣ್ಣದ ಆಟವನ್ನು ಆಡಿ ಮನೆಗೆ ಬರುತ್ತಿದ್ದ ಮಕ್ಕಳಿಗೆ ಎಣ್ಣೆ ಹಚ್ಚಿ ಬಣ್ಣ ಹೋಗುವಂತೆ ತಿಕ್ಕಿ ಸ್ನಾನ ಮಾಡಲು ಹೇಳಿದರೆ ದೊಡ್ಡ ಮಕ್ಕಳು ಹತ್ತಿರದ ಹೊಳೆ ಹಳ್ಳಗಳಿಗೆ ಬಟ್ಟೆ ತೆಗೆದುಕೊಂಡು ಸ್ನಾನಕ್ಕೆ ಹೋಗುತ್ತಾರೆ. ಹೊಯ್ಕೊಂಡ ಬಾಯಿಗೆ ಹೋಳಗಿ ತುಪ್ಪ ಎಂಬಂತೆ ತಾಯಂದಿರು ಹೋಳಿಗೆಯನ್ನು ಮಾಡಿ ಮಿಂದು ಬಂದ ಮಕ್ಕಳಿಗೆ ಉಣಬಡಿಸುತ್ತಾರೆ.

ಬದಲಾದ ಇಂದಿನ ಕಾಲಘಟ್ಟದಲ್ಲಿ ಹೋಳಿ ಹುಣ್ಣಿಮೆಯ ಸಂಭ್ರಮ ಮರೆಯಾಗಿದ್ದರೂ ಬಣ್ಣದ ಹಬ್ಬ ತನ್ನ ರಂಗನ್ನು ಉಳಿಸಿಕೊಂಡಿದೆ. ಆಧುನಿಕ ಯುಗದಲ್ಲಿ ಅನೇಕ ರೀತಿಯ ಬಣ್ಣದ ಪಿಚಕಾರಿಗಳು ಬಂದಿದ್ದು ಮಕ್ಕಳು ವಿವಿಧ ರಂಗುಗಳನ್ನು ಪರಸ್ಪರ ಎರಚಿ ಸಂತಸ ಪಡುತ್ತಾರೆ.

ಉತ್ತರ ಭಾರತದಲ್ಲಿ ಹೋಳಿ ಹಬ್ಬವನ್ನು ಹೋಲಿಕಾದಹನ ಮಾಡುವ ಮೂಲಕ ಆಚರಿಸುತ್ತಾರೆ ಅವರ ಪ್ರಕಾರ ರಾಕ್ಷಸ ಹಿರಣ್ಯಕಶಿಪುವಿನ ಮಗ ಪ್ರಹ್ಲಾದನು ಹರಿಯೇ ಸರ್ವೋತ್ತಮ, ಹರಿಯೇ ಜಗದೋದ್ಧಾರಕ ಎಂದು ತನ್ನ ತಂದೆಯ ಆಜನ್ಮ ವೈರಿ ಹರಿಯನ್ನು ಪೂಜಿಸುವುದನ್ನು ಕಂಡು ಕೋಪದಿಂದ ತನ್ನ ಮಗನನ್ನು ಸಾಯಿಸಲು ಹಲವಾರು ಬಾರಿ ಪ್ರಯತ್ನಿಸಿದನು. ಅಂತಹ ಒಂದು ಪ್ರಯತ್ನದ ಅಂಗವಾಗಿ ತನ್ನ ಸೋದರಿ ಹೋಲಿಕಾಳಿಗೆ ವರವಾಗಿ ದೊರೆತ ಸುಡದ ಅಂಗವಸ್ತ್ರವನ್ನು ಧರಿಸಿ ಪ್ರಹ್ಲಾದನನ್ನು ಬೆಂಕಿಯ ಬಾಯಿಯಲ್ಲಿ ದೂಡಲು ಆಕೆಗೆ ಕೇಳಿಕೊಂಡನು. ಅಣ್ಣನ ಮಾತನ್ನು ಮೀರದ ಹೋಲಿಕ ತನ್ನ ಅಂಗವಸ್ತ್ರವನ್ನು ಧರಿಸಿ ಪುಟ್ಟ ಪ್ರಹ್ಲಾದನನ್ನು ಎತ್ತಿಕೊಂಡು ಬೆಂಕಿಯಲ್ಲಿ ಪ್ರವೇಶಿಸಿದಳು. ಆದರೆ ಯಾವ ಮಾಯದಲ್ಲಿಯೋ ಆಕೆಯ ಅಂಗವಸ್ತ್ರವು ಆಕೆಯ ದೇಹದಿಂದ ಬಿದ್ದು ಹೋಗಿ ಆಕೆ ಸಜೀವವಾಗಿ ದಹನಗೊಂಡಳು, ಆದರೆ ಪುಟ್ಟ ಮಗು ಪ್ರಹ್ಲಾದ ಸೋಜಿಗವೆಂಬಂತೆ ಪಾರಾದನು. ಈ ದಿನ ಹೋಲಿಕ ಎಂಬ ಕಾಮನೆಯನ್ನು ಸುಟ್ಟು ಹಾಕುವ ಆಚರಣೆಯನ್ನು ಉತ್ತರ ಭಾರತೀಯರು ಮಾಡುತ್ತಾರೆ. ಹೋಲಿ ಹಬ್ಬ ಉತ್ತರ ಭಾರತೀಯರ ಪಾಲಿಗೆ ಅತಿ ದೊಡ್ಡ ಹಬ್ಬವಾಗಿದ್ದು ಹಾಡು, ಕುಣಿತ, ನೃತ್ಯ ಸಂಗೀತಗಳ ಜೊತೆ ಜೊತೆಗೆ ಭಾಂಗ್ ಎಂಬ ನಶೆಯ ಪೇಯವನ್ನು ಕೂಡ ಅವರು ಸೇವಿಸಿ ಮತ್ತರಾಗುತ್ತಾರೆ. ಇತ್ತೀಚಿಗಿನ ದಿನಗಳಲ್ಲಿ ಬಾಲಿವುಡ್ ನಲ್ಲಿ ಹೋಲಿ ಪಾರ್ಟಿ ಎಂದು ಚಿತ್ರರಂಗದ ಎಲ್ಲರನ್ನೂ ಆಮಂತ್ರಿಸಿ ದೊಡ್ಡ ರೀತಿಯಲ್ಲಿ ಈ ಹಬ್ಬವನ್ನು ಆಚರಿಸುತ್ತಾರೆ.

ಇನ್ನು ನರಸಿಂಹದೇವರ ದೇವಸ್ಥಾನವಿರುವ ಕಡೆಗಳಲ್ಲಿ ಹೋಳಿಹಬ್ಬವನ್ನು ಆಚರಿಸುವುದಿಲ್ಲ. ನರಸಿಂಹದೇವರ ದೇವಸ್ಥಾನವಿರುವ ಸುತ್ತಲ ಏಳು ಹಳ್ಳಿಗಳಲ್ಲಿ ಕಾಮದಹನ,ಬಾಯಿ ಬಡಿದುಕೊಳ್ಳುವ, ಕೆಟ್ಟ ಮಾತುಗಳನ್ನು ಹೇಳುವ ಯಾವುದೇ ಆಚರಣೆಗಳು ಇಲ್ಲ. ಜೊತೆಗೆ ಬಣ್ಣದ ಹಬ್ಬವು ಇಲ್ಲ. ಅದೆಷ್ಟೇ ಆಕರ್ಷಣೀಯವಾದರೂ ಬಣ್ಣದ ಈ ಹಬ್ಬವನ್ನು ಈ ಭಾಗಗಳಲ್ಲಿ ಆಚರಿಸುವುದಿಲ್ಲ. ಅಷ್ಟಾಗಿಯೂ ಆಚರಿಸಬೇಕೆಂಬ ಆಸಕ್ತಿಯುಳ್ಳವರು ತಮ್ಮ ಊರನ್ನು ಬಿಟ್ಟು ಬೇರೆ ಊರುಗಳಿಗೆ ಬಣ್ಣದ ಆಟ ಆಡಲು ತೆರಳುತ್ತಾರೆ.

ಇನ್ನು ಕೆಲ ಪ್ರದೇಶಗಳಲ್ಲಿ ಹೋಳಿ ಹುಣ್ಣಿಮೆಯ ದಿನ ಕಾಮ ಮತ್ತು ರತಿದೇವಿಯರನ್ನು ವಿಧ್ಯುಕ್ತವಾಗಿ ಪ್ರತಿಷ್ಠಾಪಿಸಿ ಪೂಜಿಸುತ್ತಾರೆ. ನಾಲ್ಕು ದಿನಗಳ ಕಾಲ ಕಾಮ ರತಿದೇವಿಯರನ್ನು ಪೂಜಿಸಿ 4ನೇ ದಿನ ರಾತ್ರಿ ಕಾಮದಹನವನ್ನು ಮಾಡುತ್ತಾರೆ. ಐದನೆಯ ದಿನ ಬಣ್ಣದ ಹಬ್ಬವನ್ನು ರಂಗ ಪಂಚಮಿ ಎಂದು ಆಚರಿಸುತ್ತಾರೆ.

ಜೀವಂತ ಕಾಮದೇವ ಮತ್ತು ರತಿದೇವಿಯರನ್ನು ಕೂಡ ಉತ್ತರ ಕರ್ನಾಟಕದ ಕೆಲ ಭಾಗಗಳಲ್ಲಿ ನೋಡಬಹುದು. ಕಣ್ಣು ಪಿಳುಕಿಸದೆ ಯಾವುದೇ ರೀತಿಯ ಚಟುವಟಿಕೆಗಳನ್ನು ಮಾಡದೆ ಅಲಂಕಾರಗೊಂಡ ಕಲಾವಿದರು ಗಂಟೆಗಟ್ಟಲೆ ಒಂದೇ ಭಂಗಿಯಲ್ಲಿ ಕುಳಿತುಕೊಳ್ಳುವುದನ್ನು ನೋಡಬಹುದು. ತಮ್ಮ ಮನೆಯ ಸೀರೆ ವಸ್ತ್ರಗಳನ್ನು ಕಾಮದೇವ ಮತ್ತು ರತಿದೇವಿಯರಿಗೆ ಹಾಕಿ ಸಂತೋಷ ಪಡುವ ಜನರು ಕೂಡ ಇದ್ದಾರೆ. ಇನ್ನು ಕೆಲವರು ತಮ್ಮ ಮನೆಯ ಚಿನ್ನದ ಆಭರಣಗಳನ್ನು ಕೂಡ ಕಾಮದೇವ ಮತ್ತು ರತಿ ದೇವಿಯರಿಗೆ ಅಲಂಕರಿಸಲು ಕೊಡುತ್ತಾರೆ. ಕಾಮದಹನದ ನಂತರ ತಮ್ಮ ವಸ್ತುಗಳನ್ನು ಮರಳಿ ಪಡೆಯುತ್ತಾರೆ. ಮದುವೆಯಾಗದ ಯುವಕ ಯುವತಿಯರು, ಮಕ್ಕಳಾಗದ ದಂಪತಿಗಳು ಕಾಮದೇವ ರತಿದೇವಿಯರಲ್ಲಿ ಪ್ರಾರ್ಥಿಸಿ ಹರಕೆ ಕಟ್ಟಿಕೊಳ್ಳುತ್ತಾರೆ. ಮುಂದೆ ಮದುವೆಯಾದ ನಂತರ,ಮಕ್ಕಳಾದ ನಂತರ ತಮ್ಮ ಹರಕೆಯನ್ನು ತೀರಿಸುತ್ತಾರೆ.

ಹಳೆಯ ಆಚರಣೆಗಳು ಮತ್ತು ಹೊಸ ಸಂಭ್ರಮಗಳ ಸಂಗಮದ ಈ ಹೋಲಿ ಹಬ್ಬ ನಮ್ಮೆಲ್ಲರ ಜೀವನದಲ್ಲಿ ಸುಖ ಸಮೃದ್ಧಿ ನೆಮ್ಮದಿಯನ್ನು ತರಲಿ ಎಂದು ಹಾರೈಸುವ





Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,